Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–20 | ಮೇ 13–19, 2024 | ಪುಟ 16 | ರೂ.10/–
Volume-18 | Issue-20 | May 13-19, 2024 | Pages:16 | Price: 10/-



ಮೋದಿ ಮತ್ತು ಸಂಪತ್ತಿನ 'ಮರು ಹಂಚಿಕೆ'



ವೇಮುಲಾ ಸಾವು ಸಾಂಸ್ಥಿಕ ಹತ್ಯೆಯಲ್ಲ...!!

ಪಶ್ಚಿಮ ಬಂಗಾಳ: ಧೈರ್ಯದಿಂದ ಹಕ್ಕನ್ನು ಚಲಾಯಿಸಿದ ಮತದಾರರು

ಮುಸ್ಲಿಮರ ಜನಸಂಖ್ಯೆ ಹಿಂದುಗಳಿಗಿಂತ ಭಾರಿ ಪ್ರಮಾಣದಲ್ಲಿ ಏರುತ್ತಿದೆಯೇ?

'ಎಕ್ಸಿಡಿ ಕ್ಲಚ್' ಕಾರ್ಮಿಕರ ಹೋರಾಟ ನಿರ್ಣಾಯಕ ಘಟ್ಟಕ್ಕೆ....

ಬಸವವಾದ ಮತ್ತು ಮಾರ್ಕ್ಸ್‌ವಾದ

ರಂಜಾನ್ ದರ್ಗಾ

ಇಡೀ ಮಾನವಕುಲ 'ಇವನಾರವ, ಇವನಾರವ' ಮತ್ತು 'ಇವ ನಮ್ಮವ, ಇವ ನಮ್ಮವ' ಎನ್ನುವವರ ಮಧ್ಯದ ಸಂಘರ್ಷವಾಗಿದೆ. ಧರ್ಮ ಸಿದ್ಧಾಂತವೇ ಇರಲಿ, ಇತರ ಸಿದ್ಧಾಂತಗಳೇ ಇರಲಿ, ಅವು ವಿಶಾಲಾರ್ಥದಲ್ಲಿ ಈ ಎರಡು ಗುಂಪಿನಲ್ಲಿ ಒಂದರ ಪರವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಬಸವವಾದ ಮತ್ತು ಮಾರ್ಕ್ಸ್‌ವಾದ "ಇವ ನಮ್ಮವ, ಇವ ನಮ್ಮವ" ಎಂಬ ಗುಂಪಿನಲ್ಲಿ ಬರುವಂಥವುಗಳಾಗಿವೆ. ಬಸವವಾದದ ಕಾಯಕ, ಪ್ರಸಾದ, ದಾಸೋಹ ಪರಿಕಲ್ಪನೆ ಮಾರ್ಕ್ಸ್ ವಾದದಲ್ಲಿ ಯೋಗ್ಯ ಉತ್ಪಾದನೆ, ಸದ್ಬಳಕೆ ಮತ್ತು ಯೋಗ್ಯ ಸಾಮಾಜಿಕ ವಿತರಣೆಯಾಗಿದೆ. "ಕಡ ಬಡ್ಡಿಯ ಕೊಡಲಾಗದು" ಎಂದು ಬಸವವಾದ ಹೇಳಿದರೆ, ಮಾರ್ಕ್ಸ್‌ವಾದ ಬಡ್ಡಿಯನ್ನು ನಿಷೇಧಿಸಿದೆ. ಬಸವಣ್ಣನವರ ಪರಿಕಲ್ಪನೆಯ ಸಮಾಜ ಶ್ರೀಮಂತರಿಲ್ಲದ ಶ್ರೀಮಂತ ಸಮಾಜ. ಮಾರ್ಕ್ಸ್ ಪರಿಕಲ್ಪನೆಯ ಸಮಾಜ ಕೂಡ ಶ್ರೀಮಂತರಿಲ್ಲದ ಶ್ರೀಮಂತ ಸಮಾಜವೇ ಆಗಿದೆ.

ಅಭಿಪ್ರಾಯ

ಯಾವುದೇ ವಾದ ಒಬ್ಬ ವ್ಯಕ್ತಿ ಅಥವಾ ಒಂದು ತಲೆಮಾರಿನಲ್ಲಿ ಸಿದ್ಧವಾಗುವಂಥದ್ದಲ್ಲ. ಇಲ್ಲಿ 'ವಾದ' ಎಂದರೆ ಸಕಾರಣಗಳೊಂದಿಗೆ ತರ್ಕಬದ್ಧವಾಗಿ ಪ್ರತಿಪಾದಿಸುವಂತಹ ಸಿದ್ಧಾಂತ. 'ಇಲ್ಲಿಯವರೆಗಿನ ಸಮಾಜಗಳ ಇತಿಹಾಸ ವರ್ಗ ಹೋರಾಟಗಳ ಇತಿಹಾಸವೇ ಆಗಿದೆ' ಎಂದು ಕಾರ್ಲ್ ಮಾರ್ಕ್ಸ್ ಹೇಳಿದ್ದಾರೆ. ಈ ವರ್ಗ ಹೋರಾಟದ ಸಿದ್ಧಾಂತ ರೂಪುಗೊಳ್ಳುವ ಪ್ರಕ್ರಿಯೆ ಮೊದಲಿನಿಂದ ಅಂತರ್ ಶಕ್ತಿಯಾಗಿದ್ದರೂ ವಿವಿಧ ಮಜಲುಗಳಲ್ಲಿ ಅದು ಗೋಚರಿಸಿದೆ. ಭಾರತದಲ್ಲಿ ಮನುವಾದಿ ಶಕ್ತಿಗಳ ವಿರುದ್ಧ ಮೊದಲಿಗೆ ಹೋರಾಡಿದವರು ಲೋಕಾಯತರು. ವೈಚಾರಿಕ ಬೆಳೆಗಾಗಿ ಅವರು ಭೂಮಿಯನ್ನು ಹದಗೊಳಿಸಿದರು. ನಂತರ ಬಂದ ಬುದ್ಧ ವೈಚಾರಿಕತೆಯ ಬೀಜ ಬಿತ್ತಿದರು. ಬಸವಣ್ಣ ಅದನ್ನು ಮರವಾಗಿ ಬೆಳೆಸಿದರು. ಅಂಬೇಡ್ಕರರು ಅದನ್ನು ಸಂವಿಧಾನದ ಮೂಲಕ ಫಲವಾಗಿಸಿದರು. ನಾವು ಫಲಾನುಭವಿಗಳಾದೆವು.

ಭಾರತದ ಹೊರಗಡೆ ಮೊದಲಿಗೆ ಸಾಕ್ರೆಟಿಸ್, ಪ್ಲೇಟೊ, ಅರಿಸ್ಟಾಟಲ್ ಅಂತಹವರು ಬಂದರು. ಜೀಸಸ್ ರೋಮನ್ ಸಾಮ್ರಾಜ್ಯಕ್ಕೆ ಮತ್ತು ಯಹೂದಿಗಳ ಕರ್ಮಠತನಕ್ಕೆ ಸವಾಲಾದರು. ಅದೇ ದಾರಿಯಲ್ಲಿ ಪೈಗಂಬರರು ಮುನ್ನಡೆದರು. ಅರಬ ಬುಡಕಟ್ಟುಗಳ ಮಧ್ಯೆ ಏಕತೆಯನ್ನು ಸಾಧಿಸುವ ಮೂಲಕ ಅವರ ತಲೆತಲಾಂತರದ ಜಗಳ ಮತ್ತು ಯುದ್ಧಗಳನ್ನು ನಿಲ್ಲಿಸಿದರು.



ಈ ಹಿನ್ನೆಲೆಯಲ್ಲಿ ನಾವು ಬಸವವಾದ ಮತ್ತು ಮಾರ್ಕ್ಸ್‌ವಾದವನ್ನು ನೋಡಬೇಕಿದೆ. ಇಡೀ ಮಾನವಕುಲ 'ಇವನಾರವ, ಇವನಾರವ' ಮತ್ತು 'ಇವ ನಮ್ಮವ, ಇವ ನಮ್ಮವ' ಎನ್ನುವವರ ಮಧ್ಯದ ಸಂಘರ್ಷವಾಗಿದೆ. ಧರ್ಮ ಸಿದ್ಧಾಂತವೇ ಇರಲಿ, ಇತರ ಸಿದ್ಧಾಂತಗಳೇ ಇರಲಿ, ಅವು ವಿಶಾಲಾರ್ಥದಲ್ಲಿ ಈ ಎರಡು ಗುಂಪಿನಲ್ಲಿ ಒಂದರ ಪರವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಬಸವವಾದ ಮತ್ತು ಮಾರ್ಕ್ಸ್‌ವಾದ "ಇವ ನಮ್ಮವ, ಇವ ನಮ್ಮವ" ಎಂಬ ಗುಂಪಿನಲ್ಲಿ ಬರುವಂಥವುಗಳಾಗಿವೆ.

ಸಮಾಜವನ್ನು ವರ್ಗ ದೃಷ್ಟಿಕೋನದಿಂದ ನೋಡಿದ ಬಸವಣ್ಣ

'ಉಳ್ಳವರು ಶಿವಾಲಯವ ಮಾಡಿಹರು, ನಾನೇನು ಮಾಡಲಿ ಬಡವನಯ್ಯ' ಎಂದು ಬಸವಣ್ಣನವರು 12ನೆಯ ಶತಮಾನದಲ್ಲೇ ಹೇಳುವ ಮೂಲಕ ಸಮಾಜದೊಳಗಣ ವರ್ಗಗುಣವನ್ನು ಕಂಡು ಹಿಡಿದಿದ್ದಾರೆ! ಕಾರ್ಲ್ ಮಾರ್ಕ್ಸ್ ಅವರು 19ನೇ ಶತಮಾನದಲ್ಲಿ ಈ ಉಳ್ಳವರು ಮತ್ತು ಬಡವರನ್ನು ಹ್ಯಾವ್ಸ್ (ಉಳ್ಳವರು) ಮತ್ತು ಹ್ಯಾವ್ ನಾಟ್ಸ್ (ಬಡವರು) ಎಂದು ಕರೆದರು. ಐರೋಪ್ಯ ದೇಶಗಳಲ್ಲಿ 13ನೇ ಶತಮಾನದಲ್ಲಿ ಬಂಡವಾಳಶಾಹಿಯ ಲಕ್ಷಣಗಳು ಕಾಣತೊಡಗಿದಾಗ ವರ್ಗಪ್ರಜ್ಞೆ ಮೂಡತೊಡಗಿತು. ಈ ಪ್ರಜ್ಞೆ ಹೋರಾಟದ ರೂಪ ತಾಳುವ ಹಾಗೆ ಬೆಳೆಯ ತೊಡಗಿದ್ದು 1760ರಲ್ಲಿ ಪ್ರಾರಂಭವಾದ ಔದ್ಯೋಗಿಕ ಕ್ರಾಂತಿ ಮತ್ತು 1789ರಲ್ಲಿ ಪ್ರಾರಂಭವಾದ ಫ್ರೆಂಚ್ ಕ್ರಾಂತಿಯ ನಂತರ. ಯಂತ್ರಗಳ ಒಡೆಯರು ಬಂಡವಾಳಶಾಹಿ ಎನಿಸಿದರು. ಕಾರ್ಖಾನೆಗಳಲ್ಲಿ ದುಡಿಯುವ ಬಡವರು ಕಾರ್ಮಿಕರು ಎನಿಸಿದರು. ಈ ಎರಡು ಪ್ರಮುಖ ಘಟನೆಗಳು ವರ್ಗ ಲಕ್ಷಣಗಳನ್ನು ಅರಿತುಕೊಳ್ಳಲು ಸಹಾಯ ಮಾಡಿದವು. ಕಾರ್ಲ್ ಮಾರ್ಕ್ಸ್ ಅವರಿಗೆ ನವಸಮಾಜದ ಲಕ್ಷಣಗಳ ಬಗ್ಗೆ ಲಭಿಸಿದಂತಹ ಯಾವ ಘಟನೆಗಳೂ ಕನ್ನಡದ ನೆಲದಲ್ಲಿ ಸಂಭವಿಸಿದ್ದಿಲ್ಲ. ಸಾಂಪ್ರದಾಯಿಕ ಸಮಾಜದಲ್ಲೇ ಬಸವಣ್ಣನವರು ಸಮಾಜವನ್ನು ವರ್ಗ ದೃಷ್ಟಿಕೋನದಿಂದ ನೋಡಿದ್ದು ಅನನ್ಯವಾಗಿದೆ. ಈ ಕಾರಣದಿಂದಲೇ ಅವರ ಚಿಂತನೆಯಲ್ಲಿ ಎಲ್ಲ ಆಧುನಿಕ ವಿಚಾರಧಾರೆಯ ಮೂಲಗಳಿವೆ.

ಬಸವಣ್ಣನವರ ಮತ್ತು ಮಾರ್ಕ್ಸ್‌ನ ಅಂತಃಸಾಕ್ಷಿ ಸಮಾನತೆಯನ್ನೇ ಪ್ರತಿಪಾದಿಸುತ್ತವೆ


ವಚನ ಸಾಹಿತ್ಯ ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ್ದು. ಆದರೆ ಮಾರ್ಕ್ಸ್‌ವಾದ ಧರ್ಮವಲ್ಲ. ಆದ್ದರಿಂದ ಧರ್ಮದ ಮೂಲಕ ಮಾರ್ಕ್ಸ್‌ವಾದವನ್ನು ಮತ್ತು ಬಸವವಾದವನ್ನು ಹೋಲಿಕೆ ಮಾಡಬಾರದು. ಮಾರ್ಕ್ಸ್‌ವಾದ ನಾಸ್ತಿಕವಾದ. ಆದರೆ ಬಸವವಾದ ದೇವರನ್ನು ನಂಬುವುದು. ಅದ್ದರಿಂದ ದೇವರ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದ ಮತ್ತು ಬಸವವಾದವನ್ನು ಹೋಲಿಕೆ ಮಾಡಬಾರದು. ಬಸವವಾದದ ವೈಶಿಷ್ಟವೆಂದರೆ ಬಸವಣ್ಣನವರ ದೇವರಿಗೆ ಮೂರ್ತಿ ಇಲ್ಲ. ಆದರೆ ಮೂರ್ತಿಗಳು ಮತ್ತು ಸ್ಥಾವರಲಿಂಗಗಳ ಬದಲಿಗೆ ನಿರಾಕಾರ ಇಷ್ಟಲಿಂಗವಿದೆ. ಬಸವಣ್ಣನವರ ದೇವರು ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣನಾಗಿದ್ದಾನೆ. ನಮ್ಮ ದೇಹವೇ ಆತನ ದೇಗುಲ! ಆತ ನಮ್ಮೊಳಗೆ ಅಂತಃಸಾಕ್ಷಿಯ ರೂಪದಲ್ಲಿದ್ದಾನೆ. ಇಷ್ಟಲಿಂಗವೆಂಬುದು ಆ ಅರಿವಿನ ಕುರುಹು. ಬಸವ ಧರ್ಮದಲ್ಲಿ ಗುಡಿ ಇಲ್ಲ; ಆದರೆ ಅನುಭವ ಮಂಟಪವಿದೆ. ಮಠ ಇಲ್ಲ; ಆದರೆ ಮಹಾಮನೆಯ ಪರಿಕಲ್ಪನೆ ಇದೆ. ಬಸವವಾದದಲ್ಲಿ ಯಾವುದೇ ಪವಿತ್ರ ಕ್ಷೇತ್ರವಿಲ್ಲ; ಆದರೆ ಭಕ್ತನ ಅಂಗಳವೇ ವಾರಣಾಸಿ. ಕಾಯಕವೇ ಕೈಲಾಸ. ಕಾಯವೂ ಕೈಲಾಸ. ಬಸವವಾದ ಮತ್ತು ಮಾರ್ಕ್ಸ್‌ವಾದ ಸಮಾನತೆಯ ಮೇಲೆ ನಿಂತಿವೆ. ಬಸವಣ್ಣನವರ ಅಂತಃಸಾಕ್ಷಿ ಮತ್ತು ಮಾರ್ಕ್ಸ್‌ನ ಅಂತಃಸಾಕ್ಷಿ ಸಮಾನತೆಯನ್ನೇ ಪ್ರತಿಪಾದಿಸುತ್ತವೆ.

"ಜೀವಜಾಲದಲ್ಲಿದೆ ಚರಾಚರವೆಲ್ಲ" ಎಂದು ಬಸವಣ್ಣನವರು ಹೇಳಿದ್ದಾರೆ. ಮಾರ್ಕ್ಸ್‌ವಾದ ಜೀವಜಾಲ ಸಮತೋಲನವನ್ನು ಪ್ರತಿಪಾದಿಸುತ್ತದೆ. ಈ ಹಿನ್ನೆಲೆಯಿಂದ ನೋಡಿದರೆ ಮಾರ್ಕ್ಸ್‌ನ ನಾಸ್ತಿಕವಾದ ಬಸವಣ್ಣನವರ ಆಸ್ತಿಕವಾದಕ್ಕೆ ಸಮೀಪದಲ್ಲಿದೆ.

ಪುಣ್ಯ ಪಾಪಗಳಿಗೆ ಸ್ಥಾನವಿಲ್ಲ

ಸ್ವರ್ಗ, ನರಕ, ಪುಣ್ಯ, ಪಾಪ, ಮೋಕ್ಷ, ಪುನರ್ಜನ್ಮ ಮತ್ತು ಒಟ್ಟಾರೆ ಕರ್ಮ ಸಿದ್ಧಾಂತವನ್ನು ಬಸವವಾದ ನಂಬುವುದಿಲ್ಲ. ಮಾರ್ಕ್ಸ್‌ವಾದ ಕೂಡ ಇದನ್ನೆಲ್ಲ ನಂಬುವುದಿಲ್ಲ. ಬಸವವಾದದಲ್ಲಿ ವೈದಿಕರ ಸ್ವರ್ಗ ನರಕಗಳಿಗೆ ಸ್ಥಾನವಿಲ್ಲ. ಇಲ್ಲಿ ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ.

"ಪುಣ್ಯಪಾಪವೆಂಬ ಉಭಯ ಕರ್ಮವನಾರು ಬಲ್ಲರಯ್ಯ ಇವನಾರುಂಬರು? ಕಾಯ ತಾನುಂಬಡೆ, ಕಾಯ ತಾ ಮಣ್ಣು, ಜೀವ ತಾನುಂಬಡೆ, ಜೀವ ತಾ ಬಯಲು. ಈ ಉಭಯ ನಿರ್ಣಯವ ಕೂಡಲಸಂಗಮದೇವಾ, ನಿಮ್ಮ ಶರಣ ಬಲ್ಲ." ಎಂದು ಬಸವಣ್ಣನವರು ಹೇಳಿದ್ದಾರೆ. ಕಾಯ ಮಣ್ಣಾಗುವುದರಿಂದ ಮತ್ತು ಜೀವ ಬಯಲಾಗುವುದರಿಂದ ಬಸವವಾದದಲ್ಲಿ ಪುಣ್ಯ ಪಾಪಗಳಿಗೆ ಸ್ಥಾನವಿಲ್ಲ. ಇಲ್ಲಿರುವುದು ಸಕಲಜೀವಾತ್ಮ ಲೇಸನ್ನೇ ಬಯಸುವುದು ಮಾತ್ರ. ಅಂತೆಯೆ ಬಸವಣ್ಣನವರು ದೇವರು ಧರ್ಮದ ಮೂಲ ಎಂದು ಹೇಳದೆ ದಯವೇ ಧರ್ಮದ ಮೂಲ ಎಂದು ಹೇಳಿದ್ದಾರೆ. ಬಸವಧರ್ಮದಲ್ಲಿ ಸರ್ವರೀತಿಯ ಸಮತಾಭಾವದಿಂದ ಕೂಡಿದ ಜೀವಕಾರುಣ್ಯವೇ ದೇವರು. "ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ, ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ, ಪ್ರಸಾದ ವಿಕಾರಿಗೆ ಮನೋವಿಕಾರವೆಂಬುದಿಲ್ಲ. ಇಂತೀ ತ್ರಿವಿಧ ಗುಣವನರಿದಾತನು ಅಚ್ಚ ಲಿಂಗೈಕ್ಯನು ಕೂಡಲಸಂಗಮದೇವಾ" ಎಂದು ಬಸವಣ್ಣನವರು ಹೇಳುವಲ್ಲಿ ಮೋಕ್ಷ ಮತ್ತು ಪುನರ್ಜನ್ಮವನ್ನು ಅಲ್ಲಗಳೆದಿದ್ದಾರೆ. ಶರಣರು ಜೀವಿತಾವಧಿಯಲ್ಲೇ ಲಿಂಗಾಂಗಸಾಮರಸ್ಯದಿಂದಾಗಿ ಅಚ್ಚ ಲಿಂಗೈಕ್ಯರಾಗಿ ಮೋಕ್ಷವನ್ನು ಹೊಂದಿರುತ್ತಾರೆ. ಮೋಕ್ಷದ ನಂತರ ಪುನರ್ಜನ್ಮವೆಲ್ಲಿ? "ಶಿವನ ನೆನೆಯಿರೆ, ಶಿವನ ನೆನೆಯಿರೆ, ಈ ಜನ್ಮ ಬಳಿಕಿಲ್ಲ." ಎಂದು ಅಕ್ಕಮಹಾದೇವಿ ಹೇಳಿದ್ದಾಳೆ.



"ಉಪಮಿಸಬಾರದ ಉಪಮಾತೀತರು, ಕಾಲಕರ್ಮ ರಹಿತರು, ಭವವಿರಹಿತರು, ಕೂಡಲಸಂಗಮದೇವಾ ನಿಮ್ಮ ಶರಣರು." ಎಂದು ಬಸವಣ್ಣನವರು ಕರ್ಮಸಿದ್ಧಾಂತವನ್ನು ಅಲ್ಲಗಳೆದಿದ್ದಾರೆ. ಕಾರ್ಲ್ ಮಾರ್ಕ್ಸ್ ಅವರ ಸಿದ್ಧಾಂತದಲ್ಲಿ ಕೂಡ ಕಾಯಕಸಿದ್ಧಾಂತವಿದೆ ಹೊರತಾಗಿ ಅದಕ್ಕೆ ವಿರುದ್ಧವಾದ ಕರ್ಮಸಿದ್ಧಾಂತವಿಲ್ಲ. ಬಸವಣ್ಣನವರು ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿ ಕುರಿತು ಹೇಳಿದ್ದಾರೆ. ಇಷ್ಟಲಿಂಗದ ಮೂಲಕ ಅಂತರಂಗ ಶುದ್ಧಿಯನ್ನೂ ಜಂಗಮಲಿಂಗದ ಮೂಲಕ ಬಹಿರಂಗ ಶುದ್ಧಿಯನ್ನೂ ಬಯಸಿದ್ದಾರೆ. ಕಾರ್ಲ್ ಮಾರ್ಕ್ಸ್ ಅವರು ಸ್ವಮಿಮರ್ಶೆ ಮತ್ತು ವಿಮರ್ಶೆ ಕುರಿತು ತಿಳಿಸಿದ್ದಾರೆ. ಅಂತರಂಗದ ಶುದ್ಧಿಗಾಗಿ ಸ್ವವಿಮರ್ಶೆ. ಬಹಿರಂಗದ ಶುದ್ಧಿಗಾಗಿ ವಿಮರ್ಶೆ. ಬಸವಧರ್ಮವು ನಡೆ ನುಡಿ ಸಿದ್ಧಾಂತವಾಗಿದೆ. ಅರಿವನ್ನು ಆಚರಣೆಯಲ್ಲಿ ತರುವುದೇ ಈ ಧರ್ಮದ ಉದ್ದೇಶವಾಗಿದೆ. ಮಾರ್ಕ್ಸ್‌ವಾದ ಕೂಡ ಜ್ಞಾನ ಮತ್ತು ಕ್ರಿಯೆಯ ಕುರಿತು ಹೇಳುತ್ತದೆ.

ಈ ಎರಡೂ ವಾದಗಳು ಸಾಮಾಜಿಕ ಆಸ್ತಿಯನ್ನು ಪ್ರೋತ್ಸಾಹಿಸುತ್ತವೆ

ಮಿಗುತಾಯ ಮೌಲ್ಯ (ಸರ್ಪ್ಲಸ್ ವ್ಯಾಲ್ಯೂ) ಉಳ್ಳವರ ಸೊತ್ತಾಗಬಾರದು ಎಂಬುದನ್ನು ಬಸವವಾದ ಮತ್ತು ಮಾರ್ಕ್ಸ್‌ವಾದ ಪ್ರತಿಪಾದಿಸುತ್ತವೆ. ಈ ಎರಡೂ ವಾದಗಳು ಖಾಸಗಿ ಆಸ್ತಿಯನ್ನು ನಿರಾಕರಿಸುತ್ತವೆ. ಸಾಮಾಜಿಕ ಆಸ್ತಿಯನ್ನು ಪ್ರೋತ್ಸಾಹಿಸುತ್ತವೆ. "ನಾನು ಆವಾವ ಕರ್ಮಂಗಳ ಮಾಡಿದಡೆಯೂ ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು. ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು, ನಿಮ್ಮ ಸೊಮ್ಮಿಂಗೆ ಸಲಿಸುವೆನು, ನಿಮ್ಮಾಣೆ ಕೂಡಲಸಂಗಮದೇವಾ" ಎಂದು ಬಸವಣ್ಣನವರು ತಿಳಿಸಿದ್ದಾರೆ. ಅವರು ಅನ್ನದೊಳಗಿನ ಒಂದಗಳನ್ನು ಕೂಡ ಇಂದಿಗೆ ನಾಳಿಗೆ ಎನ್ನದೆ ಬದುಕಿ ತೋರಿಸಿದರು. 'ಶಿವನಸೊಮ್ಮು' ಎಂಬ ಸಾಮಾಜಿಕ ನಿಧಿ ಸ್ಥಾಪಿಸಿದರು. ಎಲ್ಲ ಶರಣರು ಸಾಮಾಜಿಕ ನಿಧಿಗೆ ತಮ್ಮ ಮಿಗುತಾಯವನ್ನು ಸಲ್ಲಿಸಿದರು. ಶರಣಸಂಕುಲದ ಸದಸ್ಯರಿಗೆ ಇದು ಭವಿಷ್ಯದ ನಿಧಿಯಾಗಿ ಪರಿಣಮಿಸಿತು. ವಿಶ್ವದ ಇತಿಹಾಸದಲ್ಲಿ ಇದು ಮೊದಲ ಸಾಮಾಜಿಕ ನಿಧಿಯಾಗಿದ್ದು, ಸಾಮಾಜಿಕ ಆಸ್ತಿಯ ಮೊದಲ ದಾಖಲೆಯಾಗಿದೆ.

ಕಮ್ಯುನಿಸಂ ಏನು ಎಂಬುದನ್ನು ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ ಖಾಸಗಿ ಆಸ್ತಿಯನ್ನು ಸಾಮಾಜಿಕ ಆಸ್ತಿಯಾಗಿ ಪರಿವರ್ತಿಸುವುದು. ಬಸವಣ್ಣನವರು ಶರಣಸಂಕುಲದಲ್ಲಿ ಇದೇ ಪ್ರಯೋಗವನ್ನು ಮಾಡಿದ್ದು.

ಬಸವವಾದದ ಕಾಯಕ, ಪ್ರಸಾದ, ದಾಸೋಹ ಪರಿಕಲ್ಪನೆಯ ಮಾರ್ಕ್ಸ್ ವಾದದಲ್ಲಿ ಯೋಗ್ಯ ಉತ್ಪಾದನೆ, ಸದ್ಬಳಕೆ ಮತ್ತು ಯೋಗ್ಯ ಸಾಮಾಜಿಕ ವಿತರಣೆಯಾಗಿದೆ. "ಕಡ ಬಡ್ಡಿಯ ಕೊಡಲಾಗದು" ಎಂದು ಬಸವವಾದ ಹೇಳಿದರೆ, ಮಾರ್ಕ್ಸ್‌ವಾದ ಬಡ್ಡಿಯನ್ನು ನಿಷೇಧಿಸಿದೆ. ಬಸವಣ್ಣನವರ ಪರಿಕಲ್ಪನೆಯ ಸಮಾಜ ಶ್ರೀಮಂತರಿಲ್ಲದ ಶ್ರೀಮಂತ ಸಮಾಜ. ಮಾರ್ಕ್ಸ್ ಪರಿಕಲ್ಪನೆಯ ಸಮಾಜ ಕೂಡ ಶ್ರೀಮಂತರಿಲ್ಲದ ಶ್ರೀಮಂತ ಸಮಾಜವೇ ಆಗಿದೆ.

ಜಾತ್ಯತೀತ ಶರಣಸಂಕುಲ

ಬಸವಣ್ಣನವರ ಚಳವಳಿ ದುಡಿಯುವ ಜನರ ಚಳವಳಿ. 'ಕುಲವನರಸುವರೆ ಶರಣರಲ್ಲಿ ಜಾತಿಸಂಕರವಾದ ಬಳಿಕ' ಎಂದು

ಪುಟ 4 ಕ್ಕೆ

ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದ ಮಹಿಳೆಯರನ್ನು ಪುನಃ ಬಲಿಪಶು ಮಾಡಲಾಗುತ್ತದೆ

ಸಿ.ಸಿದ್ದಯ್ಯ

ಪಿತೃಪ್ರಧಾನ ಸಮಾಜದಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದ ಮಹಿಳೆಯರನ್ನು ಹೆಚ್ಚಾಗಿ ಅಗೋಚರ ರೀತಿಯಲ್ಲಿ ಪುನಃ ಬಲಿಪಶು ಮಾಡಲಾಗುತ್ತದೆ. ಇಂತಹ ಸಮಾಜದಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದ ಮಹಿಳೆಯರು ನ್ಯಾಯ ಪಡೆಯುವಲ್ಲಿ ವಿಫಲರಾಗುತ್ತಾರೆ. ‘ಲೈಂಗಿಕ ದೌರ್ಜನ್ಯವು ಕೆಲವೇ ನಿಮಿಷಗಳಲ್ಲಿ ಸಂಭವಿಸಬಹುದು ಮತ್ತು ವಾಸಿಯಾಗದ ಗಾಯವಾಗಬಹುದು; ಆದರೆ ನ್ಯಾಯಕ್ಕಾಗಿ ಹೋರಾಡುವುದು ಅದಕ್ಕಿಂತ ಹೆಚ್ಚಿನ ಭಾವನಾತ್ಮಕ ಯಾತನೆ ಮತ್ತು ನೋವನ್ನು ತರುತ್ತದೆ. ತಮಿಳುನಾಡಿನ ವಕೀಲೆ ಯು. ನಿರ್ಮಲಾ ರಾಣಿಯವರು “ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಭಾರತೀಯ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಉಂಟಾಗಲಿರುವ ಎರಡನೆ–ಪರಿಣಾಮ” ಕುರಿತು ಬರೆದಿರುವ ಸಂಶೋಧನಾ ಮಹಾಪ್ರಬಂಧ ಇದರ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ.



ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮೊಮ್ಮಗ, ಶಾಸಕ ಎಚ್.ಡಿ.ರೇವಣ್ಣನವರ ಪುತ್ರ, ಲೋಕಸಭಾ ಸದಸ್ಯ ಪ್ರಜ್ವಲ್ ರೇವಣ್ಣನಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿ ನೊಂದಿರುವ ಸಾವಿರಾರು(?) ಮಹಿಳೆಯರು ಈಗ ದ್ವಿತೀಯ ಕಿರುಕುಳವನ್ನು ಎದುರಿಸುವಂತಾಗಿದೆ. ಇದಕ್ಕೆಲ್ಲಾ ಕಾರಣ ನಮ್ಮ ಪಿತೃಪ್ರಧಾನ ವ್ಯವಸ್ಥೆ. ಇದು ಏಕೆ ನಡೆಯುತ್ತಿದೆ? ಮಹಿಳೆಯರ ಮೇಲಿನ ಈ ಲೈಂಗಿಕ ದೌರ್ಜನ್ಯವನ್ನು ನಾವು ಮಾರ್ಕ್ಸ್ ವಾದಿ ದೃಷ್ಟಿಕೋನದಿಂದ ನೋಡಬೇಕಿದೆ. ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯವು ಬಂಡವಾಳಶಾಹಿ/ಪಿತೃಪ್ರಧಾನ/ಲಿಂಗ ಅಸಮಾನತೆಯ ಚಿಂತನೆಯ ಮೂಲಭೂತ ಅಭಿವ್ಯಕ್ತಿಯಾಗಿದೆ. ಲಿಂಗ ಅಸಮಾನತೆ, ಪುರುಷ ಮೇಲು, ಮಹಿಳೆ ಕೀಳು ಎಂಬ ಹಳೆಯ ತಲೆಮಾರು–ಜಮೀನುದಾರರ ಸಾಮಾಜಿಕ ವ್ಯವಸ್ಥೆಯು ಬಲವಾಗಿ ಕಟ್ಟಿಕೊಟ್ಟಿರುವ ಅಂಶವನ್ನು ಇದು ಆಧರಿಸಿದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಚಾಲ್ತಿಯಲ್ಲಿರುವ ಪರಿಸ್ಥಿತಿಗಳು ಪಿತೃಪ್ರಧಾನ ಚಿಂತನೆಯ ಬೆಳವಣಿಗೆಗೆ ಸಹ ಸಹಾಯ ಮಾಡುತ್ತದೆ.

ಸಂತ್ರಸ್ತ ಮಹಿಳೆಯರ ಮೇಲೆ ದ್ವಿತೀಯ ಪರಿಣಾಮ ಎನ್ನುವುದು ಹೇಗೆಲ್ಲಾ ಉಂಟಾಗುತ್ತದೆ ಎಂಬುದಕ್ಕೆ ಪ್ರಸ್ತುತ ಸಂಸದ ಪ್ರಜ್ವಲ್ ರೇವಣ್ಣನಿಂದಾಗಿರುವ ನೂರಾರು (2000ಕ್ಕೂ ಹೆಚ್ಚು ಎಂದು ಹೇಳಲಾಗುತ್ತಿದೆ) ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯದ ಪ್ರಕರಣ ಮತ್ತು ಅದು ‘ಪೆನ್ ಡ್ರೈವ್’ ಮುಖಾಂತರ ಬೆಳಕಿಗೆ ಬಂದ ನಂತರ ನಡೆಯುತ್ತಿರುವ ಘಟನೆಗಳು ಒಂದು ಉದಾಹರಣೆಯಾಗಿದೆ. ಈ ಸಂತ್ರಸ್ತ ಮಹಿಳೆಯರು ಆಡಳಿತಗಾರರಿಂದ, ರಾಜಕಾರಣಿಗಳಿಂದ, ಮಾಧ್ಯಮಗಳಿಂದ, ಸಮಾಜದಿಂದಲೂ ಪುನಃ ಬಲಿಪಶು ಆಗಿದ್ದಾರೆ. ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಸಾಮಾಜಿಕ ಜಾಲತಾಣಗಳು ಸಂತ್ರಸ್ತ ಮಹಿಳೆಯರನ್ನು ಪುನಃ ಬಲಿಪಶು ಮಾಡುವಲ್ಲಿ ಮತ್ತಷ್ಟು ಸಹಕಾರಿಯಾಗಿವೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಇದು ನಡೆಯುತ್ತದೆಯೆಂದರೆ...

ತಮ್ಮ ಮೇಲಿನ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಲು ಅವಕಾಶ ಇರುವ, ಅಪರಾಧಿಗಳಿಗೆ ಶಿಕ್ಷೆ ಕೊಡಿಸುವ ವ್ಯವಸ್ಥೆ ಇರುವ ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ, ಒಬ್ಬ ಭೂಮಾಲೀಕ/ದೊಡ್ಡ ಸಿರಿವಂತ ತಾನು ಜನಪ್ರತಿನಿಧಿಯಾಗಿ ಆಯ್ಕೆಗೊಂಡು, ಹಳೆಯ ಪಾಳೇಗಾರಿ ಪದ್ದತಿಯಲ್ಲಿದ್ದಂತೆ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗುತ್ತಾನೆ ಎಂದರೆ, ಇದಕ್ಕೆ ಕಾರಣ ನಮ್ಮ ಇಂದಿನ ಪಿತೃಪ್ರಧಾನ ವ್ಯವಸ್ಥೆ. ಸಾವಿರಾರು ಮಹಿಳೆಯರನ್ನು ಹೆದರಿಸಿ, ಬೆದರಿಸಿ, ನೆರವು ನೀಡುವ ನೆಪದಲ್ಲೊ, ಆಮಿಷವೊಡ್ಡಿಯೋ ಹತ್ತಾರು ವರ್ಷಗಳ ಕಾಲ ಸಾವಿರಾರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿಯೂ, ಜನರಿಂದ ಮತ ಪಡೆದು ಜನಪ್ರತಿನಿಧಿಯಾಗುತ್ತಾನೆ, ನಮ್ಮ ಕಾನೂನಿನ ಕಣ್ಣುಗಳಿಂದ ತಪ್ಪಿಸಿಕೊಳ್ಳುತ್ತಾನೆ ಎಂದರೆ, ಅಂದಿನ ಪಾಳೇಗಾರಿ ಪದ್ದತಿಯಲ್ಲಿ ಮಹಿಳೆಯರ ಮೇಲೆ ಎಷ್ಟೆಲ್ಲಾ ದೌರ್ಜನ್ಯಗಳು ನಡೆಯುತ್ತಿದ್ದವು ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ.

ಎರಡನೆ–ಪರಿಣಾಮ: ಸಂಶೋಧನಾ ಮಹಾಪ್ರಬಂಧ

ಇಂಡಿಯನ್ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳ ಸಂವೇದನಾರಹಿತ–ಋಣಾತ್ಮಕ ವರ್ತನೆ ಮತ್ತು ಲೈಂಗಿಕ ದೌರ್ಜನ್ಯದ ಬಗ್ಗೆ ಅವಾಸ್ತವ ಮಿಥ್ಯೆಗಳನ್ನು ಸೃಷ್ಟಿಸುವುದರಿಂದಲೂ ಸಂತ್ರಸ್ತ ಮಹಿಳೆಯರು ಎರಡನೆಯ ಬಾರಿಗೆ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಅಪರಾಧ ವ್ಯವಸ್ಥೆಯಲ್ಲಿನ ಕೆಲವು ಅಂತರ್ಗತ ದೋಷಗಳ ಕಾರಣದಿಂದಾಗಿಯೂ ಇದು ಉಂಟಾಗುತ್ತದೆ. ಉದಾಹರಣೆಗೆ, ಸಂತ್ರಸ್ತರ ಹಕ್ಕುಗಳಿಗಾಗಿ ಶಾಸನದ ಅನುಪಸ್ಥಿತಿಯ ಕಾರಣದಿಂದಾಗಿಯೂ ಇದು ಸಂಭವಿಸುತ್ತದೆ. ಭಾರತದಲ್ಲಿ ದ್ವಿತೀಯ ಪರಿಣಾಮಗಳ ಕುರಿತು ಕೇವಲ ಒಂದೆರಡು ಅಧ್ಯಯನಗಳು ನಡೆದಿವೆ, ಅದೂ ಕೂಡ ಸಣ್ಣ ಪ್ರಮಾಣದಲ್ಲಿ.

ತಮಿಳುನಾಡಿನ ವಕೀಲೆ ಯು.ನಿರ್ಮಲಾ ರಾಣಿಯವರು ಬರೆದಿರುವ ಸಂಶೋಧನಾ ಮಹಾಪ್ರಬಂಧ ಇದರ ಮೇಲೆ ಸಾಕಷ್ಟು ಬೆಳಕು ಚೆಲ್ಲುತ್ತದೆ. ಆಲ್ ಇಂಡಿಯಾ ಡೆಮಾಕ್ರಟಿಕ್ ವುಮೆನ್ಸ್ ಅಸೋಸಿಯೇಷನ್ (ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ)ನ ಕಾರ್ಯನಿರ್ವಾಹಕರಲ್ಲಿ ಒಬ್ಬರಾದ ಅವರು ತಮ್ಮ ಡಾಕ್ಟರೇಟ್ ಪ್ರಬಂಧಕ್ಕಾಗಿ ತೆಗೆದುಕೊಂಡ ವಸ್ತುವಿದು. “ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಭಾರತೀಯ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ಉಂಟಾಗಲಿರುವ ಎರಡನೆ–ಪರಿಣಾಮ; ಲಿಂಗ ಮತ್ತು ಸಂತ್ರಸ್ತರ ಹಕ್ಕುಗಳ ದೃಷ್ಟಿಕೋನದಿಂದ” (“The secondary impact of sexual violence on women in the Indian criminal justice system; From the perspective of gender and victims' rights”) ಎಂಬ ಶೀರ್ಷಿಕೆಯಡಿ ಭಾರತೀದಾಸನ್ ವಿಶ್ವವಿದ್ಯಾಲಯದ ಸ್ತ್ರೀರೋಗ ಶಾಸ್ತ್ರ(Gynecology) ವಿಭಾಗಕ್ಕೆ ಪ್ರಬಂಧ ಸಲ್ಲಿಸಲಾಗಿದೆ. ತಮಿಳುನಾಡಿನಲ್ಲಿ ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರ ಹಕ್ಕುಗಳನ್ನು ಎತ್ತಿಹಿಡಿಯುವಲ್ಲಿ ವಕೀಲೆ ಯು.ನಿರ್ಮಲಾ ರಾಣಿಯವರಿಗೆ ವಿಶಿಷ್ಟ ಪಾತ್ರವಿದೆ.

ನ್ಯಾಯವಾದಿ ಯು.ನಿರ್ಮಲಾ ರಾಣಿಯವರು ಮಾಡಿರುವ ಅಧ್ಯಯನದಲ್ಲಿರುವ ವಿವರವಾದ ಸಮಸ್ಯೆಗಳನ್ನು ಆಳವಾದ ಪರಿಶೀಲನೆಗೆ ಒಳಪಡಿಸಲಿಲ್ಲ. ಹಾಗೂ, ಸಂತ್ರಸ್ತೆಯರ ಮೇಲಿನ ದ್ವಿತೀಯ ಕಿರುಕುಳಕ್ಕೆ ಸಂಬಂಧಿಸಿ ಮಹಿಳೆಯರ ಹಕ್ಕುಗಳು ಮತ್ತು ಬಲಿಪಶುಗಳ ಹಕ್ಕುಗಳಲ್ಲಿ ಸ್ತ್ರೀವಾದಿ ದೃಷ್ಟಿಕೋನವನ್ನು ಹೊಂದಿರುವ ವಕೀಲೆ ಯು.ನಿರ್ಮಲಾ ರಾಣಿಯವರ ಸಂಶೋಧನೆಯು ಈ ಮಹಾಪ್ರಬಂಧದ ವಿಶಿಷ್ಟ ಲಕ್ಷಣವಾಗಿದೆ.

410 ಮಹಿಳೆಯರ ಮೇಲೆ ಅಧ್ಯಯನ

ಸಂಶೋಧಕಿ ಯು.ನಿರ್ಮಲಾ ರಾಣಿಯವರು ತಮಿಳುನಾಡಿನ ಒಂಬತ್ತು ಜಿಲ್ಲೆಗಳಲ್ಲಿ 2011 ಮತ್ತು 2013 ರ ನಡುವೆ ನ್ಯಾಯಾಲಯಗಳು ತೀರ್ಪು ನೀಡಿದ ಪ್ರಕರಣಗಳಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ 410 ಮಹಿಳೆಯರ ಮೇಲೆ ಅಧ್ಯಯನವನ್ನು ನಡೆಸಿದ್ದಾರೆ. ಪ್ರಕರಣಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯದಿಂದ ಪಡೆಯಲಾಗಿತ್ತು. ಪಿತೃಪ್ರಧಾನ ಪ್ರಭುತ್ವದ ಸಮಾಜದಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದ ಮಹಿಳೆಯರು ನ್ಯಾಯ ಪಡೆಯುವಲ್ಲಿ ಅವರು ಅನುಭವಿಸಿದ ಯಾತನೆಗಳ ಅನುಭವಗಳ ಬಗ್ಗೆ ಮಾತನಾಡುವುದೂ ಕೂಡ ಒಂದು ದೊಡ್ಡ ಸವಾಲಾಗಿದೆ. ಇಂತಹ ಸವಾಲನ್ನು ಎದುರಿಸಿದ ಯು.ನಿರ್ಮಲಾ ರಾಣಿ ಸಂತ್ರಸ್ತ ಮಹಿಳೆಯರು ದೂರು ದಾಖಲಿಸಿದಾಗಿನಿಂದ, ಪ್ರಕರಣದ ತೀರ್ಪಿನವರೆಗೆ ಎದುರಿಸುತ್ತಿರುವ ನಕಾರಾತ್ಮಕ ಅನುಭವಗಳು, ದ್ವಿತೀಯ ಪರಿಣಾಮಗಳನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ.

ಅಧ್ಯಯನದ ಶಿಫಾರಸುಗಳು

1. ಸಂತ್ರಸ್ತರಿಗೆ ಕಾನೂನು ಹಕ್ಕುಗಳನ್ನು ನೀಡಬೇಕು.
2. ಎರಡನೇ ಹಾನಿಯನ್ನು ಅಪರಾಧವೆಂದು ಪರಿಗಣಿಸಬೇಕು.
3. ಪ್ರಕರಣಗಳನ್ನು ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು.
4. ಲಿಂಗ ಆಧಾರಿತ ಹಿಂಸೆಯ ಪ್ರಕರಣಗಳನ್ನು ನಿರ್ವಹಿಸಲು ತರಬೇತಿ ನೀಡಬೇಕು.
5. ಹಳೆಯ ಕಾನೂನುಗಳನ್ನು ಬಳಸಲಾಗುತ್ತಿದೆಯೇ ಎಂಬುದನ್ನು ಮೇಲ್ವಿಚಾರಣೆ ಮಾಡಲು ಸಮಿತಿಯನ್ನು ನೇಮಿಸಬೇಕು.

–ನಿರ್ಮಲಾ ರಾಣಿ ಅವರು ತಮ್ಮ ಪ್ರಬಂಧದಲ್ಲಿ ಈ ಎಲ್ಲಾ ಪರಿಹಾರಗಳನ್ನು ಪ್ರಸ್ತಾಪಿಸಿದ್ದಾರೆ.

1985–ವಿಶ್ವಸಂಸ್ಥೆ ಘೋಷಣೆ

1985 ರ ವಿಶ್ವಸಂಸ್ಥೆಯ ಘೋಷಣೆಯು ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ನ್ಯಾಯದ ತತ್ವವನ್ನು ವ್ಯಾಖ್ಯಾನ ಮಾಡಿದೆ. ಸಂತ್ರಸ್ತರಿಗೆ ನ್ಯಾಯ ಮತ್ತು ನ್ಯಾಯೋಚಿತ ಚಿಕಿತ್ಸೆಗೆ ಪ್ರವೇಶ; ಪುನರ್ರಚನೆ; ಪರಿಹಾರ; ಪ್ರಸ್ತುತ ಕ್ರಿಮಿನಲ್ ನ್ಯಾಯ ವ್ಯವಸ್ಥೆ ಮತ್ತು ಅದರ ಮಧ್ಯಸ್ಥಗಾರರು ಸಹಾಯವನ್ನು ಹೇಗೆ ಉಲ್ಲಂಘಿಸುತ್ತಾರೆ ಎಂಬುದನ್ನು ಅಧ್ಯಯನವು ತನಿಖೆ ಮಾಡುತ್ತದೆ. ದ್ವಿತೀಯ ಬಲಿಪಶುಗಳಾಗಿರುವ ಮಹಿಳೆಯರ ದುಸ್ಥಿತಿ, ಅಂತಿಮವಾಗಿ ಆರೋಪಿಯನ್ನು ಶಿಕ್ಷಿಸುವ ನ್ಯಾಯ ಮತ್ತು ಪರಿಹಾರ ನಿಧಿಗಳ ದುಸ್ಥಿತಿಯ ಚಿತ್ರಣವನ್ನು ಅಧ್ಯಯನವು ಚಿತ್ರಿಸುತ್ತದೆ. ಅಧ್ಯಯನವು ದ್ವಿತೀಯ ಬಲಿಪಶು ಮತ್ತು ನ್ಯಾಯದ ನಿರಾಕರಣೆಯ ನಡುವಿನ ಸಂಪರ್ಕವನ್ನು ಸಹ ವಿವರಿಸುತ್ತದೆ.

ಸಮಾಜದ ಕಟ್ಟು ಕತೆಗಳು

ಲೈಂಗಿಕ ದೌರ್ಜನ್ಯದ ಬಗ್ಗೆ ಸಮಾಜದ ಕಟ್ಟುಕತೆಗಳು ನಿಜವಲ್ಲ. ಅವೆಲ್ಲವೂ ಕಟ್ಟುಕತೆಗಳು ಎಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಅವುಗಳೆಂದರೆ, ಲೈಂಗಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರು ಸುಳ್ಳು ಹೇಳುತ್ತಾರೆ ಎನ್ನುವುದು; ಮತ್ತು “ಮಹಿಳೆ ತನಗೆ ಲೈಂಗಿಕತೆ ಬೇಡವೆಂದು ಹೇಳಿದರೆ, ಅವಳು ಅದನ್ನು ಬಯಸುತ್ತಾಳೆ ಎಂದರ್ಥ, ಅದನ್ನು ನಂಬಬಾರದು” ಎಂದು ಸಮಾಜ ತಲತಲಾಂತರಗಳಿಂದ ಹೇಳುತ್ತಲೇ ಬಂದಿದೆ. ಅದರ ಹೊರತಾಗಿ ರಾತ್ರಿಯಲ್ಲಿ ಒಬ್ಬಂಟಿಯಾಗಿ ಹೊರಗೆ ಹೋಗುವ ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾದರೆ, ಅದು ಆಗಬೇಕು ಎಂದು ಅವರು ಬಯಸುತ್ತಾರೆ; ಅಂತಹ ಮಹಿಳೆಯರ ನಡವಳಿಕೆ ಸರಿಯಿಲ್ಲ ಎನ್ನುತ್ತಾರೆ; ಅವರು ಅರೆಬರೆ ಬಟ್ಟೆ ಧರಿಸಿದ್ದರು ಎಂದಾದರೆ, ಅವರ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಅದೇ ಕಾರಣ ಎಂದು ಅವರು ದೂರುತ್ತಾರೆ. ಈ ರೀತಿ ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಸಿಗುವುದಿಲ್ಲ;

ಮಾರ್ಕ್ಸ್‌ವಾದಿ ಬೆಳಕಿನಲ್ಲಿ ಅಧ್ಯಯನ

ಈ ಅಂಶಗಳಲ್ಲಿ, ವಕೀಲರಾದ ಯು. ನಿರ್ಮಲಾ ರಾಣಿ ಅವರ ಅಧ್ಯಯನವು ಮಾರ್ಕ್ಸ್‌ವಾದಿ ಸ್ತ್ರೀವಾದಿ ಸಂಹಿತೆಯನ್ನು ಆಧರಿಸಿದೆ ಎಂದು ಉಲ್ಲೇಖಿಸಬಹುದು. ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯವು ಬಂಡವಾಳಶಾಹಿ/ಪಿತೃಪ್ರಧಾನ/ಲಿಂಗ ಅಸಮಾನತೆಯ ಚಿಂತನೆಯ ಮೂಲಭೂತ ಅಭಿವ್ಯಕ್ತಿಯಾಗಿದೆ. ಇದು ಏಕೆ ನಡೆಯುತ್ತಿದೆ? ಲಿಂಗ ಅಸಮಾನತೆ; ಪುರುಷ ಮೇಲು, ಮಹಿಳೆ ಕೀಳು ಎಂಬುದಕ್ಕೆ ಹಳೆಯ ತಲೆಮಾರು–ಜಮೀನುದಾರರ ಸಾಮಾಜಿಕ ವ್ಯವಸ್ಥೆಯು ಬಲವಾಗಿ ಕಟ್ಟಿಕೊಟ್ಟಿರುವ ಅಂಶವನ್ನು ಇದು ಆಧರಿಸಿದೆ. ಈ ಸಾಮಾಜಿಕ ವ್ಯವಸ್ಥೆಯಲ್ಲಿ ಚಾಲ್ತಿಯಲ್ಲಿರುವ ಪರಿಸ್ಥಿತಿಗಳು ಪಿತೃಪ್ರಧಾನ ಚಿಂತನೆಯ ಬೆಳವಣಿಗೆಗೆ ಸಹ ಸಹಾಯ ಮಾಡುತ್ತದೆ. ಆದರೆ ಮಾರ್ಕ್ಸ್‌ವಾದಿ ಸ್ತ್ರೀವಾದವು ಕೇವಲ ಬಾಯಿಮಾತು ಅಥವಾ ಪುಸ್ತಕಗಳಲ್ಲಿ ಬರೆಯಲ್ಪಟ್ಟಿಲ್ಲ. ಬದಲಿಗೆ, 1917

ಪುಟ 4 ಕ್ಕೆ

ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದ ಮಹಿಳೆಯರನ್ನು ಪುನಃ ಬಲಿಪಶು ಮಾಡಲಾಗುತ್ತದೆ......... ಪುಟ 3 ರಿಂದ

ರ ಕ್ರಾಂತಿಯು ಸೋವಿಯತ್ ಒಕ್ಕೂಟದಲ್ಲಿ ಲಿಂಗ ಸಮಾನತೆಯನ್ನು ಸ್ಥಾಪಿಸಿತು. ಅನೇಕ ಕಾನೂನುಗಳನ್ನು ಜಾರಿಗೆ ತರಲಾಯಿತು. ಉದಾಹರಣೆಗೆ, 1917 ರಲ್ಲಿ ಜಾರಿಗೆ ಬಂದ ಕಾನೂನು ನೂರು ವರ್ಷಗಳ ನಂತರವೂ ಭಾರತದಲ್ಲಿ ಅಸ್ತಿತ್ವದಲ್ಲಿಲ್ಲ. ಅಂದರೆ ಜಾಯಿಂಟ್ ಮ್ಯಾಟ್ರಿಮೊನಿ ಕಾಯಿದೆ. ಅಂದರೆ ಸಹಬಾಳ್ವೆ ಕಾಯಿದೆ. ಇಂದಿನ ಭಾರತದಲ್ಲಿ ಗಂಡ–ಹೆಂಡತಿ ವಿಚ್ಛೇದನ ಪಡೆದು ಬೇರ್ಪಟ್ಟರೆ ಹೆಂಡತಿಗೆ ಏನು ಸಿಗುತ್ತದೆ? ಅಲ್ಪ ಪ್ರಮಾಣದ 'ಜೀವನಾಂಶ' ಮಾತ್ರ ಲಭ್ಯವಿದೆ. ಅದನ್ನು ಪಡೆದಕೊಳ್ಳಲು ಸಹ ಬಹಳ ಸಮಯ ತೆಗೆದುಕೊಳ್ಳುತ್ತದೆ. ಆದರೆ ಸೋವಿಯತ್ ಒಕ್ಕೂಟದ ಜಂಟಿ ಮ್ಯಾಟ್ರಿಮನಿ ಕಾನೂನಿನಲ್ಲಿ, ಗಂಡ ಮತ್ತು ಹೆಂಡತಿ ಒಟ್ಟಿಗೆ ವಾಸಿಸುವಾಗ ಯಾವ ವಸ್ತುಗಳನ್ನು ಖರೀದಿಸಲಾಗುತ್ತದೆ? ಅದರ ಆಧಾರದ ಮೇಲೆ ಆಸ್ತಿಯನ್ನು ಇಬ್ಬರ ನಡುವೆ ಸಮಾನವಾಗಿ ಹಂಚಬೇಕು. ಇಷ್ಟು ದಿನ ಭಾರತದಲ್ಲಿ ಈ ಕಾನೂನನ್ನು ಅಭಿವೃದ್ಧಿಪಡಿಸಲಾಗಿಲ್ಲ.

ದ್ವಿತೀಯ ಹಾನಿಯ ತೀವ್ರತೆ

ತಮಿಳುನಾಡಿನ 9 ಜಿಲ್ಲೆಗಳಲ್ಲಿ (ಚೆನ್ನೈ, ಮಧುರೈ, ತಿರುನಲ್ವೇಲಿ, ಕೊಯಮತ್ತೂರು, ಥೇಣಿ, ತಿರುಚ್ಚಿ, ಪೆರಂಬಲೂರ್, ವಿಲ್ಲುಪುರಂ) ನಾಲ್ಕು ಪೊಲೀಸ್ ಠಾಣೆಗಳನ್ನು ಒಳಗೊಂಡಂತೆ 10 ವರ್ಷಗಳ ಅಧ್ಯಯನ ನಡೆಸಲಾಗಿದೆ. 19 ವರ್ಷದೊಳಗಿನ ಶೇ. 84 ರಷ್ಟು ಮಹಿಳೆಯರು ಬಾಧಿತರಾಗಿದ್ದಾರೆ. ಮೂರು ವರ್ಷದ ಮಗುವಿನಿಂದ 85 ವರ್ಷದ ಮಹಿಳೆಯವರೆಗೆ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಇದೆಲ್ಲವೂ ಕೇವಲ ಲೈಂಗಿಕ ಬಯಕೆಯ ಬಗ್ಗೆ ಅಲ್ಲ. ಮಹಿಳೆಯರನ್ನು ತನ್ನ ಹಿಡಿತಕ್ಕೆ ತಂದು ಪಿತೃಪ್ರಭುತ್ವ ಸಾಧಿಸುವ ಉದ್ದೇಶದಿಂದ ಈ ಘಟನೆಗಳು ನಡೆದಿವೆ. ಶೇ. 27 ರಷ್ಟು ಶಾಲೆ ಬಿಟ್ಟವರು ಮತ್ತು ಶೇ. 91 ರಷ್ಟು ಅವಿವಾಹಿತ ಮಹಿಳೆಯರು–ವಿಶೇಷವಾಗಿ ಸಾಮಾಜಿಕ–ಆರ್ಥಿಕವಾಗಿ ತುಳಿತಕ್ಕೊಳಗಾದ ಮಹಿಳೆಯರು.

ದ್ವಿತೀಯ ಬಲಿಪಶು ಮತ್ತು ಪೊಲೀಸ್

ಈ ಅಧ್ಯಯನದಲ್ಲಿ, ಪೊಲೀಸ್ ಇಲಾಖೆಯಲ್ಲಿರುವ ಜನರು ಅವಮಾನಕರವಾಗಿ ಮಾತನಾಡುವುದು, ಮೊದಲ ಬಾರಿಗೆ ಅರ್ಜಿ ಸಲ್ಲಿಸಲು ಬಂದವರಿಂದ ಅರ್ಜಿಯನ್ನು ಸ್ವೀಕರಿಸಲು ನಿರಾಕರಿಸುವುದು, ಬೆದರಿಕೆ ಹಾಕುವುದು ಮುಂತಾದ ದ್ವಿತೀಯ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂದು ಅನೇಕ ಸ್ಥಳಗಳಲ್ಲಿ ವರದಿಯಾಗಿದೆ. ಲಂಚ ಪಡೆಯುವುದು, ತಡವಾಗಿ ದೂರು ದಾಖಲಿಸಲು ಬಂದರೆ ಅವಮಾನ ಮಾಡುತ್ತಾರೆ. ಸಂತ್ರಸ್ತೆಯನ್ನು ಪದೇ ಪದೇ ವಿಚಾರಣೆ ಮಾಡುವುದು, ಆಗಾಗ್ಗೆ ಪೊಲೀಸ್ ಠಾಣೆಗೆ ಬರುವಂತೆ ಹೇಳುವುದು, ಪ್ರಕರಣದ ಸ್ಥಿತಿಯನ್ನು ತಿಳಿಸದೆ ಪ್ರಕರಣವನ್ನು ವಿಳಂಬಗೊಳಿಸುವುದು ಇವುಗಳಲ್ಲಿ ಸೇರಿವೆ.

ಸರ್ಕಾರಿ ವೈದ್ಯರು

ಸರ್ಕಾರಿ ವೈದ್ಯರು ಸಂತ್ರಸ್ತ ಮಹಿಳೆಯನ್ನು ಅವಮಾನಿಸುವ, ಶೇ. 86 ರಷ್ಟು ಪ್ರಕರಣಗಳಲ್ಲಿ ಎರಡು ಬೆರಳಿನ ಪರೀಕ್ಷೆ ನಡೆಸಿ ಮಹಿಳೆಯರನ್ನು ತೀವ್ರ ಮಾನಸಿಕ ಒತ್ತಡಕ್ಕೆ ಸಿಲುಕಿಸುವಂತಹ ಸರ್ಕಾರಿ ವೈದ್ಯರಿಂದ ಸಂತ್ರಸ್ತೆಯರ ಮೇಲಿನ ದ್ವಿತೀಯ ಪರಿಣಾಮಗಳು ಆಘಾತಕಾರಿಯಾಗಿದೆ. ಎರಡು ಬೆರಳುಗಳ ಪರೀಕ್ಷೆಯನ್ನು ಕಾನೂನಿನಿಂದ ನಿಷೇಧಿಸಲಾಗಿದೆ. ಆದರೆ ಇಂದಿಗೂ ಈ ಅನಾಗರಿಕ–ನಿಷೇಧಿತ ಪ್ರಯೋಗವನ್ನು ವೈದ್ಯರು ನಡೆಸುತ್ತಿದ್ದಾರೆ. 72 ಗಂಟೆಗಳ ಒಳಗೆ ಮಾಡಬೇಕಾದ ವೈದ್ಯಕೀಯ ಪರೀಕ್ಷೆಯನ್ನು 72 ದಿನಗಳ ನಂತರ ಮಾಡಲಾಗಿದೆ ಎಂದು ಅಧ್ಯಯನವು ಬಹಿರಂಗಪಡಿಸಿದೆ. ಸಂತ್ರಸ್ತೆಗೆ ಯಾವುದೇ ವೈದ್ಯಕೀಯ ಚಿಕಿತ್ಸೆ ನೀಡಲಾಗಿಲ್ಲ ಮತ್ತು ಲೈಂಗಿಕ ದೌರ್ಜನ್ಯದ ಚಿಹ್ನೆಗಳಿಗಾಗಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ತಿಳಿದುಬಂದಿದೆ.

ಸಾರ್ವಜನಿಕ ಅಭಿಯೋಜಕರು

ಅಂತೆಯೇ, ಸಂತ್ರಸ್ತರ ಪರವಾಗಿ ಸರ್ಕಾರವು ನೇಮಿಸಿದ ಪಬ್ಲಿಕ್ ಪ್ರಾಸಿಕ್ಯೂಟರ್ನಿಂದ ಉಂಟಾಗುವ ದ್ವಿತೀಯ ಪರಿಣಾಮಗಳು ಹೆಚ್ಚು. ಸಂತ್ರಸ್ತ ಮಹಿಳೆಯರು ಕಟಕಟೆಯಲ್ಲಿ ನಿಂತರೂ ನಮ್ಮ ಪರ ವಾದ ಮಂಡಿಸುವ ವಕೀಲರು ಯಾರು ಎಂದು ತಿಳಿಯದ ಸ್ಥಿತಿ ಇದೆ. ಅಲ್ಲದೆ, ಸಾಮಾನ್ಯ ಸ್ಥಳವಾಗಿರುವ ನ್ಯಾಯಾಲಯದ ವರಾಂಡಾದಲ್ಲಿ ನಿಂತಿರುವಾಗ ಹಲವಾರು ಜನರು ತಮಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಅನೇಕ ಮಹಿಳೆಯರು ಕಟುವಾಗಿ ವರದಿ ಮಾಡಿದ್ದಾರೆ.

ನ್ಯಾಯಾಧೀಶರ ವರ್ತನೆ

ಪ್ರಕರಣವನ್ನು ಆಲಿಸುವ ನ್ಯಾಯಾಧೀಶರ ಕಡೆಯಿಂದ ಸಂವೇದನಾಶೀಲತೆ ಮತ್ತು ಅಸಹನೆ: ಉದಾಹರಣೆಗೆ, ನ್ಯಾಯಾಧೀಶರು, 'ನಿಮ್ಮ ಕಥೆ ಕೇಳಲು ನಾನು ಸಿದ್ಧನಿಲ್ಲ;' ನಿಮ್ಮ ಕಥೆಯನ್ನು ಸೂಕ್ತ ನಿರೂಪಕನಿಗೆ ತಿಳಿಸಿ; 'ಚಿತ್ರೀಕರಣ ಮಾಡಲಾಗುವುದು' ಎಂದು ಹೇಳುವುದು; ಬೇರೆ ಬೇರೆ ಫೈಲ್ಗಳನ್ನು ನೋಡಿಕೊಂಡಿರುವುದು; ಸತತವಾಗಿ ವಾಯಿದೆ ಕೊಡುವುದು ಇವುಗಳಿಂದಾಗಿ ಮಹಿಳೆಯರು ಸಾಕಷ್ಟು ನೋವು ಅನುಭವಿಸುತ್ತಾರೆ. ಮಾನಸಿಕ ಅಸ್ವಸ್ಥ ಮಹಿಳೆಯರು ಸಾಕ್ಷಿ ಹೇಳಲು ಸಾಧ್ಯವಿಲ್ಲದ ಕಾರಣ ನ್ಯಾಯಾಧೀಶರು ಅಪರಾಧಿಗಳನ್ನು ಖುಲಾಸೆಗೊಳಿಸುತ್ತಿದ್ದಾರೆ. ಹಳೆಯ ಕಾಲದ ಕಾನೂನುಗಳನ್ನು ಇನ್ನೂ ಬಳಸಲಾಗುತ್ತಿರುವುದರಿಂದ ಪರಿಸ್ಥಿತಿ ಹದಗೆಟ್ಟಿದೆ ಎಂದು ಅಧ್ಯಯನವು ಬಹಿರಂಗಪಡಿಸುತ್ತದೆ.

ನ್ಯಾಯಾಲಯ ವಿಳಂಬ

- ಒಂದು ಪ್ರಕರಣವು ಒಂದರಿಂದ 14 ವರ್ಷಗಳವರೆಗೆ ಇರುತ್ತದೆ.
- ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದ ಮಹಿಳೆಯರು ಅತ್ಯಂತ ಅವಮಾನಕರ ಸನ್ನಿವೇಶಗಳಿಗೆ ಬಲವಂತಪಡಿಸುತ್ತಾರೆ.
- ಈ ಅವಮಾನವನ್ನು ಅನುಭವಿಸುವ ನಾಲ್ಕು ಮಹಿಳೆಯರಲ್ಲಿ ಒಬ್ಬರು ತಮ್ಮ ಮನೆಯನ್ನು ತೊರೆಯಬೇಕು; ಶಾಲೆಯಿಂದ ಅಮಾನತು.
- ಸಂತ್ರಸ್ತ ಮಹಿಳೆಯರ ಹೆಸರುಗಳನ್ನು ಮಾಧ್ಯಮಗಳು ಬಹಿರಂಗಪಡಿಸುವಂತಹ ನಾಚಿಕೆಗೇಡಿನ ಹಲವು ರೂಪಗಳಿವೆ.

ನ್ಯಾಯವನ್ನು ನಿರಾಕರಿಸಲಾಗಿದೆ.

ವಕೀಲೆ ನಿರ್ಮಲಾರಾಣಿ ಅವರು ಪರಿಶೀಲಿಸಿದ 410 ಪ್ರಕರಣಗಳ ಪೈಕಿ 373 ಪ್ರಕರಣಗಳು ಆರೋಪಿಗಳನ್ನು ಖುಲಾಸೆಗೊಳಿಸಿವೆ. ಶೇ. 88.5 ಅಪರಾಧಿಗಳನ್ನು ಖುಲಾಸೆಗೊಳಿಸಲಾಗಿದೆ. ಕೇವಲ 47 ಪ್ರಕರಣಗಳಲ್ಲಿ ಅವರಿಗೆ ಶಿಕ್ಷೆಯಾಗಿದೆ. ಆ 47 ಪ್ರಕರಣಗಳಲ್ಲಿ ಕೇವಲ 7 ಮಹಿಳೆಯರು ಮಾತ್ರ ಪರಿಹಾರ ಪಡೆದಿದ್ದಾರೆ. ಸಂತ್ರಸ್ತ ಮಹಿಳೆಯರು ಹೇಳಿದಾಗ, 'ಲೈಂಗಿಕ ದೌರ್ಜನ್ಯವು ಕೆಲವೇ ನಿಮಿಷಗಳಲ್ಲಿ ಸಂಭವಿಸಬಹುದು ಮತ್ತು ವಾಸಿಯಾಗದ ಗಾಯವಾಗಬಹುದು; ಆದರೆ ನ್ಯಾಯಕ್ಕಾಗಿ ಹೋರಾಡುವುದು ಅದಕ್ಕಿಂತ ಹೆಚ್ಚಿನ ಭಾವನಾತ್ಮಕ ಯಾತನೆ ಮತ್ತು ನೋವನ್ನು ತಂದಿದೆ. ●

ಮೋದಿ ಸರ್ಕಾರದ ನೀಚ ತಂತ್ರವನ್ನು ಬಯಲು ಮಾಡಿದ ಸುಪ್ರಿಂ ಕೋರ್ಟ್ ಆದೇಶ

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್‌ರವರಿಗೆ ಮಧ್ಯಂತರ ಜಾಮೀನು ನೀಡಿರುವ ಸುಪ್ರೀಂ ಕೋರ್ಟ್ ಆದೇಶವನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸ್ವಾಗತಿಸಿದೆ. ಈ ಮೂಲಕ ಲೋಕಸಭೆ ಚುನಾವಣೆ ಪ್ರಚಾರದಲ್ಲಿ ಪಾಲ್ಗೊಳ್ಳದಂತೆ ಕೇಜ್ರಿವಾಲ್ ಅವರನ್ನು ಬಂಧಿಸುವ ಉದ್ದೇಶವನ್ನೇ ನ್ಯಾಯಾಲಯ ವಿಫಲಗೊಳಿಸಿದೆ.

ಈ ತೀರ್ಪು ಜಾರಿ ನಿರ್ದೇಶನಾಲಯ (ಇ.ಡಿ.) ಮತ್ತು ಮೋದಿ ಸರ್ಕಾರದ ನೀಚ ತಂತ್ರವನ್ನು ಬಯಲು ಮಾಡಿದೆ ಎಂದು ಪೊಲಿಟ್ ಬ್ಯುರೊ ಹೇಳಿದೆ. ●

ಬಸವವಾದ ಮತ್ತು ಮಾರ್ಕ್ಸ್‌ವಾದ...... ಪುಟ 2 ರಿಂದ

ಬಸವಣ್ಣನವರು ಎಲ್ಲ ಜಾತಿ ಜನಾಂಗಗಳನ್ನು ಜಾತಿಯ ಸಂಕೋಲೆಗಳಿಂದ ಬಿಡಿಸಿ ಒಂದಾಗಿಸಿ ಜಾತ್ಯತೀತ ಶರಣಸಂಕುಲವನ್ನು ಸ್ಥಾಪಿಸಿದರು ಮತ್ತು ಸಮಾನತೆಯ ವಚನ ಚಳವಳಿಯನ್ನು ಆರಂಭಿಸಿದರು. ಕಾರ್ಲ್ ಮಾರ್ಕ್ಸ್ ಕೂಡ 19ನೇ ಶತಮಾನದ ಯುರೋಪ್ನಲ್ಲಿ ವರ್ಣಭೇದ ನೀತಿಯನ್ನು ಅಳಿಸಿ, ಕಾಯಕ ಜೀವಿಗಳನ್ನು ಒಂದುಗೂಡಿಸಿ ಶೋಷಣೆಯ ವಿರುದ್ಧ ಚಳವಳಿ ಆರಂಭಿಸಿದರು. ಎಲ್ಲ ಪ್ರಕಾರದ ಕಾಯಕಜೀವಿಗಳನ್ನು ಜಗತ್ತಿನಲ್ಲಿ ಮೊದಲ ಬಾರಿಗೆ ಒಗ್ಗೂಡಿಸಿ ಸಂಘಟಿಸಿದ ಕೀರ್ತಿಗೆ ಬಸವಣ್ಣನವರು ಭಾಜನರಾಗಿದ್ದಾರೆ.

ಸಮೂಹ ನಾಯಕತ್ವ ಮತ್ತು ಸಾಮೂಹಿಕ ನಾಯಕತ್ವದ ಪರಿಕಲ್ಪನೆ

ಬಸವಣ್ಣನವರು ಲಿಂಗಾಯತ ಧರ್ಮಕ್ಕೆ 770 ಶರಣರ ಸಮೂಹ ನಾಯಕತ್ವ ಒದಗಿಸಿದರೆ. ಮಾರ್ಕ್ಸ್ ಸಾಮೂಹಿಕ ನಾಯಕತ್ವದ ಪರಿಕಲ್ಪನೆ ಮೂಡಿಸಿದರು. ಬಸವಣ್ಣನವರು "ಬಿಜ್ಜಳನ ಭಂಡಾರವೆನಗೇಕಯ್ಯ" ಎಂದರು. ಶರಣಸಂಕುಲ ತನ್ನದೇ ನಿಯಮದ ಮೂಲಕ ಕ್ರಿಯಾಶೀಲವಾಗುವಂತೆ ಮಾಡಿದರು. ಬಸವಣ್ಣ ರಾಜ್ಯಶಕ್ತಿಯನ್ನು ಕಡೆಗಣಿಸುತ್ತಿದ್ದಾರೆ ಎಂದು ಮನುವಾದಿಗಳು ಗುಲ್ಲೆಬ್ಬಿಸುವಷ್ಟು ಶರಣರು ಸ್ವತಂತ್ರಧೀರರಾಗಿದ್ದರು. ಇದನ್ನೇ ಮಾರ್ಕ್ಸ್ ರಾಜ್ಯಶಕ್ತಿಯ ನಿರಾಕರಣೆ ಎಂದು ಕರೆದದ್ದು. "ವಿಪ್ರರು ಕೀಳು ನೋಡಾ ಜಗವೆಲ್ಲ ಅರಿಯಲು" ಎಂದು ಬಸವಣ್ಣನವರು ಹೇಳಿದರೆ, 'ಯುರೋಪಿನಲ್ಲಿ ಕ್ರೈಸ್ತರು ಸೃಷ್ಟಿಸಿದ ನರಕಕ್ಕಿಂತಲೂ ಅಸಹ್ಯವಾದ ನರಕವನ್ನು ಬ್ರಾಹ್ಮಣರು ಭಾರತದಲ್ಲಿ ಸೃಷ್ಟಿಸಿದ್ದಾರೆ' ಎಂದು ಮಾರ್ಕ್ಸ್ ಹೇಳಿದ್ದಾರೆ.

ಎರಡೂ ವಾದಗಳಲ್ಲಿ ಕಾಯಕಜೀವಿಗಳಿಗೇ ಮಹತ್ವದ ಸ್ಥಾನವಿದೆ. ಎರಡೂ ವಾದಗಳು ಶೋಷಣೆಯನ್ನು ವಿರೋಧಿಸುತ್ತವೆ. ಬಿಜ್ಜಳನ ರಾಜ್ಯಶಕ್ತಿಯಿಂದ ಕೂಡಿದ್ದ ಆಳುವವರ್ಗ ಶರಣರ ಕಗ್ಗೊಲೆ ಮಾಡಿತು. ಅವರ ಹೋರಾಟವನ್ನು ಹತ್ತಿಕ್ಕಿತು. ವಿವಿಧ ದೇಶಗಳಲ್ಲಿ ಆಳುವ ವರ್ಗಗಳು ಕಮ್ಯುನಿಸ್ಟರನ್ನು ಕೊಲೆ ಮಾಡಿವೆ ಮತ್ತು ಅವರ ಹೋರಾಟವನ್ನು ಹತ್ತಿಕ್ಕಿವೆ. ಬಸವವಾದ ಜಗತ್ತಿನ ದುಡಿಯುವ ಜನರ ಮೊದಲ ಸಿದ್ಧಾಂತವಾಗಿದೆ. ಮಾರ್ಕ್ಸ್‌ವಾದ ಕೂಡ ದುಡಿಯುವವರ ಸಿದ್ಧಾಂತವೇ ಆಗಿದೆ.

ಬಸವವಾದಿ ಸಿದ್ಧಾಂತದ ರೂಪುರೇಷೆಗಳು ಮಾರ್ಕ್ಸ್‌ವಾದದಲ್ಲಿವೆ

ಹನ್ನೆರಡನೇ ಶತಮಾನದಲ್ಲಿನ ಈ ಬಸವವಾದಿ ಸಿದ್ಧಾಂತದ ರೂಪುರೇಷೆಗಳು 19ನೇ ಶತಮಾನದಲ್ಲಿ ಯುರೋಪಿನಲ್ಲಿ ಹುಟ್ಟಿದ ಮಾರ್ಕ್ಸ್‌ವಾದದಲ್ಲಿವೆ. ಬಸವಣ್ಣನವರು ವರ್ಗರಹಿತ ವ್ಯವಸ್ಥೆಯ ಪ್ರಜ್ಞೆಯಿಂದ ಕೂಡಿದ ಜಗತ್ತಿನ ಮೊದಲ ಸಮಾನತಾವಾದಿ. ಮಾರ್ಕ್ಸ್ ಎರಡನೇ ಸಮಾನತಾವಾದಿ. ಬಸವಣ್ಣನವರು ಕಾಯಕಜೀವಿಗಳ ಪರ್ಯಾಯ ಸಮಾಜದ ಮೊದಲ ರೂವಾರಿಗಳಾದರು. ಜಗತ್ತಿಗೆ ಮಾರ್ಗದರ್ಶಿಗಳಾದರು. ಸಮಾನತೆಗಾಗಿ ಕಾಯಕಜೀವಿಗಳನ್ನು ಒಂದುಗೂಡಿಸಲು ಜಗತ್ತಿನಲ್ಲಿ ಮೊದಲ ಬಾರಿಗೆ ಚಳವಳಿ ಪ್ರಾರಂಭಿಸಿದವರು ಬಸವಾದಿ ಶರಣರು. ಅವರ ಚಳವಳಿ ವಚನ ಚಳವಳಿ ಎಂದೇ ಹೆಸರಾಗಿದೆ. ಇದು ಜಗತ್ತಿಗೆ ಬಸವವಾದದ ಬಹುದೊಡ್ಡ ಕಾಣಿಕೆಯಾಗಿದೆ. ಅದಕ್ಕೂ ಮೊದಲು ಯುದ್ಧಗಳ ಮೂಲಕವೇ ಒಂದು ಪ್ರದೇಶದ ಭವಿಷ್ಯವನ್ನು ನಿರ್ಧರಿಸಲಾಗುತ್ತಿತ್ತು. 'ಕೆಟ್ಟ ರಾಜನಿಗೆ ವಿರುದ್ಧವಾಗಿ ಒಳ್ಳೆಯ ರಾಜ, ಅನ್ಯಾಯದ ಯುದ್ಧಕ್ಕೆ ವಿರುದ್ಧವಾಗಿ ನ್ಯಾಯಬದ್ಧ ಯುದ್ಧ' ಎಂಬುದು ವಿಶ್ವದ ನಿಯಮವಾಗಿತ್ತು. ಆದರೆ ಯುದ್ಧವಿಲ್ಲದೆ ಕೇವಲ ಚಳವಳಿಯ ಮೂಲಕ ಹೊಸ ಜಗತ್ತಿನ ನಿರ್ಮಾಣ ಮಾಡುವ ಕಲೆಯನ್ನು ಕಲಿಸಿದವರು ಬಸವಣ್ಣನವರು! ಶರಣರು ಉತ್ಪಾದನೆಯ, ಸ್ವಾವಲಂಬನೆಯ, ಆತ್ಮ ಗೌರವದ, ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದ ವಿರೋಧದ ಚಳವಳಿಯಲ್ಲಿ ತೊಡಗಿದ್ದರು. ರಾಜ್ಯಶಕ್ತಿಯ ಮೇಲೆ ಅವಲಂಬಿತರಾಗದೆ ಪರ್ಯಾಯ ಸಮಾಜವಾದ ಶರಣಸಂಕುಲವನ್ನು ಸ್ಥಾಪಿಸಿದರು. ಇದು ಜಗತ್ತಿನ ಮೊದಲ ಸರ್ವಸಮತ್ವದ ಸಮಾಜವಾಗಿದೆ.

ಮಾರ್ಕ್ಸ್‌ವಾದ 700 ವರ್ಷಗಳ ನಂತರ ಬಂದು ಇಂಥದೇ ದುಡಿಯುವ ಜನರ ಹೋರಾಟ ಆರಂಭಿಸಿತು. ವರ್ಗಹೋರಾಟವು ಯುದ್ಧವಿರೋಧಿಯಾಗಿದೆ. ಹಿಂಸೆಯನ್ನು ತಿರಸ್ಕರಿಸುತ್ತದೆ. ಕಾಯಕಜೀವಿಗಳದ್ದು ಸದಾ ರಕ್ಷಣಾತ್ಮಕ ಹೋರಾಟವಾಗಿರುತ್ತದೆ ಹೊರತಾಗಿ ಆಕ್ರಮಣಕಾರಿ ಯುದ್ಧವಾಗಿರುವುದಿಲ್ಲ. ಶರಣರ ಸಂಕುಲಕ್ಕೂ ಮಾರ್ಕ್ಸ್ ಹೇಳಿದ ಕಮ್ಯೂನ್‌ಗೂ ಒಂದೇ ಅರ್ಥವಿದೆ. ಇವೆರಡು ಪದಗಳ ಆಧಾರ 'ಸಮತೆ' ಆಗಿದೆ.

ಜಗತ್ತು ಇಂದು ಹೀನಾಯ ಸ್ಥಿತಿ ತಲುಪಿದೆ. ಬಸವವಾದ ಜಗತ್ತನ್ನು ರಕ್ಷಿಸಿ, ಅದಕ್ಕೆ ಮತ್ತೆ ಹೊಸತನ ತರುವ ಶಕ್ತಿಯನ್ನು ಹೊಂದಿದೆ. ಲಿಂಗಾಯತರು ಬರಿ ಧಾರ್ಮಿಕತೆಯಲ್ಲೇ ಮುಳುಗಬಾರದು. ಬಸವಣ್ಣನವರ ರಾಜನೀತಿ, ಆಡಳಿತ, ಅರ್ಥಶಾಸ್ತ್ರ, ಮನೋವಿಜ್ಞಾನ, ಸಾಮಾಜಿಕ ಮನೋವಿಜ್ಞಾನ, ಮನುವಾದಿ ವ್ಯವಸ್ಥೆಗೆ ಪರ್ಯಾಯವಾಗಿ ಮಾನವತಾವಾದಿ ವ್ಯವಸ್ಥೆಗೆ ಅವರು ಸಿದ್ಧಪಡಿಸಿದ ನೀಲನಕ್ಷೆ, ನವ ಸಮಾಜ ನಿರ್ಮಾಣದಲ್ಲಿ ಕಾಯಕಜೀವಿಗಳ ಒಗ್ಗಟ್ಟಿನ ಶಕ್ತಿಯ ಮೇಲೆ ಅವರಿಗಿದ್ದ ಅಚಲ ಬದುಕಿನ ಎಲ್ಲ ಆಯಾಮಗಳಲ್ಲಿ ಸಮಾನತೆಯೊಂದಿಗೆ ಸೃಜನಶೀಲತೆಯನ್ನು ಕಾಣುವ ಅವರ ಹಂಬಲ ಹೊಸ ಜಗತ್ತಿಗೆ ನಾಂದಿ ಹಾಡುವಂತಾಗಲಿ.

ಕೃಪೆ–ವಾರ್ತಾಭಾರತಿ (ಏಪ್ರಿಲ್ 25, 2020)



'ಎಕ್ಸಿಡಿ ಕ್ಲಚ್' ಕಾರ್ಮಿಕರ ಹೋರಾಟ ನಿರ್ಣಾಯಕ ಘಟ್ಟಕ್ಕೆ..

ಕೋಲಾರ ಜಿಲ್ಲೆ, ನರಸಾಪುರ ಕೈಗಾರಿಕಾ ಪ್ರದೇಶದ 'ಎಕ್ಸಿಡಿ ಕ್ಲಚ್ ಇಂಡಿಯಾ ಪ್ರೈ.ಲಿ.' ಕಾರ್ಖಾನೆಯ ಕಾರ್ಮಿಕರು ನ್ಯಾಯಬದ್ಧವಾದ ವೇತನ ಹೆಚ್ಚಳಕ್ಕಾಗಿ, ಕಾರ್ಮಿಕರನ್ನು ಬಲಿಪಶು ಮಾಡುವ ನೀತಿಯ ವಿರುದ್ಧ ಸಿಐಟಿಯು ನೇತೃತ್ವದಲ್ಲಿ ನಡೆಸಿದ ಸುದೀರ್ಘ ಹೋರಾಟಕ್ಕೆ ಮೊದಲ ಹಂತದ ಜಯ ಸಿಕ್ಕಿದ್ದು, ಹೋರಾಟ ಈಗ ನಿರ್ಣಾಯಕ ಘಟ್ಟಕ್ಕೆ ಬಂದು ನಿಂತಿದೆ.

'ಎಕ್ಸಿಡಿ ಕ್ಲಚ್ ಇಂಡಿಯಾ ಪ್ರೈ.ಲಿ.' ಎಂಬುದು 2010 ರಿಂದ ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಕಾರ್ಖಾನೆ. ಇದು ಜಪಾನ್ ಮೂಲದ ಒಂದು ಕಂಪನಿ. ಕಾರುಗಳು ಹಾಗು ದ್ವಿಚಕ್ರ ವಾಹನಗಳಿಗೆ ಅಗತ್ಯವಾದ ಕ್ಲಚ್ ಗಳನ್ನು ಈ ಕಾರ್ಖಾನೆಯಲ್ಲಿ ಉತ್ಪಾದನೆ ಮಾಡಲಾಗುತ್ತಿದೆ. ಈ ಕಾರ್ಖಾನೆಯಲ್ಲಿ ಸುಮಾರು 450 ಜನ ಖಾಯಂ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಸುಮಾರು 600 ಜನ ಖಾಯೇಮತರ ಹಂಗಾಮಿ ಕೆಲಸಗಾರರು ಕೆಲಸಮಾಡುತ್ತಿದ್ದಾರೆ. ಇಲ್ಲಿ ಕೆಲಸ ಮಾಡುತ್ತಿರುವ ಬಹುತೇಕ ಕಾರ್ಮಿಕರು ಇದೇ ಕಾರ್ಖಾನೆಯಲ್ಲಿ ಕನಿಷ್ಟ 10 ವರ್ಷಗಳ ಅನುಭವ ಹೊಂದಿರುವವರಾಗಿದ್ದಾರೆ. ಕನಿಷ್ಟ ಹತ್ತು ವರ್ಷಗಳ ಶ್ರಮವಹಿಸಿ ದುಡಿದ ಕಾರ್ಮಿಕರಿಗೂ ಗರಿಷ್ಟ ಎಂದರೆ 30 ಸಾವಿರ ತಿಂಗಳ ವೇತನ. ಶಿಕ್ಷಣ ಶುಲ್ಕಗಳು, ಆರೋಗ್ಯ ವೆಚ್ಚ, ಆಹಾರ ವಸ್ತುಗಳ ಬೆಲೆಗಳು, ಗ್ಯಾಸ್, ಪೆಟ್ರೋಲ್, ಡಿಸೇಲ್, ಮನೆ ಬಾಡಿಗೆ ಮುಂತಾದವುಗಳೆಲ್ಲವುಗಳ ವೆಚ್ಚವೂ ಯದ್ವಾತದ್ವಾ ಏರುತ್ತಿರುವ ಈ ದಿನಗಳಲ್ಲಿ ಈ ವೇತನದಲ್ಲಿ ಬದುಕುವುದು, ಕುಟುಂಬವನ್ನು ಸಲಹುವುದು ಕಾರ್ಮಿಕರಿಗೆ ದುಸ್ತರವಾಗಿದೆ. ಆಡಳಿತ ಮಂಡಳಿ ಹಾಗೂ ಕಾರ್ಮಿಕ ಸಂಘದ ಜೊತೆಗೆ ಈ ಹಿಂದೆ 2020 ರಲ್ಲಿ ಆಗಿದ್ದ ವೇತನ ಒಪ್ಪಂದದ ಅವಧಿ ಮುಗಿದಿದ್ದರಿಂದ ಕಾರ್ಮಿಕ ಸಂಘವು ನ್ಯಾಯಬದ್ಧವಾಗಿ, ಕಾನೂನುಬದ್ಧವಾಗಿ ಆಗಬೇಕಾದ ವೇತನ ಹೆಚ್ಚಳದ ಸಂಬಂಧ ಆಡಳಿತ ಮಂಡಳಿಗೆ ಬೇಡಿಕೆ ಪಟ್ಟಿ ಸಲ್ಲಿಸಿತು.

ಶ್ರಮವಹಿಸಿ, ಬೆವರು ಸುರಿಸಿ ಉತ್ಪಾದನೆ ಮಾಡುವ ಕಾರ್ಮಿಕರು, ತಮಗೆ ನ್ಯಾಯಬದ್ಧವಾಗಿ ಸಿಗಬೇಕಾದ ವೇತನಕ್ಕಾಗಿ, ವೇತನ ಹೆಚ್ಚಳಕ್ಕಾಗಿ ಕಾನೂನುಬದ್ಧ ಮಾರ್ಗದಲ್ಲಿ ಹೋಗುತ್ತಿದ್ದರೆ, ಇಲ್ಲಿ ಆಡಳಿತ ಮಂಡಳಿಯದು ಕಾರ್ಮಿಕ ವಿರೋಧಿ ಧೋರಣೆಯ ಭಿನ್ನ ಮಾರ್ಗವಾಗಿದೆ. 2020 ರಲ್ಲಿ ಆದ ವೇತನ ಒಪ್ಪಂದವೂ ಸರಾಗವಾಗಿಯೇನೂ ಆಗಿರಲಿಲ್ಲ. ಕಾರ್ಮಿಕರು ನ್ಯಾಯಕ್ಕಾಗಿ 2016, 2018 ರಲ್ಲೂ ಮತ್ತು ನಂತರವೂ ಹೋರಾಟಗಳನ್ನು ಮಾಡಿಕೊಂಡೇ ಬಂದಿದ್ದಾರೆ. 2018 ರಲ್ಲಿ ಕಾರ್ಖಾನೆಯ ಆಡಳಿತ ವರ್ಗವು ಸುಮಾರು 24 ಕಾರ್ಮಿಕರ ಮೇಲೆ, ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅಗತ್ಯ ಪ್ರಮಾಣದ ಉತ್ಪಾದನೆಯನ್ನು ನೀಡುತ್ತಿಲ್ಲ, ಸೂಪರ್ ವೈಸರ್ ರನ್ನು ನಿಂದಿಸಿದ್ದಾರೆ ಮುಂತಾದ ಸುಳ್ಳು ಆಪಾಧನೆಗಳನ್ನು ಹೊರಿಸಿ ಕಾರ್ಮಿಕರನ್ನು ಅಮಾನತ್ತುಗೊಳಿಸುವ ಶಿಸ್ತಿನ ಕ್ರಮ ಜರುಗಿಸಿತ್ತು. ಈ ಕಾರ್ಮಿಕರ ಅಮಾನತ್ತು ಆದೇಶವನ್ನು ಹಿಂಪಡೆದು ಅವರಿಗೆ ಕೆಲಸಕೊಡಬೇಕೆಂದು ಹಾಗು ಎಲ್ಲಾ ಕಾರ್ಮಿಕರಿಗೂ ವೇತನ ಹೆಚ್ಚಳವನ್ನು ಕೊಡಬೇಕೆಂದು ಕಾರ್ಮಿಕ ಸಂಘವು ಒತ್ತಾಯಿಸಿತ್ತು.



ಇದರ ಪರಿಣಾಮ 2020ರಲ್ಲಿ ವೇತನ ಒಪ್ಪಂದ ಏರ್ಪಟ್ಟಿತ್ತು. ಆ ವೇತನ ಒಪ್ಪಂದಕ್ಕೆ ಸಹಿ ಆದ ದಿನದಿಂದ 15 ದಿನಗಳ ಒಳಗಾಗಿ ಅಥವಾ 5 ಸಭೆಗಳಲ್ಲಿ ಅಮಾನತ್ತಿನಲ್ಲಿರುವ ಕಾರ್ಮಿಕರ ವಿಚಾರವನ್ನು ಮಾತುಕತೆಯ ಮೂಲಕ ಇತ್ಯರ್ಥ ಮಾಡುವುದಾಗಿ ಆಗ ಆಡಳಿತ ವರ್ಗವು ಲಿಖಿತವಾಗಿ ಒಪ್ಪಿಗೆ ನೀಡಿತ್ತು. ಆದರೆ ಒಂದು ವರ್ಷಗಳು ಕಳೆದರೂ ಸಮಸ್ಯೆಯನ್ನು ಇತ್ಯರ್ಥ ಮಾಡಲಿಲ್ಲ. ಈ ಎಲ್ಲಾ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಕಾರ್ಮಿಕ ಸಂಘವು ಪ್ರತಿಭಟನೆಗಳನ್ನು ನಡೆಸಿತ್ತು. ಕಾರ್ಮಿಕರ ಹೋರಾಟದ ಪರಿಣಾಮವಾಗಿ ಈ ವಿಷಯದಲ್ಲಿ ಸರ್ಕಾರದ ಮಧ್ಯಪ್ರವೇಶವಾಯಿತು. ಈ ಹಿನ್ನೆಲೆಯಲ್ಲಿ 2021ರ ಆಗಸ್ಟ್ ತಿಂಗಳಲ್ಲಿ ಕಾರ್ಮಿಕ ಸಂಘಟನೆ ಹಾಗೂ ಆಡಳಿತ ವರ್ಗದ ನಡುವಿನಲ್ಲಿ ಆದ ಒಪ್ಪಂದದ ಅನ್ವಯ 17 ಜನ ಕಾರ್ಮಿಕರನ್ನು ಅವರ ಸಮಾನ ಕಾರ್ಮಿಕರು ತೆಗೆದುಕೊಳ್ಳುತ್ತಿದ್ದ ವೇತನಕ್ಕಿಂತ ಕಡಿಮೆ ವೇತನಕ್ಕೆ ಮತ್ತೆ 'ಸ್ಟಾಫ್ ಗ್ರೇಡ'ಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲು ಹಾಗೂ ಒಂಬತ್ತು ತಿಂಗಳುಗಳ ನಂತರ ಅವರನ್ನು ಮತ್ತೆ 'ಕಾರ್ಮಿಕರ ಗ್ರೇಡ್'ಗೆ ತರಲು ಆಡಳಿತವರ್ಗವು ಲಿಖಿತ ಒಪ್ಪಿಗೆ ನೀಡಿತ್ತು. ಆದರೆ ಆಡಳಿತ ವರ್ಗವು ಮತ್ತೆ ಕಾರ್ಮಿಕರಲ್ಲಿ ಮೂಡಿಸಿದ ಭರವಸೆಗಳನ್ನು ಹುಸಿಗೊಳಿಸಿತು. ಲಿಖಿತವಾಗಿ ಕೊಟ್ಟ ಮಾತನ್ನೂ ಈಡೇರಿಸದೆ ಮೋಸ ಮಾಡಿತು.

ಕಾರ್ಖಾನೆಯಲ್ಲಿನ ಎಲ್ಲಾ ಕಾರ್ಮಿಕರಿಗೂ ದಿನಾಂಕ 01.04.2023ರಿಂದ ವೇತನ ಪರಿಷ್ಕರಣೆ ಆಗಬೇಕಿತ್ತು. ಇದರ ಬಗ್ಗೆ ಕಾರ್ಮಿಕ ಸಂಘಟನೆಯು ಬೇಡಿಕೆ ಪಟ್ಟಿಯನ್ನು ಸಲ್ಲಿಸಿತ್ತು. ಆಡಳಿತ ವರ್ಗ ಮಾತುಕತೆಗೆ ಮುಂದಾಗುವ ಬದಲು ಕಾರ್ಮಿಕ ಇಲಾಖೆಯಲ್ಲಿ ಸಂಘದ ವಿರುದ್ಧ ದೂರು ಸಲ್ಲಿಸಿತು. ಈ ಸಂಬಂಧ ಬೆಂಗಳೂರಿನಲ್ಲಿರುವ ಕಾರ್ಮಿಕ ಇಲಾಖೆಯ ಉಪ ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ನಡೆದ ರಾಜಿ ಸಂಧಾನ ಸಭೆಯಲ್ಲಿ ಕಾರ್ಮಿಕರಿಗೆ ರೂ. 12,000 ವೇತನ ಹೆಚ್ಚಳವನ್ನು ಮಾಡಲು ಹಾಗು ಎಲ್ಲಾ ಕಾರ್ಮಿಕರು ಸ್ಥಾಯಿ ಆದೇಶಗಳಲ್ಲಿನ ಶಿಸ್ತು ಪರಿಪಾಲನೆ ಮಾಡುವುದಾಗಿ ಮುಚ್ಚಳಿಕೆ ಪತ್ರಕ್ಕೆ ಸಹಿ ಹಾಗು ಹೆಬ್ಬಟ್ಟು ಮುದ್ರೆ ಹಾಕಿ ಕೊಟ್ಟಲ್ಲಿ 17 ಜನರನ್ನು ಕಾರ್ಮಿಕರ ಗ್ರೇಡಿಗೆ ಪರಿವರ್ತಿಸುವುದಾಗಿ ವೇತನ ಒಪ್ಪಂದದ ಕರಡನ್ನು ಆಡಳಿತ ವರ್ಗವೇ ಮಂಡಿಸಿತ್ತು. ಕಾರ್ಖಾನೆಯಲ್ಲಿನ ಎಲ್ಲಾ ಕಾರ್ಮಿಕರು ಐಟಿಐ ವಿದ್ಯಾಭ್ಯಾಸ ಪಡೆದವರಾಗಿದ್ದು, ಅವರಿಂದ ಹೆಬ್ಬೆಟ್ಟು ಒತ್ತಿಸಿಕೊಳ್ಳುವುದು ಸರಿಯಾದ ವಿಧಾನವಲ್ಲ ಎಂದು ತಿಳಿಸಿದ ಕಾರ್ಮಿಕ ಸಂಘವು, ಶಿಸ್ತು ಪರಿಪಾಲನೆಯ ಮುಚ್ಚಳಿಕೆ ನೀಡಲು ಸಿದ್ದವಿದ್ದೇವೆ ಎಂದು ತಿಳಿಸಿ ಒಪ್ಪಂದಕ್ಕೆ ಸಹಿ ಹಾಕ ಬೇಕೆಂದು ಕೋರಿತು. ಇದನ್ನು ಒಂದು ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಂಡ ಆಡಳಿತ ವರ್ಗವು ಕಾರ್ಮಿಕರು ಸಹಿ ಹಾಕುವ ಜೊತೆಗೆ ಹೆಬ್ಬೆಟ್ಟು ಮುದ್ರೆ ಕೊಡಲು ಒತ್ತಾಯಿಸಿತು. ಈ ಸಂದರ್ಭದಲ್ಲಿ ವೇತನ ಒಪ್ಪಂದಕ್ಕೆ ಸಹಿ ಮಾಡುವ ಜೊತೆಗೆ ಕಾರ್ಮಿಕರು ಹೆಬ್ಬೆಟ್ಟು ಒತ್ತಬೇಕೆಂದಾದರೆ, ಆಡಳಿತ ವರ್ಗದ ಪ್ರತಿನಿಧಿಗಳು ಸಹ ಸಹಿಯ ಜೊತೆಗೆ ಹೆಬ್ಬೆಟ್ಟು ಒತ್ತಬೇಕೆಂದು ಸಂಘದ ಪ್ರತಿನಿಧಿಗಳು ಒತ್ತಾಯಿಸಿದರು.

ಕೊನೆಯಲ್ಲಿ ಕಾರ್ಮಿಕರು ಪ್ರತಿಷ್ಠೆ ಬಿಟ್ಟು ಹೆಬ್ಬೆಟ್ಟು ಒತ್ತಲು ಒಪ್ಪಿದರೂ, ಆಡಳಿತ ವರ್ಗವು 17 ಜನರನ್ನು ಕಾರ್ಮಿಕರೆಂದು ಪರಿಗಣಿಸುವುದಿಲ್ಲ ಎಂದು ಒಪ್ಪಂದದ ಶರತ್ತುಗಳಿಂದ ಹಿಂದಕ್ಕೆ ಸರಿಯಿತು. ಈ ಮೋಸದ ವಿರುದ್ಧ ಮಾರ್ಚ್ 25, 2024 ರಿಂದ ಎಲ್ಲಾ ಕಾರ್ಮಿಕರು ಶಾಂತಿಯುತ ಮುಷ್ಕರದಲ್ಲಿ ಭಾಗಿಯಾಗಿ ಚಳುವಳಿ ಆರಂಭಿಸಿದರು. ಒಂದು ತಿಂಗಳು ದಾಟಿ ಮುಂದೆ ಹೋದರೂ ಆಡಳಿತ ವರ್ಗವು ಸಮಸ್ಯೆಗಳನ್ನು ಇತ್ಯರ್ಥ ಮಾಡಲು ಮುಂದಾಗಲಿಲ್ಲ. ಈ ಅವಧಿಯಲ್ಲಿ ಕಾನೂನು ಬಾಹಿರವಾಗಿ ತರಬೇತಿಯ ಹೆಸರಿನಲ್ಲಿ ಸುಮಾರು 200 ಜನ ಟ್ರೈನಿಗಳನ್ನು ನೇಮಕಮಾಡಿಕೊಂಡಿತು. 17 ಜನರ ಜೊತೆಗೆ ಏಪ್ರಿಲ್ 30, 2024 ರಂದು ಮತ್ತೆ 11 ಜನರನ್ನು ಅಮಾನತು ಮಾಡಿತು. ಕಾರ್ಮಿಕ ಇಲಾಖೆಯ ಯಾವುದೇ ಸಲಹೆಗಳನ್ನು ಒಪ್ಪಲಿಲ್ಲ. ದೇಶದ ಕಾನೂನುಗಳನ್ನು ಉಲ್ಲಂಘನೆ ಮಾಡಿತು. ಕಾರ್ಖಾನೆಗಾಗಿ ಭೂಮಿ ಕಳೆದುಕೊಂಡ ರೈತರ ಮಕ್ಕಳು ಹಾಗು ಈ ಉದ್ಯೋಗವನ್ನೇ ಆಧರಿಸಿ ಜೀವನ ರೂಪಿಸಿಕೊಂಡಿರುವ ಕಾರ್ಮಿಕರು ಬೀದಿಪಾಲಾಗುವ ಸನ್ನಿವೇಶ ಬಂದರೂ ಆಡಳಿತ ವರ್ಗ ಹಠ ಮಾಡಿತು. ಇದರಿಂದಾಗಿ ಹೋರಾಟವನ್ನು ತೀವ್ರಗೊಳಿಸಿದ ಕಾರ್ಮಿಕರು ಉಪವಾಸ ಮುಷ್ಕರ ಆರಂಭಿಸಿದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಅವರು ನೇತೃತ್ವ ನೀಡುತ್ತಿರುವ ಈ 'ಎಕ್ಸಿಡಿ ಕ್ಲಚ್ ಎಂಪ್ಲಾಯಿಸ್ ಯೂನಿಯನ್' ಕಾರ್ಮಿಕ ಸಂಘಟನೆಯ ಅಧ್ಯಕ್ಷರಾದ ವಿ.ಹರೀಶ್, ಉಪಾಧ್ಯಕ್ಷರಾದ ಶರತ್ ಕುಮಾರ್, ಹಾಗೂ ಖಜಾಂಜಿ ಮಂಜುನಾಥ್ ಸೇರಿದಂತೆ ಒಟ್ಟು ಹತ್ತು ಜನರು 7 ದಿನಗಳ ಕಾಲ ಉಪವಾಸ ಸತ್ಯಾಗ್ರಹವನ್ನು ನಡೆಸಿದರು. ಈ ಎಲ್ಲ ಹೋರಾಟಗಳ ಫಲವಾಗಿ ವಿಷಯದಲ್ಲಿ ಕೋಲಾರ ಜಿಲ್ಲಾಧಿಕಾರಿಗಳ ಮಧ್ಯಪ್ರವೇಶವಾಗಿದೆ ಮತ್ತು ಕಾರ್ಮಿಕರ ಹೋರಾಟಕ್ಕೆ ಮೊದಲ ಹಂತದ ಜಯ ಸಿಕ್ಕಂತಾಗಿದೆ.

ಜಿಲ್ಲಾಧಿಕಾರಿಗಳ ಮಧ್ಯ ಪ್ರವೇಶ

ಕಾರ್ಮಿಕ ಚಳುವಳಿ, ಹೋರಾಟಗಳ ನಡುವೆ 6 ಮೇ 2024 ರಂದು ಕಾರ್ಮಿಕ ಇಲಾಖೆಯು ಆಡಳಿತ ಮಂಡಳಿ ಮತ್ತು ಕಾರ್ಮಿಕ ವರ್ಗ ಎರಡೂ ಪಕ್ಷಗಳಿಗೂ ಅನ್ವಯವಾಗುವ ಆದೇಶ ನೀಡಿ, ಕಾರ್ಮಿಕರು ಮುಷ್ಕರವನ್ನು ನಿಲ್ಲಿಸಿ ಕೆಲಸಕ್ಕೆ ತೆರಳಬೇಕೆಂದೂ ಹಾಗೂ ಈ ಕಾರ್ಮಿಕ ವಿವಾದವನ್ನು ಕಾರ್ಮಿಕ ನ್ಯಾಯಾಲಯದಲ್ಲಿ ಇತ್ಯರ್ಥ ಪಡಿಸಲು ಕ್ರಮವಹಿಸಲಾಗುವುದು ಎಂದೂ ತಿಳಿಸಿತು. ಕಾರ್ಮಿಕ ಇಲಾಖೆಯ ಈ ಆದೇಶವನ್ನು ಗೌರವಿಸಿ ಕಾರ್ಮಿಕರು ಕೆಲಸಕ್ಕೆ ಮರಳಿ ಬರುತ್ತಿರುವುದಾಗಿ ಆಡಳಿತ ವರ್ಗಕ್ಕೆ ಅಂದೇ ಪತ್ರದ ಮುಖೇನ ತಿಳಿಸಿದರು. ಆದರೆ ಆಡಳಿತ ವರ್ಗದವರು ಮೇ 9, 2024 ರಂದು ಕೆಲಸಕ್ಕೆ ಬರುವಂತೆ ಸೂಚಿಸಿದರು. ಅದರಂತೆ ಮೇ 9 ರಂದು ಕಾರ್ಮಿಕರು ಕೆಲಸಕ್ಕೆಂದು ಬಂದಾಗ ಆಡಳಿತ ವರ್ಗದವರು ಕಾರ್ಮಿಕ ಇಲಾಖೆಯ ಆದೇಶವನ್ನು ಗೌರವಿಸದೇ, ಕಾರ್ಮಿಕರನ್ನು ಕೆಲಸಕ್ಕೆ ಒಳಗಡೆ ಬಿಡದೆ ಗೇಟ್ ಮುಂಭಾಗದಲ್ಲಿ ನಿಲ್ಲಿಸಿ ಕಾರ್ಮಿಕರಿಗೆ ಕೆಲಸ ನಿರಾಕರಿಸಿದರು. ಆಡಳಿತ ವರ್ಗದವರು ಕಾರ್ಮಿಕ ಇಲಾಖೆಯ ಆದೇಶವನ್ನು ಧಿಕ್ಕರಿಸಿ ಕಾರ್ಮಿಕ ವಿರೋಧಿ ಧೋರಣೆ ಅನುಸರಿಸಿದಾಗ ಕೋಲಾರ ಜಿಲ್ಲಾಧಿಕಾರಿಗಳಾದ ಅಕ್ರಂ ಪಾಶರವರು ಮಧ್ಯ ಪ್ರವೇಶಿಸಿ ಆಡಳಿತ ಮಂಡಳಿ ಹಾಗೂ ಸಂಘದ ಜೊತೆ ಜಂಟಿ ಸಭೆ ನಡೆಸಿ ಒಂದು ಹಂತದ ನ್ಯಾಯ ಒದಗಿಸಿರುತ್ತಾರೆ. ಸಭೆಯಲ್ಲಿ ಆಗಿರುವ ಸಂಧಾನದಂತೆ ಕಾರ್ಮಿಕರು ಕಾರ್ಖಾನೆಗೆ ಹೋಗಿ ಕೆಲಸವನ್ನು ಆರಂಭಿಸಿದ್ದಾರೆ. ಜಿಲ್ಲಾಧಿಕಾರಿಗಳು ಮೇ 14, 2024 ರಂದು ಮುಂದಿನ ಸಭೆಯನ್ನು ನಿಗದಿ ಪಡಿಸಿದ್ದು, ಕಾರ್ಮಿಕರು ಆ ಸಭೆಯಲ್ಲಿ ಈಗ ಕಾರ್ಖಾನೆಯಿಂದ ಹೊರಗುಳಿಸಲಾಗಿರುವ 17 ಮತ್ತು 11, ಒಟ್ಟು 28 ಕಾರ್ಮಿಕರ ವಿಚಾರವಾಗಿ ನ್ಯಾಯ ಒದಗಿಸುವ ಭರವಸೆಯನ್ನು ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳ ಭರವಸೆ ಮತ್ತು ಮಾತುಗಳನ್ನು ಗೌರವಿಸಿ ಕಾರ್ಮಿಕರು ಮುಷ್ಕರ ನಿಲ್ಲಿಸಿ ಕಾರ್ಖಾನೆಯಲ್ಲಿ ಉತ್ಪಾದನೆಯಲ್ಲಿ ತೊಡಗಿದ್ದಾರೆ. ಅದೇ ರೀತಿ ಕಾರ್ಖಾನೆಯ ಆಡಳಿತ ಮಂಡಳಿ ಸಹ ಕಾರ್ಮಿಕ ಕಾನೂನುಗಳನ್ನು ಗೌರವಿಸಿ ಅದರಂತೆ ನಡೆದುಕೊಳ್ಳುತ್ತದೆ ಎಂದು ಕಾರ್ಮಿಕರು ನಿರೀಕ್ಷಿಸುತ್ತಿದ್ದಾರೆ.

ವರದಿ–ಆರ್. ರಾಮಕೃಷ್ಣ

ಪ್ರಾಚೀನ ಸಮಾಜವೂ ಆಧುನಿಕ ಚಹರೆಯೂ

ಹಾಸನದ ಪ್ರಕರಣವು ಭಾರತೀಯ ಸಮಾಜದ ಪ್ರಾಚೀನ ಲಕ್ಷಣಗಳನ್ನು ಸಾಬೀತುಪಡಿಸಿದೆ

ನಾ ದಿವಾಕರ

ಇತಿಹಾಸದುದ್ದಕ್ಕೂ ಮಾನವ ಸಮಾಜದ ಬೆಳವಣಿಗೆಯನ್ನು ಗಮನಿಸಿದಾಗ ಅಲ್ಲಿ ಢಾಳಾಗಿ ನಮಗೆ ಕಾಣುವುದು ವಿವಿಧ ಸಮಾಜಗಳ ನಡುವಿನ ಸಂಘರ್ಷಗಳು ಹಾಗೂ ಈ ಸಮಾಜಗಳ ಒಳಗೆ ಘಟಿಸುವಂತಹ ಆಂತರಿಕ ಕಲಹಗಳು. ಯುದ್ಧ, ಹಿಂಸೆ, ಕ್ರೌರ್ಯ ಮತ್ತು ಯಜಮಾನಿಕೆಯ ದಬ್ಬಾಳಿಕೆ. ಈ ಎಲ್ಲ ಪ್ರಕ್ರಿಯೆಗಳಲ್ಲಿ ಸದಾಕಾಲವೂ ಹಲ್ಲೆಗೊಳಗಾಗಿರುವುದು, ಅಪಮಾನಿತರಾಗಿರುವುದು ಮಹಿಳಾ ಸಮೂಹ ಮತ್ತು ಸಮಾಜದ ಕೆಳಸ್ತರದ ಸಮುದಾಯಗಳು. ಆಧುನಿಕ ಯುಗದ ಯುದ್ಧ ಪರಂಪರೆಯೂ ಸಹ ಇದನ್ನೇ ಬಿಂಬಿಸುತ್ತದೆ. ರಾಷ್ಟ್ರೀಯತೆ ಅಥವಾ ಭೌಗೋಳಿಕ ವ್ಯಾಮೋಹಕ್ಕೊಳಗಾಗಿ, ಯುದ್ಧಗಳನ್ನು ವೈಭವೀಕರಿಸುವ ಮೇಲ್ಪದರದ ಸಮಾಜಗಳು (Elite socities) ಪಿತೃಪ್ರಧಾನ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವುದರಿಂದ ಅಲ್ಲಿ ನಲುಗಿಹೋಗುವ ಅಸಹಾಯಕ ಮಹಿಳಾ ಸಂಕುಲ ಹಾಗೂ ಶೋಷಿತ ಸಮುದಾಯಗಳು ಚರಿತ್ರೆಯ ಪುಟಗಳಲ್ಲಿ ಮರೆಯಾಗಿಹೋಗುತ್ತವೆ.



ಇದೇ ಚಾರಿತ್ರಿಕ ಪ್ರಮೇಯವನ್ನು ಆಧುನಿಕ ಜಗತ್ತಿಗೆ ಹೋಲಿಸಿ ನೋಡಿದಾಗ ಧರ್ಮದ್ವೇಷ ಮತ್ತು ಮತಸಂಘರ್ಷದ ಪ್ರಭಾವದಿಂದ ವಿವಿಧ ಸಮಾಜಗಳ ನಡುವೆ ನಡೆದಿರುವ ನೂರಾರು ಯುದ್ಧಗಳಲ್ಲಿ, ಕೋಮು ಸಂಘರ್ಷಗಳಲ್ಲಿ, ಮತೀಯ ಕಲಹಗಳಲ್ಲಿ ನಲುಗಿಹೋಗಿರುವ ಸಾವಿರಾರು ಮಹಿಳೆಯರು, ಶೋಷಿತರು ನಮಗೆ ಕಾಣುತ್ತಾರೆ. ಸಂಘರ್ಷವಾದಿಗಳು ಹಾಗೂ ಗಲಭೆಕೋರರ ದೃಷ್ಟಿಯಲ್ಲಿ Soft Target ಆಗಿಯೇ ಕಾಣುವ ಮಹಿಳೆಯರು ಅತ್ಯಾಚಾರ, ಕೊಲೆ, ಲೈಂಗಿಕ ದೌರ್ಜನ್ಯಕ್ಕೊಳಗಾಗುವುದು ಚಾರಿತ್ರಿಕ ವಾಸ್ತವ. ಗುಜರಾತ್ ಗಲಭೆಯ ಒಂದು ಪ್ರತ್ಯಕ್ಷ ಸಾಕ್ಷಿ ಬಿಲ್ಕಿಸ್ ಬಾನೋ ರೂಪದಲ್ಲಿ ನಮ್ಮ ನಡುವೆ ಇದ್ದೇ ಇದೆ. ಜಗತ್ತಿನಾದ್ಯಂತ ಹರಡಿರುವ ಮುಸ್ಲಿಂ ಭಯೋತ್ಪಾದಕ ಗುಂಪುಗಳು ಜಿಹಾದ್ ಅಥವಾ ಧರ್ಮಸಂಘರ್ಷದ ಹೆಸರಲ್ಲಿ ನಡೆಸುವ ಭೀಕರ ಯುದ್ಧಗಳಲ್ಲೂ ಮಹಿಳಾ ಸಮುದಾಯವೇ ಹೆಚ್ಚು ಬಲಿಯಾಗಿರುವುದನ್ನು ಚರಿತ್ರೆ ನಿರೂಪಿಸಿದೆ.

ವರ್ತಮಾನ ಸಮಾಜದ ಕರಾಳ ಚಹರೆ

ಆದರೆ ವರ್ತಮಾನ ಭಾರತದಲ್ಲಿ ಯುದ್ಧ, ಭಯೋತ್ಪಾದಕ ಕೃತ್ಯಗಳು, ಕೋಮು ಸಂಘರ್ಷದ ಹೊರತಾಗಿಯೂ ದಿನನಿತ್ಯ ಲಕ್ಷಾಂತರ ಮಹಿಳೆಯರು ಲೈಂಗಿಕ ದೌರ್ಜನ್ಯ, ಅತ್ಯಾಚಾರಗಳಿಗೆ ತುತ್ತಾಗುತ್ತಿರುವುದು ಏನನ್ನು ಸೂಚಿಸುತ್ತದೆ? ಯುದ್ಧ ಕಾಲದಲ್ಲಿ ನಡೆಯುವುದಕ್ಕಿಂತಲೂ ಭೀಕರವಾದ ಅತ್ಯಾಚಾರಗಳು ನಮ್ಮ ನಡುವೆ ಸಂಭವಿಸುತ್ತಲೇ ಇವೆ, ಅಪರಾಧಿಗಳು ಮುಕ್ತರಾಗಿಯೇ ಇದ್ದಾರೆ, ಸಂತ್ರಸ್ತೆಯರು ನ್ಯಾಯಕ್ಕಾಗಿ ಅಂಗಲಾಚುತ್ತಲೇ ಇದ್ದಾರೆ, ಇದು ಏನನ್ನು ಸೂಚಿಸುತ್ತದೆ. ಅಂದರೆ ಮಹಿಳಾ ದೌರ್ಜನ್ಯಗಳಿಗೆ ಯುದ್ಧ-ಕಲಹ-ಸಂಘರ್ಷಗಳು ಒಂದು ನೆಪ ಮಾತ್ರ, ಸಮಾಜದ ಮೇಲೆ ಯಜಮಾನಿಕೆ-ಪಾರಮ್ಯ ಸಾಧಿಸಿ ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಪುರುಷ ಸಮಾಜದ ಸಾರ್ವಕಾಲಿಕ ಹಪಹಪಿಯೇ ಮಹಿಳಾ ಸಂಕುಲಕ್ಕೆ ಅಪಾಯಕಾರಿಯಾಗಿ ಕಾಣುತ್ತದೆ. ಹಾಸನದಲ್ಲಿ ನಡೆದಿರುವ ಸಾಮೂಹಿಕ ಲೈಂಗಿಕ ದೌರ್ಜನ್ಯಗಳನ್ನು ಈ ದೃಷ್ಟಿಯಿಂದಲೇ ನೋಡಬೇಕಿದೆ.

ದುರಂತ ಎಂದರೆ ಭಾರತದ ರಾಜಕಾರಣದಲ್ಲಿ ಮಹಿಳಾ ದೌರ್ಜನ್ಯಗಳೂ ಅಸ್ಮಿತೆಯ ಚೌಕಟ್ಟುಗಳಿಗೆ ಸಿಲುಕಿ ಸಂತ್ರಸ್ತೆಯರು ವಿಂಗಡಿಸಲ್ಪಡುತ್ತಿದ್ದಾರೆ. ಹಾಗಾಗಿಯೇ ಉನ್ನಾವೋ, ಗುಜರಾತ್, ನಿರ್ಭಯ, ಹಾಥ್ರಸ್, ಧಾನಮ್ಮ, ಸೌಜನ್ಯ, ಹಾಸನಗಳಲ್ಲಿ ಕಾಣದ 'ಜಿಹಾದ್' ಅಥವಾ ಧರ್ಮಯುದ್ಧ ನೇಹಾ ಪ್ರಕರಣದಲ್ಲಿ ಕಾಣುತ್ತದೆ. ಬಿಜೆಪಿ ಸೃಷ್ಟಿಸಿರುವ ಹೊಸ ರಾಜಕೀಯ ಪರಿಭಾಷೆಯಲ್ಲಿ ಬಳಕೆಯಾಗುತ್ತಿರುವ ಲವ್ ಜಿಹಾದ್, ತುಕಡೆತುಕಡೆ ಗ್ಯಾಂಗ್, ಅರ್ಬನ್ ನಕ್ಸಲ್ ಮುಂತಾದ ಪದಗಳು ಅರ್ಥಹೀನವಾಗಿದ್ದರೂ ವಾಟ್ಸಾಪ್ ವಿದ್ವಾಂಸರು, ಮಾಧ್ಯಮ ಪಂಡಿತರು, ವಿದ್ಯುನ್ಮಾನ ಸುದ್ದಿಮನೆಗಳ ವಿದ್ವತ್ ವಲಯವು ಈ ಪದಗಳನ್ನೇ ಚರ್ಚೆಗಳ ಕೇಂದ್ರ ಬಿಂದುವಾಗಿ ಬಳಸುವುದರ ಪರಿಣಾಮ, ಹಾಸನದಲ್ಲಿ ನಡೆದ ಸಾಮೂಹಿಕ ಲೈಂಗಿಕ ದೌರ್ಜನ್ಯ ಪ್ರಕರಣಗಳು ಈ ವ್ಯಾಖ್ಯಾನಗಳಿಗೆ ಒಳಪಡದೆ ಕೇವಲ ಅಧಿಕಾರ ರಾಜಕಾರಣದ ಹೊಲಸಿನಲ್ಲಿ ಚರ್ಚೆಗೊಳಗಾಗುತ್ತಿವೆ.

ಮೂಲತಃ, ಊಳಿಗಮಾನ್ಯ ಸಮಾಜದ ಪಾಳೆಗಾರಿಕೆಯ ಅವಶೇಷಗಳನ್ನು ಇನ್ನೂ ಕಾಪಾಡಿಕೊಂಡಿರುವ ಒಂದು ಪಿತೃಪ್ರಧಾನ ಸಮಾಜ ಹೇಗೆ ಒಂದು ಸಮಾಜವನ್ನು ನಿರ್ಬಂಧಿಸಿ ನಿಯಂತ್ರಿಸುತ್ತದೆ ಎನ್ನುವುದನ್ನು ಹಾಸನದ ಪ್ರಕರಣಗಳು ನಿರೂಪಿಸಿವೆ. ಇಲ್ಲಿ ದೌರ್ಜನ್ಯಕ್ಕೊಳಗಾಗಿರುವ ಮಹಿಳೆಯರನ್ನು ಅತೃಪ್ತರು-ಆಕಾಂಕ್ಷಿತರು-ಆಮಿಷಕ್ಕೊಳಗಾದವರು ಎಂದು ವಿಂಗಡಿಸುವ ಅಗತ್ಯವಿಲ್ಲ. ರಾಜಕೀಯ ಅಧಿಕಾರ, ಸಾಮಾಜಿಕ ಪಾಳೆಗಾರಿಕೆ, ಆರ್ಥಿಕ ಯಜಮಾನಿಕೆ ಹಾಗೂ ಅಧಿಕಾರಶಾಹಿಯ ಆಡಳಿತ ದರ್ಪ ಇವೆಲ್ಲವುಗಳ ಸಮೀಕರಣವನ್ನು ಹಾಸನದ ಪ್ರಕರಣಗಳಲ್ಲಿ ಗುರುತಿಸಬಹುದು.

ಪ್ರಜಾಪ್ರಭುತ್ವದಲ್ಲೂ ಸಹ ಆಡಳಿತಶಾಹಿಯು ತನ್ನ ಪಾರಂಪರಿಕ ಊಳಿಗಮಾನ್ಯ ಲಕ್ಷಣಗಳನ್ನು ಪೋಷಿಸಿಕೊಂಡು ಬಂದಿರುವ ಭಾರತದ ರಾಜಕೀಯ ವ್ಯವಸ್ಥೆಯು ಈ ರೀತಿಯ ಸ್ಥಳೀಯ ಪಾಳೆಗಾರಿಕೆಯನ್ನೂ ಸಹ ವಿವಿಧ ರೂಪಗಳಲ್ಲಿ ಕಾಪಾಡಿಕೊಂಡೇ ಬಂದಿದೆ. ಇದರ ಒಂದು ಆಯಾಮವನ್ನು ಹಾಸನದ ಪ್ರಕರಣಗಳಲ್ಲಿ ಗುರುತಿಸಬಹುದು.

ದೌರ್ಜನ್ಯದ ಸಾಮಾಜಿಕ ನೆಲೆಗಳು

ಹಾಸನದ ಸಾಮೂಹಿಕ ಲೈಂಗಿಕ ದೌರ್ಜನ್ಯಗಳನ್ನು ಭಿನ್ನ ನೆಲೆಯಲ್ಲಿ ನೋಡಿದಾಗ ಆಡಳಿತಶಾಹಿಯು ತನ್ನ ಸಾಮಾಜಿಕ ಜವಾಬ್ದಾರಿಯನ್ನು ಮರೆತು, ಸ್ವಹಿತಾಸಕ್ತಿಗಳಿಗಾಗಿ, ಸ್ವೇಚ್ಛಾಚಾರದಲ್ಲಿ ತೊಡಗಿದರೆ ಏನಾಗಬಹುದು ಎಂಬ ಪ್ರಶ್ನೆಗೆ ಉತ್ತರ ಸಿಗುತ್ತದೆ. ಹಾಗೆಯೇ ಸಮಾಜದ ದುರ್ಬಲ ವರ್ಗಗಳ ಮೇಲೆ, ಅಸಹಾಯಕರ ವಿರುದ್ಧ ಮತ್ತು ಅಮಾಯಕ ಶ್ರೀಸಾಮಾನ್ಯರ ವಿರುದ್ಧ ಒಂದು ಬಲಿಷ್ಠ ಸಾಮಾಜಿಕ ವ್ಯವಸ್ಥೆ ಪಾಳೆಗಾರಿಕೆಯ ಯಜಮಾನಿಕೆಯನ್ನು ಸ್ಥಾಪಿಸಿದರೆ, ತಳಮಟ್ಟದ ಸಮಾಜದಲ್ಲಿ ಎಂತಹ ವಿಕೃತಿಗಳು ಸಂಭವಿಸಬಹುದು ಎನ್ನುವುದಕ್ಕೂ ಈ ಪ್ರಕರಣಗಳು ಸಾಕ್ಷಿಯಾಗಿವೆ. ಈ ಯಜಮಾನಿಕೆಯನ್ನು ಪ್ರೋತ್ಸಾಹಿಸುವ ಮೇಲ್ಪದರ ಸಮಾಜವೊಂದಿದೆ ಹಾಗೆಯೇ ರಕ್ಷಿಸುವ ಅಧಿಕಾರಶಾಹಿಯೂ ಕ್ರಿಯಾಶೀಲವಾಗಿದೆ. ಇಂತಹ ಹೇಯ ಕೃತ್ಯಗಳನ್ನು ತಮ್ಮ ಹಿತಾಸಕ್ತಿಗೆ ಬಳಸಿಕೊಳ್ಳುವ ರಾಜಕೀಯ ಶಕ್ತಿಗಳೂ ಇವೆ. ಯಾರನ್ನು, ಯಾವುದನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು?

ವಿಪರ್ಯಾಸ ಎಂದರೆ ಈ ಸಾಮೂಹಿಕ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಸಾಮುದಾಯಿಕ ಅಥವಾ ಸಾಮಾಜಿಕ ವಿಕೃತಿಯಾಗಿ ನೋಡದೆ, ವ್ಯಕ್ತಿಗತ ನೆಲೆಯಲ್ಲಿ ನೋಡುವ ಮೂಲಕ ಕಲಿತ ವರ್ಗದ ಒಂದು ಭಾಗವೂ ಸಹ ಸಂತ್ರಸ್ತರು-ಸಂತ್ರಸ್ತರಲ್ಲದವರು ಎಂದು ವಿಂಗಡಿಸುತ್ತಿದೆ. ಇಲ್ಲಿ ನಮ್ಮನ್ನು ಹಲವು ಜಿಜ್ಞಾಸೆಗಳು ಕಾಡುತ್ತವೆ. ನೂರಾರು ಅಸಹಾಯಕ ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯಗಳು ಯಾರಿಂದ ನಡೆದಿವೆ? ಇದು ಯಾರಿಂದ-ಹೇಗೆ-ಏತಕ್ಕಾಗಿ ಬಯಲಾಯಿತು ಎನ್ನುವುದಕ್ಕಿಂತಲೂ ಹೆಚ್ಚಾಗಿ ನಮ್ಮನ್ನು ಕಾಡಬೇಕಿರುವುದು, ಈ ದೌರ್ಜನ್ಯಗಳನ್ನು ಸಹಿಸಿಕೊಳ್ಳುವಂತಹ ಒಂದು ಕಲಿತ ಸಮಾಜ ನಮ್ಮ ನಡುವೆ ಇರುವುದು. ಈ ಪ್ರಕರಣದಲ್ಲಿ ದಾಳಿಗೊಳಗಾಗಿರುವ ಮಹಿಳೆಯರೆಲ್ಲರೂ ಸಂತ್ರಸ್ತರು ಎನ್ನಲಾಗುವುದಿಲ್ಲ ಎಂಬ ಚರ್ಚಾರ್ಹ ಅಭಿಪ್ರಾಯಗಳ ನಡುವೆಯೇ, ಸ್ವಪ್ರೇರಣೆಯಿಂದ ಲೈಂಗಿಕ ಸಂಪರ್ಕಕ್ಕೆ ಸಮ್ಮತಿಸುವ ಉನ್ನತ ಮಟ್ಟದ ಅಧಿಕಾರಿಗಳನ್ನು ಸಂತ್ರಸ್ತರೆನ್ನಲು ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಸಹ ಮುಂದಿಡಲಾಗುತ್ತದೆ.

ಪಿತೃಪ್ರಧಾನ ಯಜಮಾನಿಕೆ ಹಾಗೂ ಊಳಿಗಮಾನ್ಯ ಸಾಮಾಜಿಕ ಮನಸ್ಥಿತಿಯಲ್ಲೇ ಕಾರ್ಯನಿರ್ವಹಿಸುವ ಭಾರತದ ಅಧಿಕಾರ ರಾಜಕಾರಣ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಈ ಪ್ರಶ್ನೆಯೇ ಸಾವಿರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಏಕೆಂದರೆ ಹೊಲಗದ್ದೆಗಳಿಂದ ಉನ್ನತಾಧಿಕಾರದ ಚೇಂಬರುಗಳವರೆಗೂ, ಕೆಲಸದ ಸ್ಥಳಗಳಲ್ಲಾಗಲೀ, ಅಧಿಕಾರ ಕೇಂದ್ರಗಳಲ್ಲಾಗಲೀ ಸಾಮಾನ್ಯ ಮಹಿಳೆ ತನ್ನ ಉನ್ನತ ಸ್ಥಾನಮಾನಗಳ ಹೊರತಾಗಿಯೂ, ಸ್ಥಾಪಿತ ವ್ಯವಸ್ಥೆಗೆ ಅಧೀನಳಾಗಿಯೇ ಇರುವ ಪರಿಸ್ಥಿತಿ ನಮ್ಮಲ್ಲಿದೆ. ಈ ವ್ಯವಸ್ಥೆಯನ್ನು ಅಥವಾ ಇದರ ವಾರಸುದಾರರನ್ನು ಧಿಕ್ಕರಿಸುವ, ವಿರೋಧಿಸುವ ಅಥವಾ ಆಜ್ಞೆಯನ್ನು ಉಲ್ಲಂಘಿಸುವ ಯಾವುದೇ ನಡೆಗೆ ಮಹಿಳೆ ಅಪಾರ ಬೆಲೆ ತೆರಬೇಕಾಗುತ್ತದೆ. ಇದು ಗ್ರಾಮಪಂಚಾಯತ್‌ನಿಂದ ಬ್ಯಾಂಕಿಂಗ್ ಕ್ಷೇತ್ರದವರೆಗೂ, ಸಾಫ್ಟ್‌ವೇರ್ ಉದ್ದಿಮೆಯಲ್ಲೂ ಕಾಣಬಹುದಾದ ವಾಸ್ತವ. ಮೂಲತಃ ಹಾಸನದ ಪ್ರಕರಣದಲ್ಲಿ ನಮಗೆ ಕಾಣಿಸಬೇಕಾದ್ದು ವ್ಯಕ್ತಿಗತ ಸಂತ್ರಸ್ತೆಯರಲ್ಲ ಅಥವಾ ವೈಯುಕ್ತಿಕ ಅಪರಾಧವೂ ಅಲ್ಲ. ಇಲ್ಲಿ ಕಾಣಬೇಕಾಗಿರುವುದು ನಮ್ಮ ಸಮಾಜದೊಳಗಿನ ಭೌತಿಕ ಮಾಲಿನ್ಯ, ಬೌದ್ಧಿಕ ತ್ಯಾಜ್ಯ ಹಾಗೂ ಸಾಂಸ್ಕೃತಿಕ ವ್ಯಸನ.

ಹುಬ್ಬಳ್ಳಿಯ ನೇಹಾ ಪ್ರಕರಣದಲ್ಲಿ ಜಿಹಾದಿ ಪಿತೂರಿಯನ್ನು ಗುರುತಿಸುವ ಬಿಜೆಪಿ ನಾಯಕರಿಗೆ ಹಾಸನದಲ್ಲಿ ಕೇವಲ ರಾಜಕೀಯ ಮೇಲಾಟ ಕಾಣುವುದು ಈ ಸಾಂಸ್ಕೃತಿಕ ವ್ಯಸನದ ಸಂಕೇತವಾಗಿದೆ. ಹಲ್ಲೆ/ದಾಳಿಗಳೊಗಾದ ಮಹಿಳೆ ತನ್ನ ಮೇಲೆ ನಡೆದ ದೌರ್ಜನ್ಯವನ್ನು ತಾನೇ ವ್ಯಾಖ್ಯಾನಿಸಿಕೊಂಡು ನ್ಯಾಯ ವ್ಯವಸ್ಥೆಯ ಮುಂದೆ ಅಂಗಲಾಚಲಾಗುತ್ತದೆಯೇ? ತಾನು ಒಳಗಾದ ಪುರುಷಾಹಮಿಕೆಯ ವಿಕೃತಿಗೆ ಕಾರಣಗಳನ್ನು ತನ್ನೊಳಗೇ ಕಂಡುಕೊಳ್ಳುವಂತೆ ನೊಂದ ಮಹಿಳೆಯನ್ನು ಕೇಳುವುದು ಉಚಿತವೇ? ದೌರ್ಜನ್ಯಕ್ಕೊಳಗಾದ ಮಹಿಳೆಯ ಸ್ವಪ್ರೇರಣೆ ಅಥವಾ ಸಮ್ಮತಿ, ಪುರುಷ ಸಮಾಜದ ಯಜಮಾನಿಕೆಯ ದರ್ಪ ದಬ್ಬಾಳಿಕೆಗಳನ್ನು ಮಾಫಿ ಮಾಡಿಬಿಡುತ್ತದೆಯೇ? ತಮ್ಮನ್ನು ಆವರಿಸುವ ಅಸಹಾಯಕತೆಯಿಂದ ಬಾಯ್ಬಿಡಲಾಗದೆ, ಮೌನವಾಗಿ ಪುರುಷವಿಕೃತಿಯನ್ನು ಸಹಿಸಿಕೊಳ್ಳುವ ಅಸಂಖ್ಯಾತ ಅಸಹಾಯಕ ಮಹಿಳೆಯರ ಪಾಡೇನು? ಸಾಂಸ್ಥಿಕವಾಗಿ ಅಥವಾ ಸಾಂಘಿಕವಾಗಿ ಭಾರತೀಯ ಸಮಾಜದಲ್ಲಿ ಹೀಗೆ ತನ್ನ ಅಂತರಂಗದ ನೋವು-ಅಳಲನ್ನು ತೋಡಿಕೊಳ್ಳಲು ಸಾಮಾನ್ಯ ಮಹಿಳೆಗೆ ಅವಕಾಶಗಳನ್ನು ನಾವು ಕಲ್ಪಿಸಿದ್ದೇವೆಯೇ?

ಪಿತೃಪ್ರಧಾನ ಪುರುಷಾಧಿಪತ್ಯ

ಪಿತೃಪ್ರಧಾನ ಮೌಲ್ಯಗಳನ್ನು ಉಳಿಸಿಕೊಂಡಿರುವ ಎಲ್ಲ ಸಾಮಾಜಿಕ-ಸಾಂಸ್ಕೃತಿಕ ವಲಯಗಳಲ್ಲೂ ಈ ಪ್ರಶ್ನೆಗಳಿಗೆ ಉತ್ತರ ಶೋಧಿಸಬೇಕಿದೆ. ಇದು ಕೇವಲ ರಾಜಕೀಯ ಅಥವಾ ಪಕ್ಷ ರಾಜಕಾರಣದ ಪ್ರಶ್ನೆಯಲ್ಲ. ಅಥವಾ ಯಾವುದೋ ನಿರ್ದಿಷ್ಟ ಮತದ, ಧಾರ್ಮಿಕತೆಯ, ಜಾತಿಯ ಅಥವಾ ಸೈದ್ಧಾಂತಿಕ ಚಿಂತನಾವಾಹಿನಿಯ ಪ್ರಶ್ನೆಯೂ ಅಲ್ಲ. ಸಾಮಾಜಿಕ ಪ್ರಾಬಲ್ಯ ಮತ್ತು ಆರ್ಥಿಕ ಮೇಲಂತಸ್ತಿನ ಆಳ್ವಿಕೆಗೆ/ನಿಯಂತ್ರಣಕ್ಕೆ ಒಳಪಟ್ಟಿರುವ ಎಲ್ಲ ಸಾಂಸ್ಥಿಕ-ಸಾಂಘಿಕ ನೆಲೆಗಳಲ್ಲೂ ಈ ಪ್ರಶ್ನೆಯನ್ನು ಪ್ರಾಮಾಣಿಕವಾಗಿ ಎದುರಿಸಬೇಕಿದೆ. ಒಂದು ಆರೋಗ್ಯಕರ ಸಮಾಜದ ಜವಾಬ್ದಾರಿ ಇಲ್ಲಿದೆ. ಕಳೆದ ಮೂರು ದಶಕಗಳ ಅಧಿಕಾರ ರಾಜಕಾರಣದಲ್ಲಿ ಭಾರತದ ಮೇಲ್ಪದರ ಸಮಾಜ (Elite society) ಮನುಜ-ಲಿಂಗ ಸೂಕ್ಷ್ಮತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿರುವುದರ ಪರಿಣಾಮ ಸಮಾಜದ ಕೆಳಸ್ತರಕ್ಕೂ ವಿಸ್ತರಿಸಿರುವ ಸಾಮಾಜಿಕ ನಿಷ್ಕ್ರಿಯತೆ-ನಿರ್ಲಿಪ್ತತೆ-ನಿರ್ಭಾವುಕತೆಯನ್ನು ಗಂಭೀರವಾಗಿ ಮರುವಿಮರ್ಶೆ ಮಾಡಬೇಕಿದೆ.

ಸಾಮಾಜಿಕ-ವಿದ್ಯುನ್ಮಾನ ಮಾಧ್ಯಮಗಳನ್ನು ಗಾಢವಾಗಿ ಆವರಿಸಿರುವ ಈ ನಿರ್ಭಾವುಕತೆಯೇ ಮಹಿಳಾ ದೌರ್ಜನ್ಯಗಳನ್ನು "ಸಾಮಾನ್ಯ ಕಾನೂನು ಸುವ್ಯವಸ್ಥೆಯ ಸಮಸ್ಯೆಗಳು" ಎಂದು ಪರಿಗಣಿಸುವಂತೆ ಮಾಡಿವೆ. ಹಾಸನದ ಲೈಂಗಿಕ ದೌರ್ಜನ್ಯಗಳ ದೃಶ್ಯಗಳನ್ನು ಸಾವಿರಾರು ಪೆನ್ ಡ್ರೈವ್‌ಗಳ ಮೂಲಕ, ಸಾಮಾಜಿಕ ತಾಣಗಳ ಮೀಮ್ಸ್, ರೀಲ್ಸ್‌ಗಳ ಮೂಲಕ ಹಂಚುವ ಒಂದು ನೀಚ ಸಮಾಜವೂ ನಮ್ಮ ನಡುವೆ ಇರುವುದು ➚

ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವ ಚುನಾವಣಾ ಆಯೋಗ



ಪ್ರಕಾಶ್ ಕಾರತ್

ಮೇ 7ರಂದು ಮೂರನೇ ಹಂತದ ಮತದಾನ ಮುಕ್ತಾಯವಾಗುವುದರೊಂದಿಗೆ ಲೋಕಸಭೆಯ ಅರ್ಧದಷ್ಟು ಸ್ಥಾನಗಳಿಗೆ ಚುನಾವಣೆ ಪೂರ್ಣಗೊಂಡಂತಾಗಿದೆ. ಒಂದು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯನ್ನು ನಡೆಸಲು ಚುನಾವಣಾ ಆಯೋಗ ಯಾವ ರಿತಿಯಲ್ಲಿ ಉಸ್ತುವಾರಿ ನಡೆಸಿದೆ ಎನ್ನುವುದನ್ನು ಅಂದಾಜು ಮಾಡಲು ಇದು ಸಾಕಷ್ಟು ಅನುಭವ ಹಾಗೂ ಸಮಯವನ್ನು ಒದಗಿಸಿದೆ. ಅದರ ನಿರ್ವಹಣೆ ತುಂಬಾ ಕೆಟ್ಟದಾಗಿದೆ ಎಂದಷ್ಟೇ ಈ ವಿಚಾರದಲ್ಲಿ ತೀರ್ಪು ನೀಡಬಹುದಾಗಿದೆ.

ಆಯೋಗದ ಇಬ್ಬರು ಆಯುಕ್ತರನ್ನು ಚುನಾವಣೆ ವೇಳಾಪಟ್ಟಿ ಪ್ರಕಟಣೆಯ ಕೇವಲ ಮೂರು ದಿನಗಳ ಮುಂಚೆ ನೇಮಿಸಲಾಗಿತ್ತು. ಈ ಆಯೋಗದ ಕಾರ್ಯ ನಿರ್ವಹಣೆ ಬಗ್ಗೆ ಉಂಟಾಗಿದ್ದ ಎಲ್ಲಾ ಅನುಮಾನಗಳು ಈಗ ನಿಜವಾಗಿ ಪರಿಣಮಿಸುತ್ತಿವೆ.

ಮಾದರಿ ನೀತಿ ಸಂಹಿತೆಯನ್ನು (ಎಂಸಿಸಿ) ಜಾರಿ ಮಾಡುವ ಹಾಗೂ ಎಲ್ಲಾ ರಾಜಕೀಯ ಪಕ್ಷಗಳಿಗೆ ಸಮಾನ ಅವಕಾಶ ಕಲ್ಪಿಸುವುದನ್ನು ಖಾತರಿಪಡಿಸುವ ಪ್ರಾಥಮಿಕ ಜವಾಬ್ದಾರಿಯನ್ನು ಆಯೋಗ ನಿರ್ವಹಿಸಿಲ್ಲ. ಮಾರ್ಚ್ 16ರಂದು ಚುನಾವಣಾ ವೇಳಾಪಟ್ಟಿ ಪ್ರಕಟಿಸಿದಾಗಿನಿಂದ ಮೊದಲ ಒಂದು ತಿಂಗಳ ಅವಧಿಯಲ್ಲಿ ಎಂಸಿಸಿ ಅನುಷ್ಠಾನದ ಬಗ್ಗೆ ಆಯೋಗ ಸ್ವಯಂ-ತೃಪ್ತಿಯ ಹೇಳಿಕೆಯನ್ನು ಕೊಟ್ಟಿದ್ದಕ್ಕೆ ವ್ಯತಿರಿಕ್ತವಾಗಿ ಈ ಅವಧಿಯಲ್ಲಿ ಆಯೋಗ ತನ್ನ ಹೊಣೆಗಾರಿಕೆಗಳಿಂದ ನುಣುಚಿಕೊಂಡಿದ್ದು ಸ್ಪಷ್ಟವಾಗಿ ಕಾಣಿಸುತ್ತದೆ.

ಪ್ರಭುತ್ವ ಪ್ರಾಯೋಜಿತ ದಬ್ಬಾಳಿಕೆ

ಎಲ್ಲದಕ್ಕೂ ಮೊದಲು, ಪ್ರತಿಪಕ್ಷಗಳ ನಾಯಕರ ಮೇಲಿನ ಪ್ರಭುತ್ವ ಪ್ರಾಯೋಜಿತ ದಬ್ಬಾಳಿಕೆಗೆ ಆಯೋಗ ಮೂಕ ಪ್ರೇಕ್ಷಕನಾಗಿ ಉಳಿದಿದೆ. ಆಮ್ ಆದ್ಮಿ ಪಕ್ಷದ (ಆಪ್) ರಾಷ್ಟ್ರೀಯ ಸಂಚಾಲಕ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್‌ರನ್ನು ಮಾರ್ಚ್ 21ರಂದು, ಅಂದರೆ ಚುನಾವಣೆ ಪ್ರಕಟಗೊಂಡ ಹಾಗೂ ಎಂಸಿಸಿ ಜಾರಿಗೊಂಡ ಐದು ದಿನಗಳ ನಂತರ ಬಂಧಿಸಲಾಯಿತು. ಚುನಾವಣೆ ನಡೆಯುವ ಅವಧಿಯಲ್ಲಿ ರಾಜಕೀಯ ಪಕ್ಷಗಳ ಮುಖಂಡರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಚುನಾವಣಾ ಆಯೋಗ ಎಲ್ಲಾ ಕೇಂದ್ರೀಯ ಸಂಸ್ಥೆಗಳಿಗೆ ಸಲಹೆ ನೀಡಬೇಕಿತ್ತು. ಆದರೆ ಹಾಗೆ ಮಾಡಲಾಗಿಲ್ಲ. ಆದಾಯ ತೆರಿಗೆ ಇಲಾಖೆಯು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಬ್ಯಾಂಕ್ ಖಾತೆ, ನಂತರ ಕೇರಳದ ಸಿಪಿಐ(ಎಂ) ತ್ರಿಶೂರು ಜಿಲ್ಲಾ ಸಮಿತಿಯ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಿತು. ಚುನಾವಣೆ ಪ್ರಚಾರದ ವೇಳೆ ಈ ಪಕ್ಷಗಳ ಆರ್ಥಿಕ ಪರಿಸ್ಥಿತಿಯನ್ನು ಹದಗೆಡಿಸುವುದು ಇದರ ಗುರಿಯಾಗಿದೆ.

ಕೋಮುವಾದಿ ಭಾಷಣಗಳಿಗೆ ಅವಕಾಶ

ಪ್ರಧಾನಿ ನರೇಂದ್ರ ಮೋದಿ ಮಾಡುತ್ತಿರುವ ನಗ್ನ ಕೋಮುವಾದಿ ಭಾಷಣಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು ನಿರಾಕರಿಸಿದ್ದು ಎಂಸಿಸಿ ಅನುಷ್ಠಾನ ವಿಚಾರದಲ್ಲಿ ಆಯೋಗದ ಎದ್ದು ಕಾಣುವ ತಪ್ಪಾಗಿದೆ. ಮೋದಿ ರಾಜಸ್ಥಾನದ ಅಜ್ಮೇರ್‌ನಲ್ಲಿ ಏಪ್ರಿಲ್ 6ರಂದು ಹಾಗೂ ಉತ್ತರ ಪ್ರದೇಶದ ಪಿಲಿಭಿತ್‌ನಲ್ಲಿ ಏಪ್ರಿಲ್ 9ರಂದು ಮಾಡಿದ ಭಾಷಣಗಳ ವಿರುದ್ಧ ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ದಾಖಲಿಸಿದ್ದ ದೂರನ್ನು ಆಯೋಗ ಸಂಪೂರ್ಣವಾಗಿ ನಿರ್ಲಕ್ಷಿಸಿತು. 'ಶ್ರೀರಾಮನನ್ನು ಪ್ರತಿಪಕ್ಷಗಳು ಅವಮಾನಿಸುತ್ತಿವೆ' ಹಾಗೂ 'ರಾಮ ಮಂದಿರದ ವಿರುದ್ಧ ಪ್ರತಿಪಕ್ಷಗಳು ವೈರತ್ವವನ್ನು ಪೋಷಿಸುತ್ತಿವೆ' ಎಂದು ಮೋದಿ ಈ ಭಾಷಣಗಳಲ್ಲಿ ಆರೋಪಿಸಿದ್ದರು. ಅದಾದ ನಂತರ ಮೋದಿ, ರಾಜಸ್ಥಾನದ ಬನ್ಸ್‌ವಾರಾದಲ್ಲಿ ಮಾಡಿದ ಮತಾಂಧ ಭಾಷಣದಲ್ಲಿ ಮುಸ್ಲಿಮರನ್ನು ರಾಕ್ಷಸರೆಂದು ಬಿಂಬಿಸಿದ್ದರು. ಆ ಬಗ್ಗೆ ಹಲವು ರಾಜಕೀಯ ಪಕ್ಷಗಳು ಮತ್ತು ಪ್ರಮುಖ ನಾಗರಿಕರು ದೂರುಗಳನ್ನು ದಾಖಲಿಸಿದ್ದರು. ಈ ಭಾಷಣಗಳನ್ನು ಮಾಡಿದ ವ್ಯಕ್ತಿಗೆ ನೋಟಿಸ್‌ಗಳನ್ನು ನೀಡಬಾರದೆಂಬುದು ಆಯೋಗದ ಪ್ರತಿಕ್ರಿಯೆಯಾಗಿತ್ತು. ಬದಲಿಗೆ ಅದು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾಗೆ ನೋಟಿಸ್ ನೀಡಿತು. ಅದಾಗಿ ಸುಮಾರು ಎರಡು ವಾರ ಕಳೆದರೂ ಬಿಜೆಪಿ ಅಧ್ಯಕ್ಷ ಉತ್ತರಿಸಲು ಎರಡು ಬಾರಿ ಸಮಯ ವಿಸ್ತರಣೆ ಕೋರಿದ್ದು ಬಿಟ್ಟರೆ ಇದುವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ನಡುವೆ, ಮೋದಿ ಕೋಮುವಾದಿ ಅಂಶಗಳನ್ನು ಒಳಗೊಂಡ ವಿಷಪೂರಿತ ಭಾಷಣಗಳನ್ನು ಮಾಡುವುದು ಹಾಗೂ ಪ್ರತಿಪಕ್ಷದ ವಿರುದ್ಧ ಭಾವನೆಗಳನ್ನು ಕೆರಳಿಸುವುದನ್ನು ಮುಂದುವರಿಸಿದ್ದಾರೆ.

ಕರ್ನಾಟಕದಲ್ಲಿ

ಮುಸ್ಲಿಮರನ್ನು ಟಾರ್ಗೆಟ್ ಮಾಡಿ ಕರ್ನಾಟಕ ಬಿಜೆಪಿ ಘಟಕ ಆಕ್ಷೇಪಾರ್ಹ ವಿಡಿಯೋಗಳನ್ನು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿತ್ತು. ಈ ಬಗ್ಗೆ ಸಲ್ಲಿಸಲಾದ ದೂರಿಗೆ ಪ್ರತಿಕ್ರಿಯಿಸಿದ ಆಯೋಗ, ಆ ಕಂಟೆಂಟ್ ಅನ್ನು ತೆಗೆದು ಹಾಕುವಂತೆ ಎಕ್ಸ್‌ಗೆ ನಿರ್ದೇಶಿಸಿರುವುದು ತೀರಾ ಈಚಿನ ಉದಾಹರಣೆಯಾಗಿದೆ. ಆದರೆ ಈ ನಿರ್ದೇಶನ ನೀಡುವುದರೊಳಗೆ ಕರ್ನಾಟಕದಲ್ಲಿ ಅಂತಿಮ ಹಂತದ ಮತದಾನ ಮುಗಿದೇ ಹೋಗಿತ್ತು. ಆ ವಿಡಿಯೋವನ್ನು ಈಗಲೂ ಎಕ್ಸ್‌ನಿಂದ ತೆಗೆದು ಹಾಕಿಲ್ಲ.

ಅಭ್ಯರ್ಥಿಗಳ ಮೇಲೆ ವೈಯಕ್ತಿಕ ದಾಳಿಗಳು ಅಥವಾ ಪಕ್ಷಗಳ ವಿರುದ್ಧ ಸುಳ್ಳು ಆರೋಪ ಹೊರಿಸಿದ ಪ್ರಕರಣಗಳ ದೂರುಗಳಿಗೆ ಸಂಬಂಧಿಸಿ ತಕ್ಷಣವೇ ಕ್ರಮ ಕೈಗಳ್ಳಲು ಚುನಾವಣಾ ಆಯೋಗ ಹೆಚ್ಚು ಆಸಕ್ತಿ ವಹಿಸಿದಂತೆ ಕಾಣಿಸುತ್ತದೆ. ಆದರೆ, ದ್ವೇಷ ಭಾಷಣಗಳ ವಿರುದ್ಧ ಮತ್ತು ಕೋಮುವಾದಿ ಧ್ರುವೀಕರಣ ಸೃಷ್ಟಿಸುವ ಹಿಂದೂತ್ವ ಪ್ರಚಾರದ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು ಅದು ಆಸಕ್ತವಾಗಿಲ್ಲ.

ಕುಸಿದ ದಕ್ಷತೆ

ಚುನಾವಣಾ ಆಯೋಗದ ದಕ್ಷತೆ ಮತ್ತು ತಾಂತ್ರಿಕ ಪರಿಣತಿಯಲ್ಲಿ ಕುಸಿತವಾಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಒಂದು ದಶಕದ ಹಿಂದಿನವರೆಗೂ ಅದು ಚುನಾವಣೆಯ ತಂತ್ರಗಳನ್ನು (ಮೆಕ್ಯಾನಿಕ್) ನಿರ್ವಹಿಸುವಲ್ಲಿ ಹಾಗೂ ಅಂಕಿಅಂಶ ಸಂಗ್ರಹದಲ್ಲಿ ಉತ್ತಮ ದಾಖಲೆಯನ್ನು ಹೊಂದಿತ್ತು. ಆಯೋಗ ಹೊಂದಿದ್ದ ಈ ಒಳ್ಳೆಯ ಹೆಸರು ಕಳೆದ ಕೆಲವು ವರ್ಷಗಳಿಂದ ಕೊಚ್ಚಿ ಹೋಗಿದೆ. 2019ರ ಲೋಕಸಭಾ ಚುನಾವಣೆಗಳ ನಂತರದಲ್ಲಿ ಮತದಾನದ ಸ್ಪಷ್ಟ ಸಂಖ್ಯೆ, ಕ್ಷೇತ್ರವಾರು, ರಾಜ್ಯವಾರು ಮತ್ತು ಅಖಿಲ ಭಾರತವಾರು ಅಂಕಿಸಂಖ್ಯೆಗಳನ್ನು ಎರಡು ವರ್ಷದ ನಂತರವಷ್ಟೇ ಒದಗಿಸಲಾಗಿತ್ತು. ಈ ಬಾರಿ ಕೂಡ, ಮೊದಲ ಮತ್ತು ಎರಡನೇ ಹಂತದ ಮತದಾನ ಮುಗಿದ ನಂತರ, ಮೊದಲ ಹಂತದ ಮತದಾನದ ಶೇಕಡಾವಾರು ಪ್ರಮಾಣವನ್ನು 11 ದಿನಗಳ ನಂತರ ಪ್ರಕಟಿಸಲಾಗಿದೆ. ಎರಡನೇ ಹಂತದ ವಿವರವನ್ನು ಮತದಾನದ ನಾಲ್ಕು ದಿನಗಳ ನಂತರ ಒದಗಿಸಲಾಗಿದೆ. ಅದರಲ್ಲಿ ಸುಮಾರು ಆರು ಪರ್ಸಂಟೇಜ್ ಪಾಯಿಂಟ್ ಹೆಚ್ಚಳವಾಗಿದೆ. ಈ ಅಸಹಜ ಏರಿಕೆಗೆ ಚುನಾವಣಾ ಆಯೋಗ ಯಾವುದೇ ವಿವರಣೆ ನೀಡಿಲ್ಲ. ಅಷ್ಟು ಮಾತ್ರವಲ್ಲದೆ ಕ್ಷೇತ್ರವಾರು, ರಾಜ್ಯ ಅಥವಾ ಅಖಿಲ ಭಾರತವಾರು ಚಲಾವಣೆಯಾದ ಒಟ್ಟು ಮತಗಳ ವಿವರಗಳನ್ನು ಆಯೋಗ ಪ್ರಕಟಿಸಿಲ್ಲ. ಮತದಾನದ ಶೇಕಡಾವಾರನ್ನು ಲೆಕ್ಕ ಹಾಕಲು ಸಾಧ್ಯವಾಗುವ ಈ ಸಂಖ್ಯೆಗಳು ಚುನಾವಣೆ ಆಯೋಗದ ಬಳಿ ಇರಲೇ ಬೇಕು. ಯಾವುದೇ ದೋಷವಿದ್ದರೆ, ಅದನ್ನು ಚಲಾವಣೆಯಾದ ಮತದೊಂದಿಗೆ ಹೋಲಿಕೆ ಮಾಡಿ ತಪ್ಪನ್ನು ಕಂಡು ಹಿಡಿಯ ಬಹುದಾಗಿದೆ. ಪೂರ್ಣ ಅಂಕಿಸಂಖ್ಯೆಗಳನ್ನು ಒದಗಿಸದಿರಲು ಕಾರಣವೇನೆಂದು ಆಯೋಗ ಯವುದೇ ವಿವರಣೆ ಕೊಟ್ಟಿಲ್ಲ.

ಕಾರ್ಯಾಂಗ ಅಥವಾ ಆಳುವ ಪಕ್ಷದ ಒತ್ತಡವನ್ನು ಎದುರಿಸಲಾಗದ

'ಪಳಗಿಸಲಾದ' ಚುನಾವಣೆ ಆಯೋಗಕ್ಕೆ ಯಾವತ್ತೂ ತನ್ನ ಸಾಂವಿಧಾನಿಕ ಕರ್ತವ್ಯವನ್ನು ನಿಭಾಯಿಸಲು ಸಾಧ್ಯವಾಗದು. "ಚುನಾವಣೆಗಳ ಉಸ್ತುವಾರಿ, ನಿರ್ದೇಶನ ಮತ್ತು ನಿಯಂತ್ರಣ" ಅದರ ಸಾಂವಿಧಾನಿಕ ಜವಾಬ್ದಾರಿಯಾಗಿದೆ. 2019ರ ಲೋಕಸಭೆ ಚುನಾವಣೆ ವೇಳೆ ಚುನಾವಣಾ ಆಯುಕ್ತರಲ್ಲಿ ಒಬ್ಬರಾಗಿದ್ದ ಅಶೋಕ್ ಲವಾಸಾರಿಗೆ ಏನಾಯಿತೆಂಬುದರ ಕರಾಳ ನೆನಪಿನ ಛಾಯೆ ಹಾಲಿ ಆಯುಕ್ತರನ್ನು ಕಾಡುತ್ತಿರಬೇಕು. ಚುನಾವಣಾ ಆಯೋಗವು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವುದನ್ನು ರಕ್ಷಿಸುವಲ್ಲಿ ಒಂದು ಮಹತ್ವದ ಸಂಸ್ಥೆಯಾಗಿದೆ. ಪ್ರಸಕ್ತ ಚುನಾವಣೆಗಳು ಮುಗಿದ ನಂತರ, ಆಯೋಗದ ಸ್ವಾತಂತ್ರ್ಯ ಮತ್ತು ವಿಶ್ವಾಸಾರ್ಹತೆಯನ್ನು ಮರುಸ್ಥಾಪಿಸಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು. ಚುನಾವಣಾ ಆಯುಕ್ತರನ್ನು ನೇಮಿಸುವ ವಿಚಾರವಾಗಿ ಮೋದಿ ಸರ್ಕಾರ 2023ರಲ್ಲಿ ಅಂಗೀಕರಿಸಿದ ಕಾನೂನಿಗೆ ತಿದ್ದುಪಡಿ ಮಾಡುವುದು ಆ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿದೆ. ಚುನಾವಣೆ ಆಯೋಗಕ್ಕೆ ವಿಭಿನ್ನವಾದ ನೇಮಕ ಪ್ರಕ್ರಿಯೆಯನ್ನು ಸಲಹೆ ಮಾಡಿದ್ದ ಸುಪ್ರೀಂ ಕೋರ್ಟ್, ಇದನ್ನು ಆಗಗೊಳಿಸುವಲ್ಲಿ ಮಧ್ಯಪ್ರವೇಶ ಮಾಡಬೇಕು.

ಅನು: ವಿಶ್ವ

ನಮ್ಮನ್ನು ಕಾಡಬೇಕಲ್ಲವೇ? ಈ Lumpen ಸಮಾಜವನ್ನು ಸೃಷ್ಟಿಸಿ, ಪೋಷಿಸಿ, ಬೆಳೆಸುವ ಅಧಿಕಾರ ರಾಜಕಾರಣಕ್ಕೆ ಏನನ್ನೋಣ? ಮತ್ತೊಂದೆಡೆ ವಿದ್ಯುನ್ಮಾನ ಮಾಧ್ಯಮಗಳಿಗೆ ಈ ಪ್ರಕರಣದ ರೋಚಕತೆಯೇ ಮುಖ್ಯವಾಗಿ ಟಿಆರ್‌ಪಿ ಗಳಿಕೆಯ ಅಸ್ತ್ರವಾಗುವುದು ಮಹಿಳಾ ಸಂಕುಲಕ್ಕೆ ಅಪಮಾನ ಮಾಡಿದಂತಾಗುವುದಿಲ್ಲವೇ? ಯಾವುದೇ ವಾಹಿನಿಯಲ್ಲಾದರೂ ಲಿಂಗ ಸೂಕ್ಷ್ಮತೆಯ ನೆಲೆಯಲ್ಲಿ, ಈ ಸಾಮೂಹಿಕ ಲೈಂಗಿಕ ದೌರ್ಜನ್ಯಗಳನ್ನು ಮಹಿಳಾ ಸಂಕುಲದ ಮೇಲೆ ನಡೆದಿರುವ ದುರಾಕ್ರಮಣ ಎಂದು ಚರ್ಚೆ ಮಾಡಲಾಗಿದೆಯೇ? ಇಲ್ಲ ಎಂದಾದರೆ ಏಕೆ ಎಂಬ ಪ್ರಶ್ನೆ ನಮ್ಮನ್ನು ಕಾಡಬೇಕಲ್ಲವೇ ?

ಅತ್ಯಾಧುನಿಕ ತಂತ್ರಜ್ಞಾನದ ಸಂವಹನ ಮಾಧ್ಯಮಗಳು, ಸಾಧನಗಳು ಇರುವ ಹೊತ್ತಿನಲ್ಲೇ ಇಂತಹ ದುರಾಚಾರಗಳಿಗೆ ಆಸ್ಪದ ನೀಡುವ ಸಮಾಜವೊಂದು, ಇದಾವುದೂ ಇಲ್ಲದಿದ್ದ ಕಾಲದಲ್ಲಿ ಹೇಗಿದ್ದಿರಬಹುದು? ಒಂದು ಕ್ಷಣ ಊಹಿಸಿಕೊಳ್ಳೋಣವೇ? ಮಾನವನ ಅತಿರೇಕದ ಕಾಮತೃಷೆಯ ನಿದರ್ಶನವಾಗಿರುವ ಹಾಸನದ ಸಾಮೂಹಿಕ ಲೈಂಗಿಕ ದೌರ್ಜನ್ಯಗಳನ್ನು "ಪೆನ್ ಡ್ರೈವ್ ಹಗರಣ" ಎಂದು ಬಣ್ಣಿಸುವುದೇ ಅತಾರ್ಕಿಕ. ಸಮಾಜದೊಳಗೆ ಹುದುಗಿದ್ದ ಅಮೇಧ್ಯವನ್ನು ಹೊರಹಾಕಲು ಈ ತಂತ್ರಜ್ಞಾನ ಅಥವಾ ಪೆನ್‌ಡ್ರೈವ್ ಎಂಬ ಸಂವಹನ ಸಾಧನ ನೆರವಾಗಿದೆ. ಮನುಜ-ಲಿಂಗ ಸೂಕ್ಷ್ಮತೆಯಿಲ್ಲದ ಸಮಾಜವೊಂದು ಇಂತಹ ಅವಿಷ್ಕಾರಗಳನ್ನೂ ಹೇಗೆ ತನ್ನ ಲಾಭಕ್ಕಾಗಿ ದುರ್ಬಳಕೆ ಮಾಡುತ್ತದೆ ಎಂದು ಈ ಹಗರಣ ನಿರೂಪಿಸಿದೆ. ಮೂರು ದಶಕಗಳ ಹಿಂದೆ ಸಾಮೂಹಿಕ ಅತ್ಯಾಚಾರಕ್ಕೀಡಾದ ರಾಜಸ್ಥಾನದ ಮಹಿಳೆ ಭಾವರಿದೇವಿ ಇಂದಿಗೂ ನ್ಯಾಯಕ್ಕಾಗಿ ಅಂಗಲಾಚುತ್ತಿರುವುದನ್ನು ನೋಡಿದಾಗ, ಹಾಸನದ ಪ್ರಕರಣಗಳ ನ್ಯಾಯಾರ್ಜನೆ ಆಶಾಭಾವನೆಯನ್ನೇನೂ ಮೂಡಿಸುವುದಿಲ್ಲ. ಅಧಿಕಾರಶಾಹಿ-ಆಡಳಿತಶಾಹಿಯ ಭದ್ರ ಕವಚಗಳು ನೂರಾರು ನೊಂದ ಮಹಿಳೆಯರ ಆಕ್ರಂದನವನ್ನೂ ನಿಶ್ಶಬ್ದಗೊಳಿಸಿಬಿಡುತ್ತವೆ. ಆ ಕ್ಷಮತೆಯನ್ನು ಭಾರತದ ರಾಜಕೀಯ-ಸಾಮಾಜಿಕ ವ್ಯವಸ್ಥೆ ರೂಢಿಸಿಕೊಂಡಿದೆ.

ಆಧುನಿಕತೆ ಹಾಗೂ ಆರ್ಥಿಕ ಅಭಿವೃದ್ಧಿಯ ಫಲಾನುಭವಿ ಸಮಾಜವು ತನ್ನ ಬೌದ್ಧಿಕ ದಾರಿದ್ರ್ಯವನ್ನು ತೊಳೆದುಕೊಂಡು, ಸ್ವಚ್ಛವಾಗುವುದು ವರ್ತಮಾನ ಭಾರತದ ಅವಶ್ಯಕತೆಯಾಗಿದೆ. ಹಾಗಾದಾಗ ಮಾತ್ರ ಈ ಸಮಾಜದಿಂದ ಪೋಷಿಸಲ್ಪಡುವ ಮಾಧ್ಯಮ ವಲಯ ಮತ್ತು ಸಂರಕ್ಷಿಸಲ್ಪಡುವ ಸಾಮಾಜಿಕ ತಾಣಗಳು ತಮ್ಮ ಸ್ವಂತಿಕೆಯನ್ನು ಗುರುತಿಸಿಕೊಂಡು, ಪಿತೃಪ್ರಧಾನ ಯಜಮಾನಿಕೆಯ ಹಿಡಿತದಿಂದ ಹೊರಬರಲು ಸಾಧ್ಯ. ದುರಂತ ಎಂದರೆ ಆಧುನಿಕತೆಯ ಫಲಾನುಭವಿ ಸಮಾಜದ ಮಿದುಳು ಹೆಪ್ಪುಗಟ್ಟಿದೆ. ಮನುಜ ಸೂಕ್ಷ್ಮತೆಯೇ ಇಲ್ಲದ ರಾಜಕೀಯ ವ್ಯವಸ್ಥೆ, ಲಿಂಗ ಸೂಕ್ಷ್ಮತೆಯಿಲ್ಲದ ಸಮಾಜ ಮತ್ತು ಜೀವಪರ ಸಂವೇದನೆಯೇ ಇಲ್ಲದ ಸಾಂಸ್ಕೃತಿಕ ಜಗತ್ತಿನ ನಡುವೆ ಹಾಸನದ ಸಾಮೂಹಿಕ ಲೈಂಗಿಕ ದೌರ್ಜನ್ಯಗಳು ನಮ್ಮನ್ನು ಕಾಡುತ್ತಿದೆ. ಇಲ್ಲಿ ಪುರುಷ ಸಮಾಜದಲ್ಲಷ್ಟೇ ಅಲ್ಲದೆ ಮುಂದುವರೆದ ವಿಶಾಲ ಸಮಾಜದಲ್ಲೂ ಇರುವ ಸಾಮಾಜಿಕ ವಿಕೃತಿಗಳ ವಿರುದ್ಧ ನಾವು ಹೋರಾಡಬೇಕಿದೆ. ಆಗ ಮಾತ್ರ ನಮಗೆ ದೌರ್ಜನ್ಯಗಳಿಗೊಳಗಾದ ಮಹಿಳೆಯರ ಮಡುಗಟ್ಟಿದ ನೋವು ಕಾಣಲು ಸಾಧ್ಯ.

ಅಳಿಸಿಹೋಗಬೇಕಿರುವುದು ಪ್ರಾಚೀನ ಪಿತೃಪ್ರಧಾನ ಸಮಾಜ. ವಿಮೋಚನೆಗೊಳಗಾಗಬೇಕಿರುವುದು ಮಹಿಳಾ ಸಂಕುಲದ ಅಸ್ಮಿತೆ, ಘನತೆ, ಗೌರವ. ●

ಮೋದಿ ಮತ್ತು ಸಂಪತ್ತಿನ 'ಮರು ಹಂಚಿಕೆ'

ಈಗ ಜನಜನಿತವಾಗಿರುವಂತೆ ನರೇಂದ್ರ ಮೋದಿಯವರು ಚುನಾವಣಾ ಪ್ರಚಾರದಲ್ಲಿ ಡಬಲ್ ಧಮಾಕಾ ಸೃಷ್ಟಿಸುತ್ತಿದ್ದಾರೆ. ಒಂದು, ತಮ್ಮ ಪಕ್ಷದ ಪ್ರಣಾಳಿಕೆಯ ಬದಲು ಕಾಂಗ್ರೆಸಿನ ಪ್ರಣಾಳಿಕೆಯ ಬಗ್ಗೆಯೇ ಮಾತಾಡುತ್ತಿದ್ದಾರೆ. ಎರಡು, ಆ ಪ್ರಣಾಳಿಕೆಯಲ್ಲಿಯೇ ಇಲ್ಲದ ವಿಷಯಗಳ ಬಗ್ಗೆ, ಸತ್ಯದ ತಲೆಗೆ ಹೊಡೆಯುವಂತಹ ಮಾತಾಡುತ್ತಿದ್ದೀರಾ ಎಂದು ಎಲ್ಲೆಡೆಯಿಂದಲೂ ಟೀಕೆ ಎದುರಿಸುತ್ತಿದ್ದಾರೆ.

ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಸಂಪತ್ತಿನ ಮರುಹಂಚಿಕೆಯ ಪ್ರಸ್ತಾಪವೇ ಇಲ್ಲದಿದ್ದರೂ ಅದು 'ಸಂಪತ್ತಿನ ಮರುಹಂಚಿಕೆಗೆ ಮುಂದಾಗಿದೆ' ಎಂದು ಇದೊಂದು ಮಹಾಪರಾಧವೋ ಎಂಬಂತೆ ಮಾತಾಡುತ್ತಿದ್ದಾರೆ. ನಿಜ, ಅದಕ್ಕಾಗಿ ಅದಕ್ಕೆ ತಮ್ಮ ನೆಚ್ಚಿನ ಕೋಮುವಾದಿ ಬಣ್ಣ ಬಳಿಯುತ್ತಿದ್ದಾರೆ–'ಮಂಗಲಸೂತ್ರಕ್ಕೂ, ಕೊನೆಗೆ ರೈತರ ಎಮ್ಮೆಗಳಿಗೂ, ಒಟ್ಟಿನಲ್ಲಿ ಜನಸಾಮಾನ್ಯರ ಭಾವನೆಗಳಿಗೆ ಕೈಹಾಕಿದ್ದಾರೆ ಎಂಬ ಟೀಕೆಗಳನ್ನು ಎದುರಿಸುತ್ತಿದ್ದಾರೆ


ಆದರೆ ಇದೇ ವ್ಯಕ್ತಿ ತನ್ನ ಒಂದು ದಶಕದ ಆಳ್ವಿಕೆಯಲ್ಲಿ ಮಾಡಿರುವುದು ಇದನ್ನೇ– ಆದರೆ ತಿರುಗುಮುರುಗಾಗಿ, ಅದಕ್ಕೆ ಸಂಚಕಾರ ಬರಬಹುದು ಎಂಬ ಭಯದಿಂದಲೇ ಹಿಂದೆಂದೂ ದೇಶದ ಅತ್ಯುಚ್ಚ ಚುನಾಯಿತ ಸ್ಥಾನದಲ್ಲಿದ್ದವರು ಮಾಡದ ಕೃತ್ಯಕ್ಕೆ ಇಳಿದಿದ್ದಾರೆಯೇ? ಕಾಂಗ್ರೆಸ್ ಹಿಂದೂ ಹೆಂಗಸರ ಮಂಗಳಸೂತ್ರ, ಒಬಿಸಿಗಳ ಮೀಸಲಾತಿ, ಕೊನೆಗೆ ಎಮ್ಮೆ ಮುಂತಾದವುಗಳನ್ನು ಕಸಿದುಕೊಂಡು ತನ್ನ ಮತ ಬ್ಯಾಂಕಿಗೆ ಹಾಕಲಿದೆ ಎಂದು ಪ್ರಧಾನಮಂತ್ರಿಗಳು ಜನಸಾಮಾನ್ಯರನ್ನು ಹೆದರಿಸುತ್ತಿರುವಾಗಲೇ, ಅವರ ಸರಕಾರದ ಹಣಕಾಸು ಇಲಾಖೆ ಇದೇ ಸಮಯದಲ್ಲಿ ಪ್ರಕಟಿಸಿರುವ ಮಾಹಿತಿಗಳನ್ನು ವಿಶ್ಲೇಷಿಸಿದರೆ ಈ ಸಂದೇಹ ಗಟ್ಟಿಯಾಗದಿರದು.

ತಮ್ಮ ಆಳ್ವಿಕೆಯಲ್ಲಿ ತೆರಿಗೆ ಸಂಗ್ರಹ ಅಭೂತಪೂರ್ವ ಮಟ್ಟಕ್ಕೆ ಏರಿದೆ ಎಂದು ಬಿಂಬಿಸಲು ಸರಕಾರ ಈ ಮಾಹಿತಿಗಳನ್ನು ಪ್ರಕಟಿಸಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ, ಇದು ಅವರ ಸರಕಾರಕ್ಕೆ ಇಷ್ಟವಾಗದ ಬೇರೆ ಕೆಲವು ವಿಷಯಗಳನ್ನೂ ತೆರೆದಿಟ್ಟಿದೆ. ತೆರಿಗೆ ಸಂಗ್ರಹದ ಈ ಏರಿಕೆ ಮುಖ್ಯವಾಗಿ ವೈಯಕ್ತಿಕ ತೆರಿಗೆಗಳ ಸಂಗ್ರಹ ಕಾರ್ಪೊರೇಟ್ ತೆರಿಗೆಗಳಿಗಿಂತ ದುಪ್ಪಟ್ಟು ದರದಲ್ಲಿ ಏರಿದ್ದರಿಂದ ಬಂದಿದೆ ಎಂಬುದು ಈ ಅಂಕಿ–ಅಂಶಗಳನ್ನು ವಿಶ್ಲೇಷಿಸಿದಾಗ ಕಂಡುಬರುತ್ತದೆ.(ದಿ ಹಿಂದೂ, ಎಪ್ರಿಲ್ 30ರ 'ಡಾಟಾ ಪಾಯಿಂಟ್ ನೋಡಿ).


ಅಲ್ಲಿ ಕೊಟ್ಟಿರುವ ಈ ತಖ್ತೆಗಳನ್ನು ನೋಡಿ:

ತಖ್ತೆ 1 ಕಳೆದ 24 ವರ್ಷಗಳಲ್ಲಿ ಸರಕಾರದ ಆದಾಯದಲ್ಲಿ ಕಾರ್ಪೊರೇಟ್ ತೆರಿಗೆ ಮತ್ತು ವೈಯಕ್ತಿಕ ಆದಾಯ ತೆರಿಗೆಯ ಪಾಲನ್ನು ತೋರಿಸುತ್ತದೆ. ಕಾರ್ಪೊರೇಟ್ ತೆರಿಗೆಗಳ ಪಾಲು 2011–12ರ ವರೆಗೆ ಏರುತ್ತಾ ಹೋಗಿದ್ದು, ಅಲ್ಲಿಂದ ಇಳಿಮುಖಗೊಳ್ಳಲಾರಂಭಿಸಿದೆ, ಆದರೆ ವೈಯಕ್ತಿಕ ಆದಾಯ ತೆರಿಗೆಯ ಪಾಲು ಏರುತ್ತಲೇ ಬಂದಿದೆ. 2014–15 ರ ವೇಳೆಗೆ, ಅಂದರೆ 'ಅಚ್ಛೇ ದಿನ್'ಗಳ ಆರಂಭದ ವೇಳೆಗೆ, ವೈಯಕ್ತಿಕ ಆದಾಯ ತೆರಿಗೆಯ ಪಾಲು ಸುಮಾರು ಶೇ. 20 ಇದ್ದದ್ದು, 2023–24 ಫೆಬ್ರುವರಿ ವೇಳೆಗೆ ಶೇ. 28ಕ್ಕೆ ಏರಿದರೆ, ಕಾರ್ಪೊರೇಟ್ ತೆರಿಗೆಗಳ ಪಾಲು ಸುಮಾರು ಶೇ. 32ರಿಂದ ಶೇ. 26ಕ್ಕೆ ಇಳಿದಿದೆ. ಇದು ವೈಯಕ್ತಿಕ ಆದಾಯ ತೆರಿಗೆಗಳ ಪಾಲಿಗಿಂತಲೂ ಕಡಿಮೆ! 2019ರಲ್ಲಿ 'ಅಮೃತ ಕಾಲ'ದ ಸರಕಾರ ಕಾರ್ಪೊರೇಟ್‌ಗಳಿಗೆ ತೆರಿಗೆ ದರಗಳಲ್ಲಿ ಭಾರೀ ಕಡಿತದ 'ಕೊಡುಗೆ'ಯನ್ನು ನೀಡಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ತಖ್ತೆ1



ತಖ್ತೆ 2



ತಖ್ತೆ 2ರಲ್ಲಿ ಸರಕಾರದ ಆದಾಯದಲ್ಲಿ ನೇರ ತೆರಿಗೆಗಳು ಮತ್ತು ಪರೋಕ್ಷ ತೆರಿಗೆಗಳ ಪಾಲುಗಳ ನಡುವಿನ ಅಂತರ 2014–15 ರ ನಂತರ ತೀವ್ರವಾಗಿ ಏರುತ್ತಿರುವದನ್ನು ಕಾಣಬಹುದು. ಅಲ್ಲದೆ 1980–81ರಿಂದ ಇಳಿಯುತ್ತ ಬಂದಿದ್ದ ಪರೋಕ್ಷ ತೆರಿಗೆಗಳ ಪಾಲು 2010–11ರಿಂದ ಏರುತ್ತ ಬಂದಿರುವುದನ್ನು ಮತ್ತು ಏರುತ್ತ ಬಂದಿದ್ದ ನೇರ ತೆರಿಗೆಗಳ ಪಾಲು ಇಳಿಯುತ್ತ ಬಂದಿರುವುದನ್ನು ಕೂಡ ಕಾಣಬಹುದು. 2014–15ರಲ್ಲಿ ಶೇ. 40ರಷ್ಟಿದ್ದ ನೇರ ತೆರಿಗೆಗಳ ಪಾಲು 2021–22ರಲ್ಲಿ ಶೇ. 34.2ಕ್ಕೆ ಇಳಿದರೆ, ಸುಮಾರು ಶೇ. 60ರಷ್ಟಿದ್ದ ಪರೋಕ್ಷ ತೆರಿಗೆಗಳ ಪಾಲು ಶೇ. 65.8ಕ್ಕೆ ಏರಿದೆ.

ನೇರ ತೆರಿಗೆಗಳೆಂದರೆ ವೈಯಕ್ತಿಕ ಮತ್ತು ಕಾರ್ಪೊರೇಟ್‌ಗಳ ಆದಾಯಗಳ ಮೇಲೆ ವಿಧಿಸುವ ತೆರಿಗೆ ಮತ್ತು ಪರೋಕ್ಷ ತೆರಿಗೆಯೆಂದರೆ ಎಲ್ಲರೂ ಬಳಸುವ ಸರಕುಗಳ ಮೇಲೆ ಕೇಂದ್ರ ಸರಕಾರದ ಅಬಕಾರಿ ತೆರಿಗೆಗಳು ಮತ್ತು ಈಗ ಜಿಎಸ್‌ಟಿ.

ನೇರ ತೆರಿಗೆಗಳನ್ನು ಹೆಚ್ಚಿನ ಆದಾಯದವರು ಹೆಚ್ಚಿನ ದರ/ಪ್ರಮಾಣದಲ್ಲಿ ತೆರುತ್ತಾರೆ. ಇದು ಸುಮಾರು ಶೇ. 6ರಷ್ಟು ಇಳಿದಿದೆ, ಆದರೆ ಪರೋಕ್ಷ ತೆರಿಗೆಗಳ ದರ/ಪ್ರಮಾಣ ಸೂಪರ್ ಶ್ರೀಮಂತನಿಗಾಗಲೀ ಕಡು ಬಡವನಿಗಾಗಲೀ ಒಂದೇ. ಇದು ಸುಮಾರು ಶೇ.6 ರಷ್ಟು ಏರಿದೆ.

ಅಂದರೆ ಜನಸಾಮಾನ್ಯರಿಂದ ಹೆಚ್ಚಿನ ತೆರಿಗೆಗಳ ಮೂಲಕ ಕಿತ್ತುಕೊಂಡು ಅದನ್ನು ಕಾರ್ಪೊರೇಟ್ ತೆರಿಗೆಗಳಲ್ಲಿ ರಿಯಾಯ್ತಿ/ ವಿನಾಯ್ತಿಗಳ ರೂಪದಲ್ಲಿ ಶ್ರೀಮಂತರಿಗೆ ಹಂಚಲಾಗಿದೆ. ಇದಲ್ಲದೆ, ಕಾರ್ಪೊರೇಟ್‌ಗಳ ಬ್ಯಾಂಕ್ ಸುಸ್ತಿಸಾಲಗಳ ರೈಟ್–ಆಫ್ ಮತ್ತು ದೇಶದ ಸೊತ್ತುಗಳಾದ ಸಾರ್ವಜನಿಕ ವಲಯದ ಘಟಕಗಳ ಹಾಗೂ ನೈಸರ್ಗಿಕ ಸಂಪತ್ತುಗಳ ಖಾಸಗೀಕರಣವೂ ಶ್ರೀಮಂತರ ಸಂಪತ್ತನ್ನು ಹೆಚ್ಚಿಸುವ ಪ್ರಕ್ರಿಯೆ ಕಳೆದ 10 ವರ್ಷಗಳಲ್ಲಿ ಹೆಚ್ಚು

ಪುಟ 12 ಕ್ಕೆ


ಈಗ ಮೋದಿ ಬಾಯಲ್ಲೂ ಅದಾನಿ–ಅಂಬಾನಿ ಕಪ್ಪು ಹಣ?

ನಿಜಸ್ಥಿತಿ ವ್ಯಂಗ್ಯಚಿತ್ರಕಾರರೂ ಅವಾಕ್ಕಾಗುವಂತೆ ವರ್ತಿಸುತ್ತಿರುವ ದಿನಗಳಿವು. ಪ್ರಧಾನ ಮಂತ್ರಿಗಳು 2024ರ ಸಾರ್ವತ್ರಿಕ ಚುನಾವಣೆಗಳ ಭಾಷಣಗಳಲ್ಲಿ ಮುಸ್ಲಿಂ, ಪಾಕಿಸ್ತಾನ, ಮಂಗಲಸೂತ್ರ, ಎಮ್ಮೆಯ ನಂತರ ಈಗ ಮೂರನೇ ಹಂತ ಮುಗಿಯುತ್ತಿದ್ದಂತೆ ತಮ್ಮ ಆಪ್ತಮಿತ್ರರಾದ ಅದಾನಿ–ಅಂಬಾನಿಗಳನ್ನೂ ಎಳೆದು ತಂದಿದ್ದಾರೆ.


ತೆಲಂಗಾಣದಲ್ಲಿ ಪ್ರಚಾರ ಭಾಷಣ ಮಾಡುತ್ತ ಅದಾನಿ–ಅಂಬಾನಿಯಿಂದ ಈ ಚುನಾವಣೆಗೆ ಎಷ್ಟು ಚೀಲಗಳಲ್ಲಿ ಹಣ ಪಡೆದಿದ್ದೀರಿ, ಒಂದು ಟೆಂಪೋ ತುಂಬ ಕಪ್ಪು ಹಣ ಕಾಂಗ್ರೆಸ್ ಕಚೇರಿ ಸೇರಿದೆಯೆ? ಚುನಾವಣಾ ಘೋಷಣೆಯ ನಂತರ ಇದ್ದಕಿದ್ದಂತೆ ಅಂಬಾನಿ–ಅದಾನಿಗಳನ್ನು ಟೀಕಿಸುವುದನ್ನು ನಿಲಿಸಿದ್ದೀರಲ್ಲ, ಏನು ವ್ಯವಹಾರ ಕುದುರಿಸಿದ್ದೀರಿ ಎಂದು ರಾಹುಲ್ ಗಾಂಧಿ ಮತ್ತು ಕಾಂಗ್ರೆಸನ್ನು ಪ್ರಶ್ನಿಸಿದರು!

ಬಹಳಷ್ಟು ಮಂದಿಗೆ ಇದೊಂದು ವಿಚಿತ್ರ ಪ್ರಶ್ನೆಯಾಗಿ ಕಂಡಿದೆ. ಈ ಆಪ್ತರು ಇದುವರೆಗಿನ ಮತದಾನದ ವರದಿಗಳನ್ನು ಪಡೆದು 'ಪಕ್ಷಾಂತರ' ಮಾಡಿದ್ದಾರೆಯೇ? ಜನಗಳು ಏನು ಹೇಳುತ್ತಾರೋ ಗೊತ್ತಿಲ್ಲ, ಅದರೆ ವ್ಯಂಗ್ಯಚಿತ್ರಕಾರರಂತೂ, ಅವರ ಅಸ್ತಿತ್ವಕ್ಕೇ ಕುತ್ತು ತಂದಿರುವ ಪ್ರಶ್ನೆಗೆ ಹೇಗೆ ಪ್ರತಿಕ್ರಿಯಿಸಿದ್ದಾರೆ ನೋಡಿ:

'ಸಾಹೇಬರೇ ತಪ್ಪು ಅಡ್ರೆಸ್ ಕೊಟ್ಟಿದ್ದೀರಾ?' ಅದಾನಿ & ಅಂಬಾನಿ ಕಂ. ಟ್ರಕ್ ಚಾಲಕರಿಗೆ ಗೊಂದಲ!
–ಸತೀಶ ಅಚಾರ್ಯ, 'ದಿ ಸೌತ್‌ಫಸ್ಟ್.ಕಾಂ



"'ಇನ್ನೂ ಎಷ್ಟು ಹಂತಗಳು ಉಳಿದಿವೆ"
'ಸಾಹೇಬ'ರಿಗೆ ಅಂಬಾನಿ ಅದಾನಿ ಪ್ರಶ್ನೆ?
– ಅಲೋಕ್ ನಿರಂತರ್(ಫೇಸ್ ಬುಕ್)



"ಇದು ನಟನೆಯಷ್ಟೇ"
ಅದಾನಿ–ಅಂಬಾನಿಗೆ ಆಶ್ವಾಸನೆ?
–ಪೆನ್ಸಿಲಾಶನ್, ಫೇಸ್‌ಬುಕ್)



"ವ್ಯಂಗ್ಯ ಸತ್ತಿದೆ, ಈ ಬಾರಿ, ಕಾಂಗ್ರೆಸ್ ಕಚೇರಿಗೆ 'ಕಪ್ಪುಹಣ'ವನ್ನು ಒಯ್ಯುತ್ತಿದ್ದ ಟ್ರಕ್ ಹೊಡೆದು"!
–ಸಜಿತ್‌ಕುಮಾರ್, ಡೆಕ್ಕನ್ ಹೆರಾಲ್ಡ್



ಮುಸ್ಲಿಮರ ಜನಸಂಖ್ಯೆ ಹಿಂದು ಜನಸಂಖ್ಯೆಗಿಂತ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆಯೇ?

ಸಂಘಪರಿವಾರ ಮತ್ತು ನರೇಂದ್ರ ಮೋದಿಯವರು ಅವಕಾಶ ಸಿಕ್ಕಾಗಲೆಲ್ಲ ಮುಸ್ಲಿಮರ ವಿರುದ್ಧ ದ್ವೇಷ ಉಗುಳಲು ಹಿಂಜರಿಯುವುದಿಲ್ಲ. ಅದೂ ಸಹಾ, ಚುನಾವಣಾ ಸಮಯದಲ್ಲಿ ಇಸ್ಲಾಮೋಫೋಬಿಯಾ ಅವರ ಸ್ವಭಾವದಂತೆ ಮುಂಚೂಣಿಗೆ ಬಂದುಬಿಡುತ್ತದೆ. ಉಸಿರುಗಟ್ಟಿಸುವ ರೀತಿಯಲ್ಲಿ ಸುಳ್ಳುಗಳ ಕಟ್ಟುಗಳನ್ನು ಬಿಚ್ಚಿ ಹರಿಯಬಿಡುತ್ತಾರೆ. ಅವರು ಮಾಂಸ ತಿನ್ನುತ್ತಾರೆ, ಅವರು ಗೋಮಾಂಸ ತಿನ್ನುತ್ತಾರೆ, ಅವರು ಹಿಂದೂಗಳ ಆಸ್ತಿ, ಹಣ, ಭೂಮಿ, ಬೆಳ್ಳಿ ಮತ್ತು ಚಿನ್ನವನ್ನು ಕಸಿದುಕೊಂಡು ಮುಸ್ಲಿಮರಿಗೆ ಕೊಡುತ್ತಾರೆ; ನಾನು ಉಸಿರು ಇರುವವರೆಗೂ ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಕಸಿದುಕೊಂಡು ಮುಸ್ಲಿಮರಿಗೆ ಕೊಡಲು ಬಿಡುವುದಿಲ್ಲ; ನಾವು 400 ಕ್ಕೂ ಹೆಚ್ಚು ಸಂಸದರನ್ನು ಗೆಲ್ಲದಿದ್ದರೆ, ಮುಸ್ಲಿಮರು ಕ್ರಿಕೆಟ್ ತಂಡಗಳಲ್ಲಿ ಪ್ರಾಬಲ್ಯ ಸಾಧಿಸುತ್ತಾರೆ. ಇಂತಹ ಹಲವು ಸುಳ್ಳುಗಳನ್ನು ಹೇಳತೊಡಗಿದ್ದಾರೆ. ಇದು ಮತ್ತಷ್ಟು ಮುಂದೆ ಹೋಗಿ, ಸದ್ಯ ಪ್ರಧಾನಮಂತ್ರಿಗಳ ಆರ್ಥಿಕ ಸಲಹಾ ಸಮಿತಿ 'ಅಧ್ಯಯನ' ಬಿಡುಗಡೆ ಮಾಡಿದ್ದು, 'ಇದೇ ರೀತಿ ಮುಂದುವರಿದರೆ ಜನಸಂಖ್ಯೆಯಲ್ಲಿ ಹಿಂದೂಗಳಿಗಿಂತ ಮುಸ್ಲಿಮರು ಹೆಚ್ಚಾಗುತ್ತಾರೆ' ಎಂಬ ಸುಳ್ಳನ್ನು ವರದಿ ಮಾಡುವ ಮೂಲಕ, ಸಂಘಪರಿವಾರ ಭಾರತದಲ್ಲಿ ಬಹಳ ದಿನಗಳಿಂದ ಹಬ್ಬಿಸುತ್ತಿದ್ದ ಸುಳ್ಳು ವದಂತಿಗಳ ಪ್ರಚಾರದಲ್ಲಿ ತಾನೂ ಕೈಜೋಡಿಸಿದೆ. ಚುನಾವಣೆಯ ಸಂದರ್ಭದಲ್ಲಿ ಆರ್ಥಿಕ ಸಲಹಾ ಸಮಿತಿ ಇಂತಹ ವದಂತಿಯನ್ನು ಹುಟ್ಟು ಹಾಕಿದೆ. ಬಿಜೆಪಿಗೆ ಬೆಂಬಲ ಕೋರುವ ಅಬ್ಬರದ ಪ್ರಯತ್ನಗಳಲ್ಲಿ ಇದೂ ಒಂದು. ಇದಕ್ಕೂ ಮೊದಲು, ಭಾರತದ ಹಿಂದುಳಿದ ವ್ಯಕ್ತಿಗಳ ಆಯೋಗದ ಅಧ್ಯಕ್ಷರು, ಈ ಆಡಳಿತದಲ್ಲಿ ಆಯೋಗವು ಸಾಂವಿಧಾನಿಕ ಮಾನ್ಯತೆಯನ್ನು ಪಡೆಯಿತು; ಆದ್ದರಿಂದ ಭಾರತವನ್ನು ಉಳಿಸುವವರನ್ನು ಬೆಂಬಲಿಸುವಂತೆ ಅವರು ಇತರ ಹಿಂದುಳಿದ ವರ್ಗಗಳಿಗೆ ಮನವಿ ಮಾಡಿದರು. ಚುನಾವಣಾ ಆಯೋಗವು ಈ ಅಸಹ್ಯಕರ ಪ್ರಯತ್ನಗಳನ್ನು ನೋಡಿಯೂ ಮೌನವಾಗಿದೆ.

ಇವರೆಲ್ಲರ ಬಾಯಲ್ಲೂ ವಿಷ

ಇದಲ್ಲದೇ, ಸಂಘಪರಿವಾರವು ಮುಸ್ಲಿಮರ ಬಗ್ಗೆ ಅನೇಕ ಅಪಪ್ರಚಾರಗಳನ್ನು ಮಾಡುತ್ತಲೇ ಇದೆ. ಇವುಗಳಲ್ಲಿ ಇತ್ತೀಚಿನದು "ಮುಸ್ಲಿಂ ಜನಸಂಖ್ಯೆಯ ಹೆಚ್ಚಳದ" ಬಗ್ಗೆ ವದಂತಿಗಳು. ಸಂಘಪರಿವಾರಕ್ಕೆ ಅದು ಸುಳ್ಳು ಎಂದು ತಿಳಿದಿದ್ದರೂ ವದಂತಿ ಹಬ್ಬಿಸುತ್ತಿದ್ದಾರೆ. ಗುಜರಾತ್ ಹಿಂಸಾಚಾರದಿಂದ ಸಂತ್ರಸ್ತರಾದ ಮತ್ತು ಪರಿಹಾರ ಶಿಬಿರಗಳಲ್ಲಿದ್ದ ಮುಸ್ಲಿಮರನ್ನು ಮೋದಿ ಅವರೇ "ಬೇಬಿ ಫ್ಯಾಕ್ಟರಿಗಳು" (ಮಕ್ಕಳನ್ನು ತಯ್ಯಾರಿಸುವ ಕಾರ್ಖಾನೆಗಳು) ಎಂದು ಉಲ್ಲೇಖಿಸಿದ್ದರು. "ನಾವಿಬ್ಬರು ಮತ್ತು ನಮಗಿಬ್ಬರು, ನಾವು ಐವರು ಮತ್ತು ನಮಗೆ ಇಪ್ಪತ್ತೈದು" ಎಂದು ಮೋದಿಯವರು ಮುಸ್ಲಿಮರ ಬಗ್ಗೆ ಮಾತನಾಡಿದ್ದರು. ಇತ್ತೀಚೆಗೆ ರಾಜಸ್ಥಾನದಲ್ಲಿ ಮಾತನಾಡಿದ ಅವರು, 'ಹಲವು ಮಕ್ಕಳನ್ನು ಹೊಂದಿರುವ ಜನರು' ಎಂದು ಉಲ್ಲೇಖಿಸಿದರು. ನಿರ್ಮಲಾ ಸೀತಾರಾಮನ್ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಜನಸಂಖ್ಯೆ ನಿಯಂತ್ರಣಕ್ಕೆ ನೀತಿ ರೂಪಿಸಬೇಕು ಎಂದು ಹೇಳಿದ್ದಾರೆ. ಅಸ್ಸಾಂ ರಾಜ್ಯದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಅಸ್ಸಾಂನಲ್ಲಿ ಮುಸ್ಲಿಂ ಜನಸಂಖ್ಯೆಯು 35 ಪ್ರತಿಶತಕ್ಕೆ ಹೋಗುತ್ತಿದೆ;

"ದೇಶದ ಜನಸಂಖ್ಯೆಯಲ್ಲಿ ಮುಸ್ಲಿಮರ ಪ್ರಮಾಣ 1950ರಿಂದ 2015ರ ನಡುವೆ ಶೇ.43ರಷ್ಟು ಏರಿಕೆಯಾಗಿದೆ. ಇದೇ ಅವಧಿಯಲ್ಲಿ ಹಿಂದೂಗಳ ಪ್ರಮಾಣ ಶೇ.7.8 ರಷ್ಟು ಇಳಿಕೆಯಾಗಿದೆ. ಇದರಿಂದ ಮುಸ್ಲಿಮರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ ಮತ್ತು ಹಿಂದೂಗಳ ಜನಸಂಖ್ಯೆ ಭಾರಿ ಪ್ರಮಾಣದಲ್ಲಿ ಕುಸಿಯುತ್ತಿದೆ" ಎಂದು ಪ್ರಧಾನಿಯ ಆರ್ಥಿಕ ಸಲಹಾ ಸಮಿತಿಯ ಅಧಿಕಾರಿಗಳು ಸಿದ್ಧಪಡಿಸಿರುವ ವರದಿ ಹೇಳಿದೆ. ಈ ವರದಿ ಬಹಳಷ್ಟು ಅಸತ್ಯಗಳಿಂದ ಕೂಡಿದೆ. ರಾಷ್ಟ್ರೀಯ ಮಾದರಿ ಕುಟುಂಬ ಸಮೀಕ್ಷೆ ವರದಿಯಲ್ಲಿ ಹಿಂದೂ ಮಹಿಳೆ ಮತ್ತು ಮುಸ್ಲಿಂ ಮಹಿಳೆಯ ಫಲವತ್ತತೆ ಪ್ರಮಾಣವನ್ನು ನೋಡಿದರೆ ಇವರು ಎಷ್ಟು ಸುಳ್ಳು ಹೇಳುತ್ತಾರೆ ಎಂಬುದು ತಿಳಿಯುತ್ತದೆ.

ಆದ್ದರಿಂದ ಅವರನ್ನು ಅಲ್ಪಸಂಖ್ಯಾತರೆಂದು ಕರೆಯಬಾರದು. ಅಲ್ಪಸಂಖ್ಯಾತರಿಗೆ ಯಾವುದೇ ಸವಲತ್ತುಗಳನ್ನು ತೋರಿಸಬಾರದು ಎಂದು ಹೇಳಿದರು.

ಮುಸ್ಲಿಂ ಹೆಸರಿನಲ್ಲಿ ಒಂದು ತಿರುವು

ಕಳೆದ ವರ್ಷ ಫೆಬ್ರುವರಿ 14ರಂದು ಆರ್‌ಎಸ್‌ಎಸ್‌ನ ಆರ್ಗನೈಸರ್ ಪತ್ರಿಕೆ "ಮುಸ್ಲಿಂ ಜನಸಂಖ್ಯೆಯ ಬೆಳವಣಿಗೆ ಭಾರತಕ್ಕೆ ಏಕೆ ಆತಂಕಕಾರಿ" ಎಂಬ ತಲೆಬರಹದಲ್ಲಿ ಸಲಾವುದ್ದೀನ್ ಸೋಗೈಬ್ ಚೌದ್ರಿ ಎಂಬ ಮುಸ್ಲಿಂ ಹೆಸರಿನಲ್ಲಿ ಲೇಖನವನ್ನು ಬರೆಯಲಾಗಿತ್ತು. ಅದರ ಪ್ರಕಾರ, ಭಾರತದ ಜನಸಂಖ್ಯೆಯು 2100 ರ ವೇಳೆಗೆ 200 ಕೋಟಿ ಆಗುತ್ತದೆ; ಆಗ ಮುಸ್ಲಿಮರು ಭಾರತದ ಜನಸಂಖ್ಯೆಯ ಶೇ. 30 ರಷ್ಟಾಗುತ್ತಾರೆ; ಅದು 90 ಕೋಟಿ ಆಗುತ್ತಾರೆ ಎಂದು ಬರೆದುಕೊಂಡಿದ್ದಾರೆ. ಯಾವ ಲೆಕ್ಕದಲ್ಲಿ ಎಂದು ಗೊತ್ತಿಲ್ಲ. ಜನಸಂಖ್ಯೆ 300 ಕೋಟಿಯಾದರೆ ಮಾತ್ರ, ಅದರ ಶೇ.30 ಎಂಬುದು 90 ಕೋಟಿ ಆಗುತ್ತದೆ. ಆದರೆ, ಒಟ್ಟು ಜನಸಂಖ್ಯೆ 200 ಕೋಟಿಯಾದರೆ ಮುಸ್ಲಿಮರ ಜನಸಂಖ್ಯೆ ಶೇ. 30 ರಷ್ಟಾಗುತ್ತದೆ ಮತ್ತು 90 ಕೋಟಿ ಆಗುತ್ತಾರೆ ಎಂಬುದು ಯಾವುದೇ ಲೆಕ್ಕದಲ್ಲಿ ಸಾಧ್ಯವಿಲ್ಲ. ಮುಸ್ಲಿಮರಲ್ಲಿ ಗಮನಾರ್ಹ ಪ್ರಮಾಣವು ಉಗ್ರಗಾಮಿಗಳು ಮತ್ತು ಜಿಹಾದಿಗಳು ಎಂದು ಆ ಲೇಖನವು ಹೇಳುತ್ತದೆ. ಬರಹಗಾರನ ಮನೆಯಲ್ಲಿ ಅವನ ತಾಯಿ ಅದೇ ವಿಷಯದ ಬಗ್ಗೆ ಮಾತನಾಡುತ್ತಿರಬೇಕು. ಅಂದರೆ ಪವಿತ್ರ ಯುದ್ಧದ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ ಎಂದು ಬರೆದುಕೊಂಡಿದ್ದಾರೆ. ಮುಸ್ಲಿಮರು ತಮ್ಮ ವಾರ್ಷಿಕ ಉಳಿತಾಯದ 2.5 ಪ್ರತಿಶತವನ್ನು 'ಝುಕಾತ್' ಆಗಿ ಪಾವತಿಸುತ್ತಾರೆ. "ಆ ಹಣವನ್ನು ಭಾರತದಲ್ಲಿ ಮತ್ತು ಪ್ರಪಂಚದಾದ್ಯಂತ ಮಾಧ್ಯಮಗಳಿಗೆ ನೀಡುತ್ತಾರೆ; ಇದರಿಂದಾಗಿ ಅವರ ಬಗ್ಗೆ ಮಾಧ್ಯಮಗಳು ಉಸಿರುಬಿಡುತ್ತಿಲ್ಲ." ಹೀಗೆ ಅವರ ಹಲವಾರು ದ್ವೇಷದ ಬರಹಗಳನ್ನು ನಾವು ಪಟ್ಟಿ ಮಾಡಬಹುದು. ಆದರೆ, ಇವು ಸಂಪೂರ್ಣ

ಮಹಿಳೆಯ ಫಲವತ್ತತೆ ಪ್ರಮಾಣ				
ಧರ್ಮ	NFHS 2	NFHS 3	NFHS 4	NFHS 5
ಹಿಂದೂ	2.78	2.59	2.13	1.94
ಮುಸ್ಲಿಂ	3.59	3.4	2.62	2.36
ಕ್ರೈಸ್ತ	2.44	2.34	1.99	1.88
ಸಿಖ್	2.26	1.95	1.58	1.61
ಬೌದ್ಧ	2.13	2.25	1.74	1.39
ಜೈನ್	1.9	1.54	1.2	1.6

(NFHS: ರಾಷ್ಟ್ರೀಯ ಮಾದರಿ ಕುಟುಂಬ ಸಮೀಕ್ಷೆ)

ಸುಳ್ಳು ಅಥವಾ ಅಲ್ಪ ಸತ್ಯದೊಂದಿಗೆ ಮಿಶ್ರಿತ ಸುಳ್ಳುಗಳಾಗಿವೆ.

ಶುದ್ಧ ಸುಳ್ಳು

ಈಗ ಪ್ರಧಾನಿಯವರ ಆರ್ಥಿಕ ಸಲಹಾ ಸಮಿತಿಯ ವರದಿಯ ಚರ್ಚೆಗೆ ಬರೋಣ. ಅದೇನೆಂದರೆ, "ಭಾರತದಲ್ಲಿ ಮುಸ್ಲಿಮರು ಕುಟುಂಬ ಯೋಜನೆಯನ್ನು ಅನುಸರಿಸುವುದಿಲ್ಲ. ಆದ್ದರಿಂದ ಅವರ ಜನಸಂಖ್ಯೆಯು 65 ವರ್ಷಗಳಲ್ಲಿ ಭಾರತದ ಜನಸಂಖ್ಯೆಯ 9.84 ಪ್ರತಿಶತದಿಂದ 14.09 ಪ್ರತಿಶತಕ್ಕೆ ಏರಿದೆ. ಇದಕ್ಕೆ ವ್ಯತಿರಿಕ್ತವಾಗಿ, ಅದೇ ಅವಧಿಯಲ್ಲಿ ಹಿಂದೂ ಜನಸಂಖ್ಯೆಯು 84.68 ಪ್ರತಿಶತದಿಂದ 78.06 ಪ್ರತಿಶತಕ್ಕೆ ಕುಸಿದಿದೆ. ಕಾರಣ ಮುಸ್ಲಿಮರು ಎಷ್ಟು ಮಕ್ಕಳನ್ನು ಬೇಕಾದರೂ ಹೊಂದಬಹುದು. ಕುಟುಂಬ ಯೋಜನೆ ಕಾನೂನುಗಳು ಅವರಿಗೆ ಅನ್ವಯಿಸುವುದಿಲ್ಲ. ಎರಡಕ್ಕಿಂತ ಹೆಚ್ಚು ಮಕ್ಕಳಿರುವವರಿಗೆ ಸರ್ಕಾರದ ನೆರವು ನೀಡಬಾರದು. ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು" ಎಂದು ಹೇಳಲಾರಂಭಿಸಿದ್ದಾರೆ.


ಸತ್ಯ ಏನು?

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (NFHS-5) ಇತ್ತೀಚಿನ ಸುತ್ತಿನ ಪ್ರಕಾರ, 2019–21 ರಲ್ಲಿ, ಭಾರತದಲ್ಲಿ ಒಟ್ಟು ಫಲವತ್ತತೆ ದರ (TFR, ಅಥವಾ ಸರಾಸರಿ ಮಹಿಳೆಗೆ ಜನಿಸಿದ ಮಕ್ಕಳ ಸಂಖ್ಯೆ) ಈಗಾಗಲೇ 2.1 ರ ಬದಲಿ ಮಟ್ಟಕ್ಕಿಂತ ಕಡಿಮೆಯಾಗಿದೆ. NFHS-5 ಪ್ರಕಾರ, ಹಿಂದೂಗಳಲ್ಲಿ TFR 1.9 ಎಂದು ಅಂದಾಜಿಸಲಾಗಿದೆ, ಆದರೆ ಮುಸ್ಲಿಮರಲ್ಲಿ ಇದು 2.4 ಆಗಿದೆ. ಆದಾಗ್ಯೂ, ಭಾರತದಲ್ಲಿ ಕ್ಷೀಣಿಸುತ್ತಿರುವ ಫಲವತ್ತತೆಯು ಮುಸ್ಲಿಮರು ಸೇರಿದಂತೆ ಎಲ್ಲಾ ಧಾರ್ಮಿಕ ಗುಂಪುಗಳನ್ನು ಒಳಗೊಳ್ಳುತ್ತದೆ.

ಭಾರತಕ್ಕೆ ಈ ಫಲವತ್ತತೆಯ ಅನುಪಾತವು ರಾಜ್ಯದಿಂದ ರಾಜ್ಯಕ್ಕೆ ಮತ್ತು ಜಿಲ್ಲೆಯಿಂದ ಜಿಲ್ಲೆಗೆ ಬದಲಾಗುತ್ತದೆ. ಉದಾಹರಣೆಗೆ, ದಿ ಹಿಂದೂ ಇಂಗ್ಲಿಷ್ ನಿಯತಕಾಲಿಕದ ಏಪ್ರಿಲ್ 23, 2022 ರ ಸಂಚಿಕೆಯಲ್ಲಿ ವಿಘ್ನೇಶ್ ರಾಧಾಕೃಷ್ಣನ್ ಮತ್ತು ರೆಬೆಕಾ ರೋಸ್ ವರ್ಗೀಸ್ ಅವರು ಮೂರು ಪಟ್ಟಿಗಳನ್ನು ಸಂಗ್ರಹಿಸಿದ್ದಾರೆ. ಆ ಮೂರು ಪಟ್ಟಿಗಳು ರಾಷ್ಟ್ರೀಯ ಮಾದರಿ ಕುಟುಂಬ ಸಮೀಕ್ಷೆಯನ್ನು ಆಧರಿಸಿವೆ ಎಂದು ಅವರು ಹೇಳಿದ್ದಾರೆ. ಇದು 1998–99 ರಿಂದ 2019–2021 ರ ಅವಧಿಗೆ ಹಿಂದೂ ಮಹಿಳೆ ಮತ್ತು ಮುಸ್ಲಿಂ ಮಹಿಳೆಯ ಫಲವತ್ತತೆ ಪ್ರಮಾಣವನ್ನು ಪಟ್ಟಿಮಾಡುತ್ತದೆ. ಮುಸ್ಲಿಂ ಮಹಿಳೆಯರ ಫಲವತ್ತತೆ ದರಗಳು ಎಲ್ಲೆಡೆ ಹೆಚ್ಚಿವೆ. ಇದರಲ್ಲಿ ಎರಡು ಮಾತಿಲ್ಲ. ಆದರೆ, ಆ ಅಂತರವು 1998–99 ರಲ್ಲಿ 0.81 ರಿಂದ 2019–21 ರಲ್ಲಿ 0.42 ಕ್ಕೆ ಕಡಿಮೆಯಾಗಿದೆ. ಅಂದರೆ, ಹಿಂದೂ ಮಹಿಳೆಯರು 1999ರಲ್ಲಿ ಸರಾಸರಿ 2.78 ಮಕ್ಕಳನ್ನು ಹೊಂದಿದ್ದರೆ, 2021ರಲ್ಲಿ ಅದು 1.94ಕ್ಕೆ ಇಳಿದಿದೆ. ಅಂದರೆ, 0.84 ರಷ್ಟು ಕಡಿಮೆ. ಮುಸ್ಲಿಂ ಮಹಿಳೆಯರು 1999ರಲ್ಲಿ ಸರಾಸರಿ 3.59 ಮಕ್ಕಳನ್ನು ಹೊಂದಿದ್ದರು. 2021ರಲ್ಲಿ 2.36ಕ್ಕೆ ಇಳಿಕೆಯಾಗಿದೆ. (ಅಂದರೆ, ಮುಸ್ಲಿಮಿರು ಹತ್ತಾರು ಮಕ್ಕಳನ್ನು ಹೆರುತ್ತಾರೆ ಎಂಬುದು ಶುದ್ಧ ಸುಳ್ಳು) ಅಂದರೆ ಮುಸ್ಲಿಂ ಮಹಿಳೆಯರ ಫಲವತ್ತತೆ ಪ್ರಮಾಣ 1.23ರಷ್ಟು ಇಳಿದಿದೆ. ಆದರೆ, ಇದರಲ್ಲಿ ಹಿಂದೂ ಮಹಿಳೆಯರ ಫಲವತ್ತತೆ ಪ್ರಮಾಣ ಹೆಚ್ಚು ಕುಸಿದಿದೆ. ಇದು ಸತ್ಯ ಸಂಗತಿ. ಇದರ ಕಾರಣವನ್ನು ನಂತರ ನೋಡಬಹುದು. (ಮಹಿಳೆಯರ ಫಲವತ್ತತೆ ಎಂದರೆ ಮಹಿಳೆಯ ಜೀವಿತಾವಧಿಯಲ್ಲಿ ಜನಿಸಿದ ಮಕ್ಕಳ ಸರಾಸರಿ ಸಂಖ್ಯೆ. ಆಯಾ ಧರ್ಮದ ಒಟ್ಟು ಮಹಿಳೆಯರ ಸರಾಸರಿ ಸಂಖ್ಯೆಯನ್ನು ಇಲ್ಲಿ ಲೆಕ್ಕ ಹಾಕಲಾಗಿದೆ.)

ಪುಟ 14 ಕ್ಕೆ

ಹಿಂದೂ ಮತ್ತು ಮುಸ್ಲಿಂ ಜನಸಂಖ್ಯೆಯಲ್ಲಿ TFR, 1992–2019



ರೇಖಾ ಚಿತ್ರ ಕೃಪೆ: IDEAS FOR INDIA

ಅಯೋಧ್ಯೆ: ರಾಮಲಲ್ಲಾ ವಿಗ್ರಹದ ಮೇಲೆ 'ಸೂರ್ಯ ತಿಲಕ' ಯೋಜನೆ ವಿಜ್ಞಾನದ ದುರುಪಯೋಗ-ರಾಜಕೀಯ ತಂತ್ರಗಾರಿಕೆ

ಏಪ್ರಿಲ್ 17, 2024 ರಂದು, ರಾಮ ನವಮಿಯ ದಿನ, ಅಯೋಧ್ಯೆಯಲ್ಲಿ ಇನ್ನೂ ನಿರ್ಮಾಣ ಹಂತದಲ್ಲಿರುವ ರಾಮಮಂದಿರದಲ್ಲಿ, ಸರಿಯಾಗಿ ಮಧ್ಯಾಹ್ನ 12 ಗಂಟೆಗೆ, ಬಾಲ ರಾಮನ ವಿಗ್ರಹದ ಹಣೆಯ ಮೇಲೆ ಕನ್ನಡಿ ಮತ್ತು ಮಸೂರ ಸಾಧನಗಳ ಮೂಲಕ ಸೂರ್ಯನ ಬೆಳಕನ್ನು ಕೇಂದ್ರೀಕರಿಸಿ 'ಸೂರ್ಯ ತಿಲಕ' ಮೂಡಿಸಿದ ಬಗೆಗೆ ದೇಶಾದ್ಯಂತ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನಡೆಯಿತು. ಅಸ್ಸಾಂನ ನಲ್ಬರಿಯಲ್ಲಿ ಚುನಾವಣಾ ಪ್ರಚಾರ ಭಾಷಣದಲ್ಲಿದ್ದ ಪ್ರಧಾನಿ ನರೇಂದ್ರ ಮೋದಿಯವರು ಆ ಸಂದರ್ಭಕ್ಕಾಗಿಯೇ ಕಾದು ಕುಳಿತಿದ್ದವರಂತೆ "ಜೈ ಶ್ರೀರಾಮ್" ಎಂಬ ಘೋಷಣೆಯನ್ನು ಮೊಳಗಿಸಿದರು. ಮೋದಿಯವರು ಎಲೆಕ್ಟ್ರಾನಿಕ್ ಸಾಧನಗಳ ಮೂಲಕ ಈ 'ಸೂರ್ಯ ತಿಲಕ'ದ ದೃಶ್ಯಾವಳಿಗಳನ್ನು ನೋಡುವ ಚಿತ್ರಗಳು ಎಲ್ಲೆಲ್ಲೂ ಹಂಚಿಕೆಯಾದವು.

ಪ್ರಧಾನಿಗಳು "500 ವರ್ಷಗಳ ಕಾಯುವಿಕೆಯ ನಂತರ, ಭಗವಾನ್ ರಾಮ ಈಗ ತನ್ನ ಭವ್ಯ ಮಂದಿರದಲ್ಲಿ ಕುಳಿತಿದ್ದಾನೆ...., ಭಗವಾನ್ ರಾಮನಿಗೆ ಸೂರ್ಯ ತಿಲಕವನ್ನು ಇಡುವ ಮೂಲಕ, ರಾಮನ ಜನ್ಮ ವಾರ್ಷಿಕೋತ್ಸವವನ್ನು ಪವಿತ್ರ ನಗರವಾದ ಅಯೋಧ್ಯೆಯಲ್ಲಿ ಆಚರಿಸಲಾಗುತ್ತಿದೆ" ಎಂದು ಹರ್ಷಚಿತ್ತರಾಗಿ ಘೋಷಿಸಿದರು.

ಈ ಘಟನೆ ಜರುಗುವ ಮುಂಚೆ ಮತ್ತು ನಂತರ ಈ ವಿಜ್ಞಾನದ ಈ ಕೊಡುಗೆಯ ಕುರಿತು ಅದೊಂದು 'ಭಾರತೀಯ ವಿಜ್ಞಾನದ ಅದ್ಭುತ ಸಾಧನೆ, ಹಾಗೂ ಅದೊಂದು ಅಸಾಧಾರಣ ಘಟನೆ' ಎಂಬಂತೆ ತುತ್ತೂರಿ ಮಾಧ್ಯಮಗಳು ಇನ್ನಿಲ್ಲದಂತೆ ತುತ್ತೂರಿ ಊದಿದವು. ಆಧುನಿಕ ವಿಜ್ಞಾನ ಮತ್ತು ಪ್ರಾಚೀನ ಧಾರ್ಮಿಕತೆಯ ನಿಜವಾದ ಸಂಯೋಗ ಇದು ಎಂದೂ ಪುಂಖಾನುಪುಂಖವಾಗಿ ಹೊಗಳಲಾಯಿತು.





ವಿಜ್ಞಾನ ಹಾಗೂ ವಿಜ್ಞಾನ ಸಂಸ್ಥೆಗಳ ದುರ್ಬಳಕೆ

ಬಾಲ ರಾಮನ ಹಣೆಯ ಮೇಲೆ ಸೂರ್ಯ ತಿಲಕ ಮೂಡಿದ್ದೇ ತಡ, ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ವಿಜ್ಞಾನ ತಂತ್ರಜ್ಞಾನ ಇಲಾಖೆ(ಡಿ.ಎಸ್.ಟಿ.)ಯ ಕಾರ್ಯದರ್ಶಿ, ಡಿಎಸ್‌ಟಿಯಿಂದ ಧನಸಹಾಯ ಪಡೆದ ಸ್ವಾಯತ್ತ ಸಂಶೋಧನಾ ಸಂಸ್ಥೆಯಾದ ಬೆಂಗಳೂರಿನ ಭಾರತೀಯ ಖಭೌತ ವಿಜ್ಞಾನ ಸಂಸ್ಥೆ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್-ಐಐಎ) ಮತ್ತು ಸೆಂಟ್ರಲ್ ಬಿಲ್ಡಿಂಗ್ ರಿಸರ್ಚ್ ಇನ್‌ಸ್ಟಿಟ್ಯೂಟ್ (ಸಿಬಿಆರ್‌ಐ) ಗಳನ್ನು ಈ 'ಘನ ಸಾಧನೆ'ಗಾಗಿ ಹಾಡಿ ಹೊಗಳಿ ಪೋಸ್ಟ್ ಮಾಡಿದರು. ಈ ಸೂರ್ಯ ತಿಲಕದ ವ್ಯವಸ್ಥೆಯನ್ನು ನವೆಂಬರ್ 2022 ರಲ್ಲಿ 'ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್' ಮೂಲಕ ಜಾರಿಗೊಳಿಸುವ ಬಗೆಗೆ ಘೋಷಿಸಿದಾಗ ದೇಶದ 300 ಕ್ಕೂ ಹೆಚ್ಚು ಪ್ರತಿಷ್ಠಿತ ವಿಜ್ಞಾನಿಗಳು ಭಾರತದ ಈ ಪ್ರಮುಖ ಸಂಶೋಧನಾ ಸಂಸ್ಥೆಯನ್ನು ಈ ಧಾರ್ಮಿಕ ಚಟುವಟಿಕೆಯಲ್ಲಿ ತೊಡಗಿಸುತ್ತಿರುವ ಬಗೆಗೆ ಗಂಭೀರವಾದ ಆಕ್ಷೇಪವನ್ನು ಎತ್ತಿದ್ದರು ಮತ್ತು ವೈಜ್ಞಾನಿಕ ಮನೋಭಾವವನ್ನು ಉತ್ತೇಜಿಸುವ ಸಾಂವಿಧಾನಿಕ ಕರ್ತವ್ಯದ ವಿಷಯದಲ್ಲಿ ತನ್ನ ಬದ್ಧತೆಯನ್ನು ಮರೆತಿದ್ದರ ಕುರಿತು ತೀವ್ರವಾಗಿ ಟೀಕಿಸಿ ಬಹಿರಂಗ ಪತ್ರವನ್ನು ಬರೆದಿದ್ದರು.

ದುರದೃಷ್ಟವಶಾತ್ ಸರಕಾರದ ಮತ್ತು ಸರಕಾರಿ ಅನುದಾನಿತ ವಿಜ್ಞಾನ ಸಂಸ್ಥೆಗಳನ್ನು ಈ ರೀತಿಯಾಗಿ ದುರ್ಬಳಕೆ ಮಾಡಿಕೊಳ್ಳುವ ಪ್ರವೃತ್ತಿಯು 2014 ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರ ಬಂದ ಮೇಲೆ ತೀವ್ರವಾಗಿ ಹೆಚ್ಚಿದೆ. ದೇಶೀಯ ಹಸುವಿನ ಸೆಗಣಿ-ಗಂಜಲಗಳಲ್ಲಿ ಕ್ಯಾನ್ಸರ್ ಮುಂತಾದ ಹಲವಾರು ಗಂಭೀರ ಕಾಯಿಲೆಗಳನ್ನು ವಾಸಿ ಮಾಡುವ ಔಷಧೀಯ ಅಂಶಗಳಿವೆ ಎಂದು ಹೇಳಿ, ಆ ಕುರಿತು ಹೆಚ್ಚಿನ ಸಂಶೋಧನೆ ಮಾಡಬೇಕೆಂದು ಅನುದಾನವನ್ನು ಬಿಡುಗಡೆ ಮಾಡಿ ಸರಕಾರವೊಂದು ಆಧುನಿಕ ಜಗತ್ತಿನ ಮುಂದೆ ಅಪಹಾಸ್ಯಕ್ಕೆ ಗುರಿಯಾಗಿದ್ದನ್ನು ನಾವು ಈ ಅವಧಿಯಲ್ಲಿ ನೋಡಿದೆವು.

ಇಲ್ಲಿ ದೇವಾಲಯದ ಎರಡನೇ ಮಹಡಿಯಿಂದ ವಿಗ್ರಹಕ್ಕೆ ಸೂರ್ಯನ ಬೆಳಕನ್ನು ಮರುನಿರ್ದೇಶಿಸಲು ಕನ್ನಡಿಗಳು ಮತ್ತು ಮಸೂರ ಮುಂತಾದ ಉಪಕರಣಗಳನ್ನು ಬಳಸಿಕೊಳ್ಳಲಾಗಿದೆ. ಈ ವಿಷಯದಲ್ಲಿ ಡಿಎಸ್‌ಟಿಯ ಕಾರ್ಯದರ್ಶಿಯು "ನಿಖರವಾದ ಲೆಕ್ಕಾಚಾರಗಳು ಮತ್ತು ಉತ್ತಮವಾದ ವಿನ್ಯಾಸ"ವನ್ನು ಹೊಗಳುತ್ತಿದ್ದಾರೆ. ತಜ್ಞ ವಿಜ್ಞಾನಿಗಳ ಪ್ರಕಾರ ಇದು "ಇರುವೆಯನ್ನು ಕೊಲ್ಲಲು ಫಿರಂಗಿ ತೆಗೆದುಕೊಂಡು ಬಂದಂತೆ." ಆಧುನಿಕ ವಿಜ್ಞಾನದ ಸಾಮರ್ಥ್ಯಕ್ಕೆ ಇದು ಏನೇನೂ ಅಲ್ಲ.

ಭೂಮಿಯಿಂದ ಹದಿನೈದು ಲಕ್ಷ ಕಿ.ಮೀ. ದೂರ ಹೋಗಿ ಅಲ್ಲಿಂದ ಸೂರ್ಯನ ಕುರಿತು ಅಧ್ಯಯನ ನಡೆಸುವ 'ಆದಿತ್ಯ ಎಲ್1' ಬಾಹ್ಯಾಕಾಶ ನೌಕೆಗಾಗಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್ ಸಂಸ್ಥೆಯು 'ರಿಮೋಟ್ ಸೆನ್ಸಿಂಗ್ ಪೇಲೋಡ್'ಗಳನ್ನು ವಿನ್ಯಾಸಗೊಳಿಸಿದೆ. ಇದು ಸೂರ್ಯನಿಂದ ಬರುವ ಕಿರಣ, ಸೌರ ಮಾರುತ ಇತ್ಯಾದಿಗಳನ್ನು ವೀಕ್ಷಿಸುವ ಮತ್ತು ಮಾಹಿತಿ ಸಂಗ್ರಹಿಸುವ ಇಂತಹ ಮೊದಲ ಭಾರತೀಯ ಕಾರ್ಯಾಚರಣೆಯಾಗಿದೆ. ಆದರೆ ಇಸ್ರೋ 'ಆದಿತ್ಯ ಎಲ್1' ಅನ್ನು ನಿಖರವಾದ ಸ್ಥಳದಲ್ಲಿ ಇರಿಸಲು ಅಗತ್ಯವಾದ ವಿವರವಾದ ಲೆಕ್ಕಾಚಾರಗಳನ್ನು ಯಶಸ್ವಿಯಾಗಿ ನಡೆಸಿತು. ಅಂತಹ ಸಾಧನೆಯ ಮುಂದೆ ಸೂರ್ಯ ತಿಲಕ ಯೋಜನೆಯ ಸಾಧನೆ ಏನೇನೂ ಅಲ್ಲ.

ಈ ಒಟ್ಟು 'ಸೂರ್ಯ ತಿಲಕ' ಯೋಜನೆಯೇ ರಾಜಕೀಯ ಪ್ರೇರಿತ. ಅದರಲ್ಲಿಯೂ ನಿರ್ದಿಷ್ಟವಾಗಿ ಪ್ರಸ್ತುತ ನಡೆಯುತ್ತಿರುವ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಮೈತ್ರಿಕೂಟದ ಪರವಾಗಿ ಮತಗಳನ್ನು ಸೆಳೆದು ರಾಜಕೀಯ ಲಾಭ ಪಡೆಯುವ ವ್ಯವಸ್ಥಿತ ಕುತಂತ್ರ ಇದರಲ್ಲಿದೆ. ಅದಕ್ಕೆ ತಕ್ಕಂತೆಯೇ ಎಲ್ಲವನ್ನೂ ವ್ಯವಸ್ಥಿತವಾಗಿ ಯೋಜಿಸಲಾಗಿದೆ.

ಒಂದು ಕಡೆ ಬಿಜೆಪಿ ಮತ್ತು ಸಂಘಪರಿವಾರದ ಜನರು ಪ್ರಾಚೀನ ಭಾರತದ ಜ್ಞಾನ-ವಿಜ್ಞಾನಗಳ ಸಾಧನೆಗಳ ಕುರಿತು ಉತ್ಪ್ರೇಕ್ಷಿತವಾದ ಮಾತುಗಳನ್ನಾಡಿ ವೈಭವೀಕರಿಸುತ್ತಾರೆ. ಪುರಾಣಗಳಲ್ಲಿ ಉಲ್ಲೇಖವಾಗಿರುವ ಪುಷ್ಪಕ ವಿಮಾನ, ದೂರ ದರ್ಶಕ ಮುಂತಾದ ಕಾಲ್ಪನಿಕ ಪರಿಕಲ್ಪನೆಗಳನ್ನೇ ತೋರಿಸಿ, ಪ್ರಾಚೀನ ಕಾಲದಲ್ಲೇ ವಿಮಾನ, ಟಿ.ವಿ.ಗಳೆಲ್ಲಾ ಇದ್ದವು ಎಂದು ಬಡಬಡಿಸುತ್ತಾರೆ. ಕೌರವರು ಮಡಕೆಯಲ್ಲಿ ಹುಟ್ಟಿದರು ಎಂಬ ಪುರಾಣ ಕತೆಯನ್ನೇ ತೋರಿಸಿ ಪ್ರಾಚೀನ ಭಾರತದಲ್ಲಿ ಪ್ರನಾಳ ಶಿಶು, ಕ್ಲೋನಿಂಗ್ ತಂತ್ರಜ್ಞಾನ ಮುಂತಾದುವೆಲ್ಲವೂ ಇದ್ದವು ಎಂಬ ನಗೆಪಾಟಲಿನ ವಾದಗಳನ್ನು ಮಂಡಿಸುತ್ತಾರೆ. ಆದರೆ ಸೂರ್ಯ ತಿಲಕದ ವಿಚಾರದಲ್ಲಿ ಪ್ರಾಚೀನ ಭಾರತದ ಜ್ಞಾನವನ್ನು ಬಿಟ್ಟು ಆಧುನಿಕ ವಿಜ್ಞಾನದ ಮೊರೆ ಹೋಗಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಭಾರತದಲ್ಲಿ ವ್ಯಾಪಕವಾಗಿ ದೀಪವನ್ನು ಹಚ್ಚಿದ್ದರಿಂದ ಕೊರೊನ ವೈರಸ್ ಅನ್ನು ಓಡಿಸುವಂತಹ 'ವಿಕಿರಣ' ಸೃಷ್ಟಿಯಾಗಿರುವುದನ್ನು ನಾಸಾ ಸಂಸ್ಥೆ ಪತ್ತೆ ಹಚ್ಚಿದೆ ಎಂದೂ ಸುಳ್ಳುಗಳನ್ನು ಹರಡಲಾಯಿತು. ಹಾಗೆಯೆ ತಟ್ಟೆಗಳು ಮತ್ತು ಪಾತ್ರೆಗಳನ್ನು ಬಡಿದದ್ದರಿಂದ ಉಂಟಾದ ಕಂಪನಗಳಿಂದ ಕೊರೊನ ವೈರಸ್ ಹಿಮ್ಮೆಟ್ಟಲು ಸಹಾಯವಾಗಿದೆ ಎಂದೂ ಹಸಿ ಹಸಿ ಸುಳ್ಳುಗಳನ್ನು ಈ ಹಿಂದುತ್ವವಾದಿಗಳು ಹರಡಿದ್ದರು. ಈಗ ಅಯೋಧ್ಯೆಯಲ್ಲಿ ರಾಮ ಲಲ್ಲಾನ ವಿಗ್ರಹವನ್ನು ಸ್ಥಾಪಿಸಿದ ನಿಖರವಾದ ಜನ್ಮಸ್ಥಳವನ್ನು ಗುರುತಿಸಲು ಭಾರತೀಯ ಉಪಗ್ರಹ ತಂತ್ರಜ್ಞಾನವನ್ನು ಬಳಕೆ ಮಾಡಲಾಗಿದೆ ಎಂದು ಹೇಳಿಕೊಂಡಿದ್ದಾರೆ. ಉಪಗ್ರಹ ತಂತ್ರಜ್ಞಾನವು ತಾನೇ ತಾನಾಗಿ ಅಂತಹ ಸ್ಥಳವನ್ನು ಗುರುತಿಸಿದೆ ಎಂದು ಹೇಳುವುದು ಹಸಿ ಹಸಿ ಸುಳ್ಳು. ಇಲ್ಲಿ ಮೊದಲೇ ನಿರ್ದಿಷ್ಟ ಸ್ಥಳವನ್ನು ಆಯ್ಕೆ ಮಾಡಿ, ಜಿಪಿಎಸ್ ನಿರ್ದೇಶಾಂಕಗಳನ್ನು ಪಿನ್ ಮಾಡಲಾಗಿದೆ ಅಷ್ಟೆ.

ಪ್ರಾಚೀನ ಜ್ಞಾನ

ನಿರ್ದಿಷ್ಟ ದಿನದ ನಿರ್ದಿಷ್ಟ ಸಮಯದಲ್ಲಿ ದೇವಾಲಯಗಳ ವಿಗ್ರಹಗಳ ಮೇಲೆ ಸೂರ್ಯ ತಿಲಕದಂತಹ ವಿನ್ಯಾಸವು ಮೂಡುವಂತೆ ಮಾಡುವುದು, ದೇವಾಲಯಗಳ ಒಳಗೆ ಸೂರ್ಯ ಕಿರಣಗಳು ಪ್ರವೇಶಿಸುವಂತೆ ಮಾಡುವುದು ಭಾರತಕ್ಕೆ ಹೊಸದೇನೂ ಅಲ್ಲ. ಹಲವಾರು ಶತಮಾನಗಳ ಹಿಂದಿನಿಂದಲೂ ಭಾರತದಲ್ಲಿ ದೇವಾಲಯಗಳನ್ನು ಇದಕ್ಕೆ ಪೂರಕವಾಗಿ ವಿನ್ಯಾಸ ಮಾಡಿ ನಿರ್ಮಿಸಿಕೊಂಡು ಬರಲಾಗಿದೆ.

ಅದಕ್ಕೆ ಮೊದಲು ಅಯೋಧ್ಯೆಯ ವಿಷಯವನ್ನೇ ನೋಡೋಣ. ಪ್ರತಿ ವರ್ಷವೂ ರಾಮಲಲ್ಲಾನ ವಿಗ್ರಹದ ಮೇಲೆ ರಾಮ ನವಮಿಯಂದು ಸೂರ್ಯ ತಿಲಕ ಮೂಡುವಂತೆ ಯೋಜಿಸಬೇಕು. ರಾಮನವಮಿ ಹಬ್ಬವು ಹಿಂದೂ ಚಾಂದ್ರಮಾನ-ಸೌರ ಪಂಚಾಂಗ(ಕ್ಯಾಲೆಂಡರ್)ದಲ್ಲಿ ಮೊದಲ ತಿಂಗಳು ಚೈತ್ರದ (ಮಾರ್ಚ್-ಏಪ್ರಿಲ್) ಚಂದ್ರನ ಚಕ್ರದ ಪ್ರಕಾಶಮಾನವಾದ ಅರ್ಧ(ಶುಕ್ಲ ಪಕ್ಷ)ದ ಒಂಬತ್ತನೇ ದಿನದಂದು ಬರುತ್ತದೆ. ಅನೇಕ ಸಂಸ್ಕೃತಿಗಳಲ್ಲಿ ಬಳಸಲಾಗುವ ಚಾಂದ್ರಮಾನ-ಸೌರ ಕ್ಯಾಲೆಂಡರ್, ಚಂದ್ರ ಮತ್ತು ಸೂರ್ಯ ಎರಡೂ ಆಕಾಶ ಕಾಯಗಳ ಚಲನೆಯನ್ನು ಸಂಯೋಜಿಸುತ್ತದೆ. ಆದ್ದರಿಂದ ಚಾಂದ್ರಮಾನ-ಸೌರ ಕ್ಯಾಲೆಂಡರ್‌ನಲ್ಲಿರುವ ದಿನಾಂಕಗಳು ಚಂದ್ರನ ಹಂತ ಮತ್ತು ಸೌರ ವರ್ಷದ ಸಮಯ ಎರಡನ್ನೂ ಸೂಚಿಸುತ್ತವೆ. ಇದು ಆಕಾಶದಲ್ಲಿ ಸೂರ್ಯನ ಸ್ಥಾನವಾಗಿದೆ. ಚಂದ್ರನು ಭೂಮಿಯನ್ನು ಒಂದು ಸುತ್ತು ಸುತ್ತುವ ಚಂದ್ರನ ಚಕ್ರವು 29.5 ದಿನಗಳದ್ದಾಗಿರುವುದರಿಂದ, ಶುಕ್ಲ ಪಕ್ಷವು ಪ್ರತಿ ವರ್ಷ ಒಂದೇ ದಿನಾಂಕದಂದು ಬರುವುದಿಲ್ಲ. ಆದ್ದರಿಂದ 2024 ರಲ್ಲಿ ರಾಮ ನವಮಿಯು ಏಪ್ರಿಲ್ 17, ರಂದು ಬಂದಿದ್ದರೆ, 2025 ರಲ್ಲಿ ಏಪ್ರಿಲ್ 6 ರಂದು ಬರುತ್ತದೆ.

ಸವಾಲೇನೂ ಅಲ್ಲ

ಪ್ರತಿ ವರ್ಷ ರಾಮ ನವಮಿಯ ದಿನಾಂಕಗಳನ್ನು ಲೆಕ್ಕಾಚಾರ ಮಾಡುವುದು 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್'ನ ಆಧುನಿಕ ಖಗೋಳಶಾಸ್ತ್ರಜ್ಞರಿಗೆ ಒಂದು ಸವಾಲೇ ಅಲ್ಲ. ಇಂತಹ ಲೆಕ್ಕಾಚಾರಗಳನ್ನು ಭಾರತದಲ್ಲಿ ಹಲವು ಶತಮಾನಗಳ ಹಿಂದೆಯೇ ಮಾಡಲಾಗಿತ್ತು. ಇಂದು, ಸರಳವಾದ ಕಂಪ್ಯೂಟರ್ ಪ್ರೋಗ್ರಾಂಗಳು ಅಥವಾ ಫೋನ್ ಅಪ್ಲಿಕೇಶನ್‌ಗಳು ಸಹ ಇವೆ. ಇವುಗಳ ಮೂಲಕ ಭವಿಷ್ಯದಲ್ಲಿ ಹಲವು ವರ್ಷಗಳವರೆಗೆ ಈ ಲೆಕ್ಕಾಚಾರಗಳನ್ನು ಮಾಡಬಹುದು. ಅದರ ನಂತರ, ರಾಮಲಲ್ಲಾನ ವಿಗ್ರಹದ ಹಣೆಯ ಮೇಲೆ ಕೇಂದ್ರೀಕೃತ ಸೂರ್ಯನ ಕಿರಣ ಬೀಳುತ್ತದೆ ಎಂದು ಖಚಿತಪಡಿಸಿಕೊಳ್ಳಲು ಮಸೂರಗಳು ಮತ್ತು ಕನ್ನಡಿಗಳ ವ್ಯವಸ್ಥೆಗೆ ಸರಳವಾದ ಮಾಪನಾಂಕ ನಿರ್ಣಯದ ಹೊಂದಾಣಿಕೆಗಳು ಮಾತ್ರ ಅಗತ್ಯವಿದೆ.

ಪ್ರಾಚೀನ ದೇವಾಲಯಗಳಲ್ಲಿ ಸೂರ್ಯ ತಿಲಕ

ನಮ್ಮದೇ ಕರ್ನಾಟಕದಲ್ಲಿ ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಸ್ಥಾನದಲ್ಲಿ, ಪ್ರತಿ ಮಕರ ಸಂಕ್ರಾಂತಿಯಂದು, ಸೂರ್ಯನ ಬೆಳಕು ಗುಹೆಯಲ್ಲಿನ ದೇವಾಲಯದೊಳಗೆ ಹಾದುಹೋಗುತ್ತದೆ. ಶಿವನ ಒಡನಾಡಿ ನಂದಿ, ನಂತರ ಕ್ರಮೇಣವಾಗಿ ಶಿವಲಿಂಗ ಮತ್ತು ಒಳಗಿನ ಗರ್ಭಗುಡಿಯನ್ನು ಸಂಪೂರ್ಣವಾಗಿ ಬೆಳಗಿಸುತ್ತದೆ. ಒಡಿಶಾದ ಪ್ರಸಿದ್ಧ ಕೋನಾರ್ಕ್ ಸೂರ್ಯ ದೇವಾಲಯವನ್ನು ಪ್ರತಿ ದಿನ ಬೆಳಿಗ್ಗೆ ಸೂರ್ಯನ ಮೊದಲ ಕಿರಣಗಳು ನೇರವಾಗಿ ಮುಖ್ಯ ದ್ವಾರದ ಮೇಲೆ ಬೀಳುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ ಮತ್ತು ಕಿರಣಗಳು ನಂತರ ಕ್ರಮೇಣ ದೇವಾಲಯದ ಒಳ ಪ್ರದೇಶಕ್ಕೆ ಪ್ರವೇಶಿಸುತ್ತವೆ. ತಿರುಚ್ಚಿ ಶಂಕರಪಾಳ್ಯಂ ಅರುಲ್ಮಿಕು ಕಾಶಿವಿಸುವನಾಥರ್ ದೇವಸ್ಥಾನದ ಶಿವಲಿಂಗದಲ್ಲಿ ಅವನಿ (ಆಗಸ್ಟ್-ಸೆಪ್ಟೆಂಬರ್) 7, 8 ಮತ್ತು 9 ರಂದು 06-6.30 ರ ಸುಮಾರಿಗೆ ಸುಮಾರು ಎರಡು ಅಡಿ ಎತ್ತರದ ವಿಗ್ರಹದ ಮೇಲೆ ಬೆಳಕು

ಪುಟ 12 ಕ್ಕೆ

ಪಶ್ಚಿಮ ಬಂಗಾಳದಲ್ಲಿ ಮೂರನೇ ಹಂತದ ಮತದಾನ:
ಧೈರ್ಯದಿಂದ ತಮ್ಮ ಹಕ್ಕನ್ನು ಚಲಾಯಿಸಿದ ಮತದಾರರು

ಮೂರನೇ ಹಂತದಲ್ಲಿ ಪಶ್ಚಿಮ ಬಂಗಾಳದ ಜಂಗಿಪುರ, ಮುರ್ಷಿದಾಬಾದ್, ಮಾಲ್ಡಾ ಉತ್ತರ ಮತ್ತು ಮಾಲ್ಡಾ ದಕ್ಷಿಣ ಈ ನಾಲ್ಕು ಸ್ಥಾನಗಳಿಗೆ ಮೇ 7 ರಂದು ಮತದಾನ ನಡೆದಿದೆ. ಪರಿಷ್ಕರಿಸದ ಅಂದಾಜಿನ ಪ್ರಕಾರ, ಮುರ್ಷಿದಾಬಾದ್ ಲೋಕಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚು (ಶೇ. 76.49) ಮತದಾನ ನಡೆದಿದೆ. ಈ ಜಿಲ್ಲೆಯ ಇನ್ನೊಂದು ಲೋಕಸಭಾ ಕ್ಷೇತ್ರವಾದ ಜಂಗಿಪುರದಲ್ಲಿ ಶೇ. 72.13 ಮತದಾನವಾಗಿದೆ. ಮಾಲ್ಡಾ ಉತ್ತರದಲ್ಲಿ ಶೇ. 73.30 ಮತ್ತು ಮಾಲ್ಡಾ ದಕ್ಷಿಣದಲ್ಲಿ ಶೇ. 73.68 ಮತದಾನವಾಗಿದೆ. ಈ ಹಂತದಲ್ಲಿ ಎಡ–ಕಾಂಗ್ರೆಸ್ ಅಭ್ಯರ್ಥಿಗಳು ಪ್ರಮುಖ ಸ್ಪರ್ಧಿಗಳಾಗಿದ್ದು, ತೃಣಮೂಲದ ಅಡೆತಡೆಗಳು ಮತ್ತು ಬೆದರಿಕೆಯ ತಂತ್ರಗಳ ನಡುವೆಯೂ ಜನರು ಧೈರ್ಯದಿಂದ ಮತದಾನದ ಹಕ್ಕನ್ನು ಚಲಾಯಿಸಿದ್ದಾರೆ. ಚುನಾವಣಾ ಹಿಂಸಾಚಾರಗಳು ಸಾಮಾನ್ಯ ಘಟನೆ ಎಂಬಂತ್ತಾಗಿರುವ ಪಶ್ಚಿಮ ಬಂಗಾಳದಲ್ಲಿ ಇದೊಂದು ಮಹತ್ವದ ಬೆಳವಣಿಗೆ. ಮುರ್ಷಿದಾಬಾದ್‌ನಿಂದ ಮಾಲ್ಡಾ–ದಕ್ಷಿಣದವರೆಗೆ, ತೃಣಮೂಲದ ತೋಳ್ಬಲದ ತಂತ್ರಗಳೂ ಈ ವಾಸ್ತವತೆಯನ್ನು ಬದಲಾಯಿಸಲು ಸಾಧ್ಯವಾಗಲಿಲ್ಲ.

ಸುಬಿನೋಯ್ ಮೌಲಿಕ್

ವರ್ಷಗಳವರೆಗೆ, ಮುರ್ಷಿದಾಬಾದ್ ಚುನಾವಣೆಗಳು ಅಶಾಂತಿ, ರಕ್ತಪಾತ, ಬಾಂಬ್ ದಾಳಿ ಮತ್ತು ಆಗಾಗ್ಗೆ ಜೀವಹಾನಿಗೆ ಕಾರಣವಾಗುತ್ತವೆ. ಇತ್ತೀಚಿಗೆ ನಡೆದ ಪಂಚಾಯತಿ ಚುನಾವಣೆಯಲ್ಲಿ ಬೂತ್ ವಶಕ್ಕೆ ಪಡೆಯುವುದು, ಮತಪೆಟ್ಟಿಗೆಗಳು ಮತ್ತು ಮತ ಪತ್ರಗಳನ್ನು ಕಸಿದುಕೊಳ್ಳುವುದು, ಇನ್ನಿತರ ಚುನಾವಣಾ ಅಕ್ರಮಗಳು ನಡೆದ ಹಲವಾರು ನಿದರ್ಶನಗಳಿವೆ. ವರ್ಷಗಳ ಕಾಲ, ಮುರ್ಷಿದಾಬಾದ್ ಚುನಾವಣೆಗಳು ಅಶಾಂತಿ ಮತ್ತು ಹಿಂಸೆಗೆ ಸಮಾನಾರ್ಥಕವಾಗಿದ್ದವು. ಆದರೆ ಈ ಬಾರಿ ಜನರು ತೃಣಮೂಲದ ಬೆದರಿಕೆಗಳನ್ನು ಮತ್ತು ಪೊಲೀಸರ ಅಸಹಕಾರವನ್ನು ನಿರ್ಲಕ್ಷಿಸಿ ತಮ್ಮ ಚುನಾವಣಾ ಹಕ್ಕುಗಳಿಗಾಗಿ ನಿಂತರು. ಜನರು 12 ವರ್ಷಗಳ ನಂತರ ಮತ ಚಲಾಯಿಸಿದ ಹಲವು ಪ್ರದೇಶಗಳಿವೆ. ರಾಜ್ಯ ಚುನಾವಣಾ ಆಯೋಗದ ಅಸಮರ್ಥತೆಯಿಂದಾಗಿ ಮತ್ತು ತಮ್ಮ ರಾಜಕೀಯ ಯಜಮಾನರಿಗೆ ಪೊಲೀಸರ ನಾಚಿಕೆಯಿಲ್ಲದ ದಾಸ್ಯ ಮತ್ತು ತೃಣಮೂಲ ಪಕ್ಷದ ಕಡಿವಾಣವಿಲ್ಲದ ದಬ್ಬಾಳಿಕೆ ಇವುಗಳಿಂದಾಗಿ ಅವರಿಗೆ ಈ ಮಧ್ಯಂತರ ಅವಧಿಯಲ್ಲಿ ಮತದಾನ ಮಾಡಲು ಅವಕಾಶ ನೀಡಲಿಲ್ಲ. ಈ ಹೋರಾಟವನ್ನು ಮುರ್ಷಿದಾಬಾದ್ ಕ್ಷೇತ್ರದಲ್ಲಿ ಕಾಂಗ್ರೆಸ್ ಬೆಂಬಲಿತ ಸಿಪಿಐ(ಎಂ) ಅಭ್ಯರ್ಥಿ, ಪಕ್ಷದ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಸಲೀಂ ಅವರು ಅಕ್ಷರಶಃ ಮುಂದೆ ನಿಂತು ಮುನ್ನಡೆಸಿದರು.

ಆ ದಿನದ ಎರಡು ನಿರ್ದಿಷ್ಟ ಲಕ್ಷಣಗಳುಳ್ಳ ಘಟನೆಗಳು ಉಲ್ಲೇಖಕ್ಕೆ ಅರ್ಹವಾಗಿವೆ. ಮೊದಲನೆಯದಾಗಿ, ಶಾಂತಿಯುತ ಮತದಾನವನ್ನು ಖಾತ್ರಿಪಡಿಸುವ ಬಗ್ಗೆ ಕಾಳಜಿಯ ಹೊರತಾಗಿಯೂ ಯಾವುದೇ ದೊಡ್ಡ ಹಿಂಸಾಚಾರವಿಲ್ಲದೆ ಚುನಾವಣೆ ನಡೆಯಿತು. ಇದು ಶಾಂತಿಗಾಗಿ ಎಡಪಕ್ಷಗಳು ನೀಡಿದ ಕರೆಗೆ ಮತ್ತು ಈ ಕರೆಗೆ ಜನರ ಸ್ಪಂದನೆಗೆ ಸಾಕ್ಷಿಯಾಗಿದೆ. ಎರಡನೆಯದಾಗಿ, ಈ ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿಯ ಯಾವುದೇ ಗಮನಾರ್ಹ ಉಪಸ್ಥಿತಿ ಇರಲಿಲ್ಲ. ಬಿಜೆಪಿಯ ಬಗ್ಗೆ ಮಾಧ್ಯಮದ ಪ್ರಚಾರವು ತೋರುತ್ತಿರುವಷ್ಟು ಗಣನೀಯವಾಗಿಲ್ಲ ಎಂಬುದನ್ನು ಇದು ಸೂಚಿಸುತ್ತದೆ.

ಮಹಮ್ಮದ್ ಸಲೀಂ ಸ್ಪರ್ಧಿಸಿರುವ ಮುರ್ಷಿದಾಬಾದ್

ಇದೆಲ್ಲದರ ಹೊರತಾಗಿಯೂ, ತೃಣಮೂಲ ಆಡಳಿತದಲ್ಲಿ ಇರುವವರೆಗೂ ಬಂಗಾಳದಲ್ಲಿ ಚುನಾವಣೆಗಳು 'ಸಂಪೂರ್ಣ' ಮುಕ್ತ ಮತ್ತು ನ್ಯಾಯಸಮ್ಮತವಾಗಿರಲು ಸಾಧ್ಯವಿಲ್ಲ ಎಂಬುದು ಸತ್ಯ. ಯಾವುದೇ ಪ್ರಮುಖ ಹಿಂಸಾಚಾರದ ಘಟನೆಗಳು ನಡೆಯದಿದ್ದರೂ, ಮುರ್ಷಿದಾಬಾದ್ನ ಹಲವು ಪ್ರದೇಶಗಳಲ್ಲಿ ತೃಣಮೂಲದ ಗೂಂಡಾಗಿರಿಯು ತೀವ್ರ ಸ್ವರೂಪದಲ್ಲಿತ್ತು. ಪೊಲೀಸರು ಎಂದಿನಂತೆ ನಿಷ್ಕ್ರಿಯರಾಗಿದ್ದರು. ಮಹಮ್ಮದ್ ಸಲೀಂ ಅವರು ದಿನವಿಡೀ ಮುರ್ಷಿದಾಬಾದ್ ಲೋಕಸಭಾ ಕ್ಷೇತ್ರದ ವಿವಿಧ ಪ್ರದೇಶಗಳಲ್ಲಿ ಸಕ್ರಿಯರಾಗಿದ್ದು, ತೃಣಮೂಲದ ಗೂಂಡಾಗಿರಿ, ಮತದಾರರನ್ನು ಬೂತ್ಗಳಿಗೆ ತಲುಪದಂತೆ ತಡೆಯುವ ಅದರ ಪ್ರಯತ್ನಗಳು ಮತ್ತು "ನಕಲಿ" ಪೋಲಿಂಗ್ ಏಜೆಂಟ್ಗಳ ನೇಮಕವನ್ನು ತಡೆಯಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಪಡೆಗಳು ಮತ್ತು ಚುನಾವಣಾ ಆಯೋಗವನ್ನು ಒತ್ತಾಯಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಕೆಲವು ಸ್ಥಳೀಯ ತೃಣಮೂಲ ಬೆಂಬಲಿತ ದುಷ್ಕರ್ಮಿಗಳು ಮತ್ತು ಸಹಜವಾಗಿ ಕೆಲವು ಪೊಲೀಸ್ ಅಧಿಕಾರಿಗಳ ಸಂಯೋಜಿತ ಪ್ರಯತ್ನಗಳ ಮೂಲಕ ಮತದಾರರನ್ನು ಬೆದರಿಸಲಾಯಿತು, ಬೆದರಿಕೆ ಮತ್ತು ಮತ ಹಾಕದಂತೆ ತಡೆಯಲಾಯಿತು ಎಂದು ಮತದಾನದ ಕೊನೆಯಲ್ಲಿ ಸಲೀಂ ಅವರು ಸುದ್ದಿಗಾರರಿಗೆ ತಿಳಿಸಿದರು. ಇದು ಅವರ ಕ್ಷೇತ್ರದ ಕೆಲವು ಸ್ಥಳಗಳಲ್ಲಿ ವಿರಳವಾಗಿ ಸಂಭವಿಸಿದೆ. ಅವುಗಳೆಂದರೆ, ಡೊಮ್ಕಲ್, ಕರೀಂಪುರ, ಜಲಂಗಿ, ರಾಣಿನಗರ, ಹರಿಹರಪಾರ ಮತ್ತು ಮುರ್ಷಿದಾಬಾದ್ನ ಹಲವಾರು ಸ್ಥಳಗಳಲ್ಲಿ ನಡೆದಿವೆ.

ಇಂತಹ ಘಟನೆಗಳ ನಡುವೆಯೂ ಜನರು ಗಟ್ಟಿಯಾಗಿ ನಿಂತು, ದೃಢನಿಶ್ಚಯದಿಂದ ಮತ ಚಲಾಯಿಸಿದರು. ಕೆಲವು ಸ್ಥಳಗಳಲ್ಲಿ ತಾವು ವೈಯಕ್ತಿಕವಾಗಿ ಮಧ್ಯಪ್ರವೇಶಿಸಬೇಕಾಯಿತು ಎಂದು ಸಲೀಂ ಹೇಳಿದರು. ರಸ್ತೆಯೊಂದರಲ್ಲಿ ಮತದಾರರು ಮತಗಟ್ಟೆಗೆ ಹೋಗದಂತೆ ದುಷ್ಕರ್ಮಿಗಳ ಗುಂಪು ಜಮಾಯಿಸಿತ್ತು. ತೃಣಮೂಲದ ಅಭಿಷೇಕ್ ಬ್ಯಾನರ್ಜಿಯ ಫೋಟೋ ಅವರ ಹಿಂದೆ ಕೆಲವು ಅಡಿಗಳಷ್ಟು ದೂರದಲ್ಲಿ ತೂಗಾಡುತ್ತಿತ್ತು. ಸ್ಥಳೀಯರು ಪೊಲೀಸರಿಗೆ ದೂರು ನೀಡಿದಾಗ, ಬೇಕು ಎನಿಸಿದರೆ ಠಾಣೆಗೆ ಹೋಗಿ ಲಿಖಿತ ದೂರು ನೀಡಿ ಎಂದರು. ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸರು ಮುಂದಾಗಲಿಲ್ಲ. ಇದೆಲ್ಲವೂ ಮತದಾನ ಕೇಂದ್ರದ 200 ಮೀಟರ್ ವ್ಯಾಪ್ತಿಯಲ್ಲಿ ನಡೆಯುತ್ತಿದೆ ಎಂದು ಸಲೀಂ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಲೀಂ, ಕರೀಂಪುರದಲ್ಲಿರುವ ತೃಣಮೂಲ ನಾಯಕರೊಬ್ಬರ ಮನೆಯಲ್ಲಿ ಆಯುಧಗಳನ್ನು ತೋರಿಸಿ ಮತದಾರರನ್ನು ಹೆದರಿಸಿದರು. ಸ್ಥಳೀಯ ಪೊಲೀಸರು ಏನನ್ನೂ ಮಾಡಲಿಲ್ಲ, ನಂತರ ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೇಂದ್ರ ಪಡೆಗಳ ಮನವೊಲಿಸಿದ ನಂತರವೇ ಜನರು ಮತ ಚಲಾಯಿಸಲು ಸಾಧ್ಯವಾಯಿತು. ಹರಿಹರಪರದಲ್ಲಿ ನಮ್ಮ ಪೋಲಿಂಗ್ ಏಜೆಂಟರನ್ನು ಥಳಿಸಿ ಹೊರ ಹಾಕಲಾಯಿತು. ನಾನು ಸುದ್ದಿ ತಿಳಿದು ಆತನನ್ನು ರಕ್ಷಿಸಿ ಮತ್ತೆ ಮತಗಟ್ಟೆಯಲ್ಲಿ ಕೂರಿಸಿದೆ. ನಾನು ಅಭ್ಯರ್ಥಿಯಾಗಿದ್ದರೂ, ಅವರು ನನ್ನನ್ನು ಮತಗಟ್ಟೆಗೆ ಪ್ರವೇಶಿಸದಂತೆ ತಡೆಯಲು ಪ್ರಯತ್ನಿಸಿದರು. ಮಮತಾ ಬ್ಯಾನರ್ಜಿ ಅವರು ಪ್ರತಿದಿನ ಸಾರ್ವಜನಿಕ ಸಭೆಗಳಲ್ಲಿ ಇಂತಹ ದೊಡ್ಡ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತಿದ್ದಾರೆ. ಆದರೆ, ಮತದಾನದ ದಿನದಂದು ಅಭ್ಯರ್ಥಿಗಳು ಮತ್ತು ಅವರ ಚುನಾವಣಾ ಏಜೆಂಟರು ಎಲ್ಲಾ ಬೂತ್ಗಳನ್ನು ಪ್ರವೇಶಿಸಬಹುದು ಎಂದು ತಮ್ಮ ಪಕ್ಷದ ಕಾರ್ಯಕರ್ತರಿಗೆ ಕಲಿಸಲು ವಿಫಲರಾಗಿದ್ದಾರೆ.

ನಮ್ಮ ಪೋಲಿಂಗ್ ಏಜೆಂಟರಂತೆ ಬೂತ್ಗಳಲ್ಲಿ ಕುಳಿತರು!!

ಬೂತ್ಗಳಲ್ಲಿ ನಕಲಿ ಪೋಲಿಂಗ್ ಏಜೆಂಟ್ಗಳ ಬಗ್ಗೆ ತಮ್ಮ ದೂರನ್ನು ವಿವರಿಸಿದ ಸಲೀಂ, “ಜನರು ಇದುವರೆಗೆ, ಮುಖ್ಯಮಂತ್ರಿ ಮತ್ತು ಪ್ರಧಾನ ಮಂತ್ರಿಗಳ ನಕಲಿ ಪದವಿಗಳನ್ನು, ನಕಲಿ ಲಸಿಕೆಗಳನ್ನು, ನಕಲಿ ಅಧಿಕಾರಿಗಳನ್ನು ನೋಡಿದ್ದರು, ಈ ಚುನಾವಣೆಯಲ್ಲಿ ನಾವು ನಕಲಿ ಪೋಲಿಂಗ್ ಏಜೆಂಟ್ಗಳನ್ನು ನೋಡಿದ್ದೇವೆ. ಮತದಾನದ ಹಿಂದಿನ ರಾತ್ರಿಯೇ ನಮ್ಮ ಏಜೆಂಟರನ್ನು ಬೆದರಿಸಿ, ಅವರ ದಾಖಲೆಗಳನ್ನು ನಕಲಿ ಮಾಡಿ, ನಕಲಿ ಸಹಿ ಹಾಕಿ, ನಮ್ಮ ಪೋಲಿಂಗ್ ಏಜೆಂಟರಂತೆ ಬೂತ್ಗಳಲ್ಲಿ ಕುಳಿತರು. ಹಲವು ಕಡೆಗಳಲ್ಲಿ ಇಂತಹ ನಕಲಿಗಳನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದೇವೆ. ಇಲ್ಲದಿದ್ದರೆ ಗುಂಪು ಹತ್ಯೆ ನಡೆಯುತ್ತಿತ್ತು. ಈ ಬಾರಿ ಬಹುತೇಕ ಎಲ್ಲ ಬೂತ್ಗಳಲ್ಲಿ ಏಜೆಂಟರನ್ನು ನೇಮಿಸುವಲ್ಲಿ ಯಶಸ್ವಿಯಾಗಿದ್ದೇವೆ. ಕೆಲವು ಸ್ಥಳಗಳಲ್ಲಿ ಅವರು ಬೂತ್ಗಳನ್ನು ಪ್ರವೇಶಿಸಲು ತೃಣಮೂಲದ ಗೂಂಡಾಗಿರಿಯನ್ನು ಎದುರಿಸಿ ಗೆಲ್ಲಬೇಕಾಯಿತು. ಸಿಪಿಐ(ಎಂ) ತನ್ನ ಏಜೆಂಟರನ್ನು ನೇಮಿಸಲು ಸಾಧ್ಯವಾಗುವುದಿಲ್ಲ ಎಂದು ಅವರು ಊಹಿಸಿದ್ದರು. ಆದರೆ, ಕುತೂಹಲಕಾರಿಯಾಗಿ ಅನೇಕ ಸ್ಥಳಗಳಲ್ಲಿ ಪೋಲಿಂಗ್ ಏಜೆಂಟ್ಗಳನ್ನು ಒದಗಿಸಲು ತೃಣಮೂಲ ಕಾಂಗ್ರೆಸ್ ಗೆ ಸಾಧ್ಯವಾಗಲಿಲ್ಲ.

ಮಾಲ್ಡಾ

ಮಾಲ್ಡಾದಲ್ಲಿನ ಎರಡು ಕ್ಷೇತ್ರಗಳಲ್ಲಿ ತೃಣಮೂಲ ಹಾಗೂ ಬಿಜೆಪಿಯ ಪ್ರಚೋದನೆಯ ಹೊರತಾಗಿಯೂ, ಯಾವುದೇ ದೊಡ್ಡ ಗೊಂದಲಗಳಿಲ್ಲದೆ ಮತದಾನ ನಡೆಯಿತು. ಎರಡೂ ಕ್ಷೇತ್ರಗಳಲ್ಲಿ ಶೇ. 73 ರಷ್ಟು ಮತದಾನ ದಾಖಲಾಗಿದೆ. ತೃಣಮೂಲ ಮತ್ತು ಬಿಜೆಪಿಯ ತೋಳ್ಬಲದ ತಂತ್ರಗಳ ವಿರುದ್ಧ ಎಡರಂಗ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಬೂತ್ಗಳನ್ನು ಸಮರ್ಥಿಸಿಕೊಂಡರು. ಮತದಾನ ಮುಗಿದ ನಂತರ, ಪೊಲೀಸರ ಅಶ್ರುವಾಯು ಮತ್ತು ಲಾಠಿಚಾರ್ಜ್ ಕಾರ್ಯಾಚರಣೆಯ ವಿರುದ್ಧ ನಡೆದ ಪ್ರತಿಭಟನೆಯಿಂದಾಗಿ ಮಾಲ್ಡಾ ಉತ್ತರದ ಹಬೀಬ್ಬುರದಲ್ಲಿ ಅಶಾಂತ ಪರಿಸ್ಥಿತಿ ಉಂಟಾಯಿತು.

ಹಬೀಬ್ಬುರದ ರಾಧಾಕಾಂತಪುರ ಗ್ರಾಮದ ನಿವಾಸಿಗಳು ಕಳಪೆ ರಸ್ತೆ ಮತ್ತು ಪರಿಣಾಮಕಾರಿ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ಮತದಾನ ಬಹಿಷ್ಕರಿಸಿದರು. ಶಾಂತಿಯುತವಾಗಿದ್ದ ಮತದಾನ ಬಹಿಷ್ಕಾರ ತೃಣಮೂಲ ಕಾಂಗ್ರೆಸ್ ನವರು, ನಕಲಿ ಮತದಾರರನ್ನು ಕರೆತಂದು ಗ್ರಾಮಸ್ಥರ ಮತಗಳನ್ನು ಪ್ರಾಕ್ಸಿ ಮತ ಹಾಕಲು ಮುಂದಾದಾಗ ಆಕ್ರೋಶಗೊಂಡ ಗ್ರಾಮಸ್ಥರು ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ಜನರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ಗಳನ್ನು ಸಿಡಿಸಿದರು. ಪೊಲೀಸರು ಗುಂಡು ಹಾರಿಸಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಈ ಪ್ರದೇಶದಲ್ಲಿ ಬಿಜೆಪಿ ಅಥವಾ ತೃಣಮೂಲದ ಯಾರೂ ಇದ್ದುದು ಕಾಣಿಸಲಿಲ್ಲ. ಇದನ್ನು ಅರಿತ ತೃಣಮೂಲ ದವರು ಅಲ್ಲಿಂದ ಕಾಲ್ಕಿತ್ತರು.

ಸಿಪಿಐ(ಎಂ) ಮಾಲ್ಡಾ ಜಿಲ್ಲಾ ಕಾರ್ಯದರ್ಶಿ ಅಂಬರ್ ಮಿತ್ರ ಅವರು ಇಡೀ ಘಟನೆಗೆ ತೀವ್ರವಾಗಿ ಪ್ರತಿಕ್ರಿಯಿಸಿ, “ನಿಮಗೆ ಗೊತ್ತಾ, ಇದು ಹೊಸದೇನಲ್ಲ. ಈ ಹಿಂದೆಯೂ ಮಾಲ್ಡಾದಲ್ಲಿ ಗ್ರಾಮಸ್ಥರು ವಿವಿಧ ಸ್ಥಳೀಯ ಬೇಡಿಕೆಗಳಿಗಾಗಿ ಚುನಾವಣೆ ಬಹಿಷ್ಕಾರಕ್ಕೆ ಕರೆ ನೀಡಿದ್ದಾರೆ. ಪ್ರಜಾಪ್ರಭುತ್ವವು ಅಂತಹ ಅವಕಾಶವನ್ನು ಒಳಗೊಂಡಿದೆ. ಹೀಗಿರುವಾಗ ಆಡಳಿತವು ಬಲವಂತದ ಮಾರ್ಗದಲ್ಲಿ ನಡೆಯುವುದಾದರೂ ಹೇಗೆ? ಬೇರೆ ಪ್ರದೇಶಗಳ ನಿವಾಸಿಗಳನ್ನು ಪ್ರಾಕ್ಸಿ ಮತದಾರರಾಗಿ ಏಕೆ ಕರೆತರಲಾಯಿತು? ಪ್ರತಿಭಟನಾನಿರತ ಗ್ರಾಮಸ್ಥರಿಗೆ ಥಳಿಸಿದ್ದು ಏಕೆ? ವಾಸ್ತವವಾಗಿ, ಮಾಲ್ಡಾದ ಎರಡೂ ಸ್ಥಾನಗಳಲ್ಲಿ ಅವರು ಶೋಚನೀಯ ಪರಿಸ್ಥಿತಿಯನ್ನು ಹೊಂದಿರುತ್ತಾರೆ ಎಂದು ತೃಣಮೂಲ ಅರಿತುಕೊಂಡಿದೆ. ಎರಡೂ ಕ್ಷೇತ್ರಗಳಲ್ಲಿ ಎಡಪಕ್ಷಗಳು ಮತ್ತು ಕಾಂಗ್ರೆಸ್ನ ಒಗ್ಗಟ್ಟಿನ ಹೋರಾಟದ ಬಗ್ಗೆಯೂ ಬಿಜೆಪಿ ಚಿಂತೆಗೀಡಾಗಿದೆ.

ಬೆಳಗ್ಗೆ ಹರಿಶ್ಚಂದ್ರಪುರದಲ್ಲಿ ಮತದಾನದ ವೇಳೆ ವಿಭಿನ್ನ ವಾತಾವರಣ ಕಂಡು ಬಂದಿತು.

ಪುಟ 12 ಕ್ಕೆ



ಡಾ. ನರೇಂದ್ರ ದಾಭೋಲ್ಕರ್ ಹತ್ಯೆಯ ತೀರ್ಪು: ಅಪೂರ್ಣ ಮತ್ತು ಅತೃಪ್ತಿಕರ–ಸಿಪಿಐ(ಎಂ)

ಮೂಢನಂಬಿಕೆ ವಿರೋಧಿ ಹೋರಾಟಗಾರ ಡಾ. ನರೇಂದ್ರ ದಾಭೋಲ್ಕರ್ ಅವರನ್ನು ಗುಂಡಿಕ್ಕಿ ಕೊಂದ ಇಬ್ಬರು ಆರೋಪಿಗಳಾದ ಸಚಿನ್ ಅಂದುರೆ ಮತ್ತು ಶರದ್ ಕಲಾಸ್ಕರ್ ಅವರಿಗೆ ಪುಣೆಯ ವಿಶೇಷ ನ್ಯಾಯಾಲಯವು ಕಠಿಣ ಜೀವಾವಧಿ ಶಿಕ್ಷೆಯನ್ನು ವಿಧಿಸಿದೆ. ಸಿಪಿಐ(ಎಂ) ಮಹಾರಾಷ್ಟ್ರ ರಾಜ್ಯ ಸಮಿತಿಯು ಈ ತೀರ್ಪನ್ನು ಶ್ಲಾಘಿಸಿದೆ ಮತ್ತು ಇದೇ ಸಂದರ್ಭದಲ್ಲಿ, ಇತರ ಮೂವರು ಆರೋಪಿಗಳಾದ ವೀರೇಂದ್ರ ತಾವ್ಡೆ, ಸಂಜೀವ್ ಪುಣಾಲೇಕರ್ ಮತ್ತು ವಿಕ್ರಮ್ ಭಾವೆ ಅವರ ಅಪರಾಧವನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಲು ಪ್ರಾಸಿಕ್ಯೂಷನ್ ವಿಫಲವಾದ ಬಗ್ಗೆ ತನ್ನ ದುಃಖ ಮತ್ತು ಅಸಮಾಧಾನವನ್ನು ವ್ಯಕ್ತಪಡಿಸಿದೆ. ಪರಿಣಾಮವಾಗಿ, ವಿಚಾರವಾದಿ ನರೇಂದ್ರ ದಾಭೋಲ್ಕರ್ ಅವರ ಭೀಕರ ಹತ್ಯೆ ಪ್ರಕರಣದಲ್ಲಿ ಈ ಮೂವರ ಅಪರಾಧವನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್ನ ಅಸಮರ್ಥತೆಯ ಕಾರಣದಿಂದಾಗಿ ಇವರನ್ನು ಬಿಡುಗಡೆ ಮಾಡಲಾಗಿದೆ. ಶಿಕ್ಷೆಗೊಳಗಾದವರು ಮತ್ತು ಸಾಕ್ಷ್ಯದ ಕೊರತೆಯಿಂದ ಬಿಡುಗಡೆಯಾದವರು ಕುಖ್ಯಾತ ಸನಾತನ ಸಂಸ್ಥೆಯ ಅನುಯಾಯಿಗಳು. ಆರಂಭದಲ್ಲಿ ಮಹಾರಾಷ್ಟ್ರ ಪೊಲೀಸರು ಮತ್ತು ನಂತರ ಸಿಬಿಐ ಒಂದು ದಶಕದ ಕಾಲ ತಮ್ಮ ಪಾದಗಳನ್ನು ಎಳೆದುಕೊಂಡು ಅಂತಿಮವಾಗಿ ಈ ಘೋರ ಅಪರಾಧದ 'ಮಾಸ್ಟರ್‌ಮೈಂಡ್‌ಗಳನ್ನು' ಶಿಕ್ಷೆಗೆ ಗುರಿಪಡಿಸುವಲ್ಲಿ ಹೀನಾಯವಾಗಿ ವಿಫಲವಾಯಿತು.

ನಿರ್ಭೀತ ಮತ್ತು ಅದಮ್ಯ ಪತ್ರಕರ್ತೆ ಗೌರಿ ಲಂಕೇಶ್ ಹಾಗೂ ವಿದ್ವಾಂಸ ಡಾ.ಎಂ.ಎಂ.ಕಲಬುರ್ಗಿ ಹತ್ಯೆಯ ತನಿಖೆಯ ಸಂದರ್ಭದಲ್ಲಿ ಕರ್ನಾಟಕ ಪೊಲೀಸರು ಈ ಪ್ರಕರಣವನ್ನು ಮೊದಲು ಭೇದಿಸಿದ್ದರು ಎಂಬುದನ್ನು ಸ್ಮರಿಸಬಹುದಾಗಿದೆ. ಕರ್ನಾಟಕ ಪೊಲೀಸರ ಈ ತನಿಖೆಯು, ಬುದ್ಧಿಜೀವಿಗಳು ಮತ್ತು ಕಾರ್ಯಕರ್ತರನ್ನು ಹತ್ಯೆ ಮಾಡಲು ಸಂಚು ರೂಪಿಸಿದ ಭಯೋತ್ಪಾದಕ ಗ್ಯಾಂಗ್ ನ ಜಾಡು ಹಿಡಿದು ತನಿಖೆ ಮಾಡಲು ಮಹಾರಾಷ್ಟ್ರ ಪೋಲೀಸ್ ಮತ್ತು ಸಿಬಿಐಗೆ ದಾರಿ ಮಾಡಿಕೊಟ್ಟಿದೆ.

ಕರ್ನಾಟಕ ಪೋಲೀಸ್ ಒದಗಿಸಿದ ದೃಢವಾದ ಸುಳಿವುಗಳ ಹೊರತಾಗಿಯೂ, ತನಿಖಾಧಿಕಾರಿಗಳು ನರೇಂದ್ರ ದಾಭೋಲ್ಕರ್ ಮತ್ತು ಗೋವಿಂದ್ ಪನ್ಸಾರೆ ಹತ್ಯೆ ಪ್ರಕರಣಗಳು ಈ ದೇಶವಿರೋಧಿ ಪಿತೂರಿಯ ಬೇರುಗಳಿಗೆ ಹೋಗಲು ಸಂಪೂರ್ಣ ವಿಫಲವಾಗಿವೆ. ಸನಾತನ ಸಂಸ್ಥೆ ಮತ್ತು ಅದರ ಹಿಂದಿರುವ ಶಕ್ತಿಗಳ ಒತ್ತಡಕ್ಕೆ ಮಣಿದು ಆಡಳಿತ ಕುಂಠಿತವಾಗಿದೆಯೇ ಎಂಬುದನ್ನು ಯಾರೂ ಊಹಿಸಬಹುದು. ಈ ಅಪೂರ್ಣ ನ್ಯಾಯದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉದ್ದೇಶದ ಬಗ್ಗೆ ಅನುಮಾನದ ಮೋಡಗಳು ಚದುರಿಹೋಗುವ ಬದಲು ದಟ್ಟವಾಗಿವೆ.

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ನಡೆದ ಸರಣಿ ಕೊಲೆಗಳ ಪ್ರಕರಣಗಳಿಗೆ ಕಾರಣವಾಗಿರುವ ಸಂಸ್ಥೆಗಳನ್ನು ಗುರುತಿಸಿ, ಇನ್ನೂ ಪತ್ತೆಹಚ್ಚದೆ ಬಿಟ್ಟಿರುವ ಎಲ್ಲ ಆರೋಪಿಗಳನ್ನು ಬಂಧಿಸಿ ನಿರ್ದಾಕ್ಷಿಣ್ಯವಾಗಿ ವಿಚಾರಣೆಗೆ ಒಳಪಡಿಸುವವರೆಗೆ ತೃಪ್ತಿಕರವಾಗಿ ಮುಕ್ತಾಯಗೊಂಡಿದೆ ಎಂದು ಹೇಳಲಾಗುವುದಿಲ್ಲ. "ಪ್ರಕರಣದಲ್ಲಿ ತಾವ್ಡೆ ಪ್ರಮುಖ ಸಂಚುಕೋರ ಎಂದು ಆರೋಪಿಸಲಾಗಿತ್ತು. ಅವರ ಮೇಲೆ ಸಂಶಯ ಪಡುವುದಕ್ಕೆ ಸಾಕಷ್ಟು ಅವಕಾಶವೂ ಇತ್ತು. ಆದರೆ, ಈ ಸಂಶಯವನ್ನು ಸಾಕ್ಷ್ಯವನ್ನಾಗಿ ಪರಿವರ್ತಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಯಿತು. ಈ ಕಾರಣದಿಂದಲೇ ಅವರನ್ನು ಎಲ್ಲ ಆರೋಪಗಳಿಂದ ಮುಕ್ತರನ್ನಾಗಿ ಮಾಡಲಾಯಿತು" ಎಂದು ನ್ಯಾಯಾಲಯ ಹೇಳಿದೆ. ಇದು ತನಿಖಾಧಿಕಾರಿಗಳ ಅಸಮರ್ಥತೆಯನ್ನು ಬಿಂಬಿಸುತ್ತದೆ ಎಂದಿರುವ ಸಿಪಿಐ(ಎಂ) ತನ್ನ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದೆ.

ಈ ಅಪೂರ್ಣ ತೀರ್ಪನ್ನು ಬಾಂಬೆ ಹೈಕೋರ್ಟ್‌ನಲ್ಲಿ ಸರಿಯಾದ ಶ್ರದ್ಧೆಯಿಂದ ಪ್ರಶ್ನಿಸಲು ಸಿಪಿಐ(ಎಂ) ಸರ್ಕಾರಕ್ಕೆ ಕರೆ ನೀಡಿದೆ. ಗೋವಿಂದ್ ಪನ್ಸಾರೆ ಹತ್ಯೆಯ ಇನ್ನೂ ಇತ್ಯರ್ಥವಾಗದ ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಅಪರಾಧಿಗಳನ್ನು ನ್ಯಾಯದ ಮುಂದೆ ತರಲು ತನಿಖಾಧಿಕಾರಿಗಳು ತಮ್ಮ ಪ್ರಾಮಾಣಿಕತೆಯನ್ನು ತೋರಿಸಬೇಕೆಂದು ಪಕ್ಷ ಮನವಿ ಮಾಡಿದೆ.

ಪಶ್ಚಿಮ ಬಂಗಾಳ: ಧೈರ್ಯದಿಂದ ತಮ್ಮ ಹಕ್ಕನ್ನು ಚಲಾಯಿಸಿದ........ ಪುಟ 11 ರಿಂದ

ಹರಿಶ್ಚಂದ್ರಪುರ ಗ್ರಾಮಪಂಚಾಯಿತಿ ವ್ಯಾಪ್ತಿಯ ಮಶಾಲ್ದಾಹ್ ಗ್ರಾಮ ಪಂಚಾಯಿತಿಯ ತಲ್ಗಚ್ಚಿ ಗ್ರಾಮದಲ್ಲಿ ಸಿಪಿಐ(ಎಂ) ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಮತಗಟ್ಟೆಯಿಂದ ಸ್ವಲ್ಪ ದೂರ ರಸ್ತೆಯಲ್ಲಿ ಜಮಾಯಿಸಿ "ಉದ್ಯೋಗ ಕಳ್ಳ ತೃಣಮೂಲ ಡೌನ್, ಡೌನ್, ಕೋಮುವಾದಿ ಬಿಜೆಪಿ ಡೌನ್, ಡೌನ್" ಎಂಬ ಘೋಷಣೆಗಳನ್ನು ಕೂಗಿದರು. ಈ ಬಾರಿ ಗ್ರಾಮದಲ್ಲಿ ತೃಣಮೂಲ ಮತದಾರ ಇಲ್ಲ ಎಂದು ಸಿಪಿಐ(ಎಂ) ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಹೇಳಿದರು. ಎಲ್ಲಾ ಮತಗಳು ಎಡ ಬೆಂಬಲಿತ ಕಾಂಗ್ರೆಸ್ ಅಭ್ಯರ್ಥಿ ಮೊಸ್ತಾಕ್ ಆಲಂ ಪರವಾಗಿ ಹೋಗಿದ್ದವು. "ನಮ್ಮ ನಿಜವಾದ ಹೋರಾಟ ಬಿಜೆಪಿ ವಿರುದ್ಧ. ಈ ಹೋರಾಟದಲ್ಲಿ ಇಡೀ ಗ್ರಾಮ ಒಗ್ಗಟ್ಟಾಗಿದೆ" ಎಂದು ಹೇಳಿದರು.

ಮತದಾನದ ದಿನ ಹರಿಶ್ಚಂದ್ರಪುರ ಬ್ಲಾಕ್ ನಂ.2 ಖಾಂತಾ ಪ್ರಾಥಮಿಕ ಶಾಲೆ ಮತ್ತೆ ಕೆಲಕಾಲ ಉದ್ವಿಗ್ನತೆಗೆ ಒಳಗಾಗಿತ್ತು. ತೃಣಮೂಲ ಪ್ರಾಕ್ಸಿ ಮತ ಹಾಕಿದೆ ಎಂದು ಆರೋಪಿಸಿದರು. ಆಡಳಿತಾಧಿಕಾರಿಗಳು ಸ್ಥಳಕ್ಕೆ ಧಾವಿಸಿದ ನಂತರ ಪ್ರಾಕ್ಸಿ ಮತದಾನ ಸ್ಥಗಿತಗೊಂಡಿತು. ರಟುವಾ–1 ಬ್ಲಾಕ್ನ ಚಂದಮಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೆಳಗ್ಗೆಯಿಂದಲೇ ಬಾಂಬ್ ದಾಳಿಯಾದ ಬಗ್ಗೆ ತೃಣಮೂಲ ವಿರುದ್ಧ ದೂರುಗಳು ಬಂದಿದ್ದವು. ಸಿಪಿಐ(ಎಂ) ಮತ್ತು ಕಾಂಗ್ರೆಸ್ ನ ಮತದಾರರನ್ನು ಬೂತ್ಗೆ ಬರಲು ಬಿಡುತ್ತಿಲ್ಲ ಎಂದು ಗ್ರಾಮಸ್ಥರು ಹೇಳಿದ್ದಾರೆ. ಪೊಲೀಸರ ಎದುರಿನಲ್ಲೇ ರಸ್ತೆಯಲ್ಲಿ ಬಾಂಬ್ ದಾಳಿ ಮುಂದುವರೆಯಿತು. ಸುಜಾಪುರ ಮತ್ತು ಮಾಣಿಕ್ಚಾಕ್ನಲ್ಲಿಯೂ, ಗ್ರಾಮ ಪ್ರದೇಶಗಳಲ್ಲಿನ ಬೂತ್ಗಳಲ್ಲಿ ಗೊಂದಲವನ್ನುಂಟುಮಾಡಲು ತೃಣಮೂಲ ಆಗಾಗ ಯತ್ನ ನಡೆಸಿತು. ಎರಡು ಸ್ಥಳಗಳಲ್ಲಿ, ಕಾಂಗ್ರೆಸ್ ಮತ್ತು ಸಿಪಿಐ (ಎಂ) ಏಜೆಂಟ್ಗಳನ್ನು ಬೆಳಿಗ್ಗೆ ಹೊರಹಾಕಲಾಯಿತು. ಆದರೆ ದಿನದ ಕೊನೆಯಲ್ಲಿ ತೃಣಮೂಲ ಕಾರ್ಯಕರ್ತರು ನಿರಾಶೆಗೊಂಡರು. ಬಹುತೇಕ ಶಾಂತಿಯುತವಾಗಿ ಮತದಾನ ನಡೆದಿದೆ ಎಂದು ಮಾಲ್ಡಾ ದಕ್ಷಿಣ ಕ್ಷೇತ್ರದ ಅಭ್ಯರ್ಥಿ ಇಶಾ ಖಾನ್ ಚೌಧರಿ ತಿಳಿಸಿದ್ದಾರೆ. ಚುನಾವಣೆಗೆ ಎರಡು ದಿನ ಇರುವಾಗಲೇ ತೃಣಮೂಲ ವಂಚನೆಗೆ ಮುಂದಾಗಿತ್ತು. ತೃಣಮೂಲಕ್ಕೆ ಮತ ಹಾಕುವಂತೆ ಬಂಗಾಳದ ಕಾಂಗ್ರೆಸ್ ಕಾರ್ಯಕರ್ತರಿಗೆ ರಾಹುಲ್ ಹೇಳಿದ್ದಾರೆ ಎಂದು ರಾಹುಲ್ ಗಾಂಧಿ ಹೆಸರಿನಲ್ಲಿ ನಕಲಿ ಕರಪತ್ರವನ್ನು ಪ್ರಕಟಿಸಿದ್ದರು. "ಮತಯಂತ್ರದಲ್ಲಿನ ಈ ವಂಚನೆಯನ್ನು ಜನರು ತಿರಸ್ಕರಿಸಲಿದ್ದಾರೆ" ಎಂದು ಅವರು ಹೇಳಿದರು.


ಕೃಪೆ: ಪೀಪಲ್ಸ್ ಡೆಮಾಕ್ರಸಿ

ಮೋದಿ ಮತ್ತು ಸಂಪತ್ತಿನ 'ಮರು ಹಂಚಿಕೆ'..... ಪುಟ 8 ರಿಂದ

ವೇಗದಿಂದ ನಡೆದಿದೆ.

ಜತೆಗೆ, ಈ ಕೆಳಗಿನ ತಖ್ತೆಯನ್ನೂ ನೋಡಿ:

ಆದಾಯ (ಲಕ್ಷ ರೂ.) | ಸಲ್ಲಿಸಿದ ಆದಾಯ ತೆರಿಗೆ ರಿಟರ್ನ್ ಗಳಲ್ಲಿ ಪಾಲು | ಒಟ್ಟು ಆದಾಯ ತೆರಿಗೆಯಲ್ಲಿ ಪಾಲು



ವೈಯಕ್ತಿಕ ಆದಾಯ 10 ಲಕ್ಷ ರೂ. ಗಿಂತ ಕಡಿಮೆ ಇರುವವರ ಪ್ರಮಾಣ ಶೇ.85ರಷ್ಟು, ಆದರೆ ಇವರಿಂದ ವಸೂಲಿ ಮಾಡಿದ ತೆರಿಗೆಯ ಪಾಲು ಸುಮಾರು ಶೇ.38. 50 ಲಕ್ಷ ರೂ.ಗಿಂತ ಹೆಚ್ಚು ಆದಾಯವಿರುವವರ ಪ್ರಮಾಣ ಕೇವಲ ಶೇ.0.8, ಆದರೆ ಇವರು ತೆರಬೇಕಾಗಿ ಬಂದಿರುವ ತೆರಿಗೆಯ ಪಾಲು ಶೇ.42.3.

(ತಖ್ತೆಗಳು–ಕೃಪೆ:ರಚಿತಾ ರಬ್ಬೊನಿ, ದಿ ಹಿಂದು, ಡಾಟಾ ಪಾಯಿಂಟ್, ಎಪ್ರಿಲ್ 30)

ಅಯೋಧ್ಯೆ: ರಾಮಲಲ್ಲಾ ವಿಗ್ರಹದ ಮೇಲೆ........ ಪುಟ 10 ರಿಂದ

ಬೀಳುತ್ತದೆ. ತಿರುಪತಿ ಸಮೀಪದ ನಾಗಲಾಪುರಂ ವೇದನಾರಾಯಣ ದೇವಸ್ಥಾನದಲ್ಲಿ ಮಾರ್ಚ್ 25, 26 ಮತ್ತು 27 ರಂದು ಸಂಜೆ 6 ರಿಂದ 6.15 ರವರೆಗೆ ವಿಗ್ರಹದ ಮೇಲೆ ಸೂರ್ಯನ ಬೆಳಕು ಬೀಳುತ್ತದೆ. ಉತ್ತರಾಖಂಡದ ಅಲ್ಮೋರಾದಲ್ಲಿರುವ ಎರಡನೇ ಸೂರ್ಯ ದೇವಾಲಯ ಎಂದು ಪರಿಗಣಿಸಲಾದ ಕಥರ್ಮಾರ್ ಸೂರ್ಯ ದೇವಾಲಯದಲ್ಲಿ ಸೂರ್ಯನ ಬೆಳಕು ಅಕ್ಟೋಬರ್ 22 ಮತ್ತು ಫೆಬ್ರವರಿ 22 ರಂದು ವಿಗ್ರಹದ ಮೇಲೆ ಬೀಳುತ್ತದೆ. ಗುಜರಾತ್‌ನಲ್ಲಿ, ಸುಡುವ ಬಿಸಿಲಿನಲ್ಲಿ, ನೂರಾರು ಜೈನ ಭಕ್ತರು ಪ್ರತಿ ವರ್ಷ ಕೋಬಾ ಮಹಾವೀರ ಜೈನ ಆರಾಧನಾ ಕೇಂದ್ರದಲ್ಲಿ ಭಗವಾನ್ ಮಹಾವೀರ ಸ್ವಾಮಿಯ ಮೂರ್ತಿಯ ಹಣೆಯ ಮೇಲೆ ಸೂರ್ಯ ತಿಲಕವನ್ನು ವೀಕ್ಷಿಸಲು ಸೇರುತ್ತಾರೆ. ಪ್ರತಿ ಮೇ 22 ರಂದು ಸರಿಯಾಗಿ ಮಧ್ಯಾಹ್ನ 2.07 ಕ್ಕೆ ಮಹಾವೀರ ಸ್ವಾಮಿಯ ಹಣೆಯ ಮೇಲೆ ಸೂರ್ಯನ ಕಿರಣಗಳು ಕಾಣಿಸಿಕೊಳ್ಳುತ್ತವೆ. ದೇವಾಲಯದ ಆಡಳಿತಾಧಿಕಾರಿ ಹೇಳುವಂತೆ, "ಇದರಲ್ಲಿ ಯಾವುದೇ ಮಾಂತ್ರಿಕತೆ ಇಲ್ಲ, ಆದರೆ ಅಂತಹ 'ಸೂರ್ಯ ತಿಲಕ'ವು ಗಣಿತ, ಖಗೋಳಶಾಸ್ತ್ರ ಮತ್ತು ಶಿಲ್ಪಕಲೆಯ ಸಾಂಪ್ರದಾಯಿಕ ಜ್ಞಾನದ ಕೌಶಲ್ಯಪೂರ್ಣ ಬಳಕೆಯಿಂದ ನಿರ್ಮಾಣ ಸಾಧ್ಯವಾಗುತ್ತದೆ". ಕನ್ಯಾಕುಮಾರಿಯಲ್ಲಿ ಗಾಂಧಿಯವರ ಚಿತಾಭಸ್ಮ ಇರಿಸಲಾಗಿರುವ ಗಾಂಧಿ ಸ್ಮಾರಕದ ಮಂಟಪದ ಅತ್ಯಂತ ಗಮನಾರ್ಹ ವೈಶಿಷ್ಟ್ಯವೆಂದರೆ ಕಟ್ಟಡದ ಛಾವಣಿ. ಮಹಾತ್ಮಾ ಗಾಂಧಿಯವರ ಜನ್ಮದಿನವಾದ ಪ್ರತಿ ಅಕ್ಟೋಬರ್ 2 ರಂದು, ಅವರ ಚಿತಾಭಸ್ಮವನ್ನು ಇರಿಸಲಾಗಿರುವ ಸ್ಥಳದಲ್ಲಿ ಸೂರ್ಯನ ಕಿರಣಗಳು ನಿಖರವಾಗಿ ಬೀಳುವ ರೀತಿಯಲ್ಲಿ ಸ್ಮಾರಕದ ಮಾಡಿನ ವಿನ್ಯಾಸವನ್ನು ರೂಪಿಸಲಾಗಿದೆ.

ಒಂದು ಪರ್ಯಾಯ ಸಾಧ್ಯವಿತ್ತು

ಪ್ರತಿ ವರ್ಷ ರಾಮ ನವಮಿಯಂದು ಅತಿ ಕಡಿಮೆ ಖರ್ಚಿನಲ್ಲಿ ವಿಗ್ರಹದ ಹಣೆಯ ಮೇಲೆ ಸೂರ್ಯನ ಬೆಳಕು ಬೀಳುವ ರೀತಿಯಲ್ಲಿ ರಾಮ ಲಲ್ಲಾ ದೇವಸ್ಥಾನದ ವಿನ್ಯಾಸವನ್ನು ಯೋಜಿಸಬಹುದಿತ್ತು. ಸೂರ್ಯ ತಿಲಕ ವ್ಯವಸ್ಥೆಯನ್ನು ವಿದ್ಯುನ್ಮಾನವಾಗಿ ಹೊಂದಿಸುವುದು ಅಯೋಧ್ಯೆಯಲ್ಲಿ ಹಿಂದಿನ ಯೋಜನೆಯಾಗಿತ್ತು. ಆದರೆ ಅನಗತ್ಯ ಸಂಕೀರ್ಣತೆ ಮತ್ತು ವೆಚ್ಚದ ಕಾರಣಕ್ಕಾಗಿ ವಿಜ್ಞಾನಿಗಳು ಅದನ್ನು ವಿರೋಧಿಸಿದರು. ನಂತರ ಪ್ರತಿ ವರ್ಷ ಕನ್ನಡಿ ನಿಯೋಜನೆಯನ್ನು ಕೈಗಳಿಂದಲೇ ಹೊಂದಿಸುವಂತಹ ವ್ಯವಸ್ಥೆ ಮಾಡಲು ಸೂಚಿಸಲಾಯಿತು. ಆದರೆ ಈ ಯೋಜನೆ ಹಿಂದುತ್ವವಾದಿಗಳಿಗೆ ಇಷ್ಟವಾಗಲಿಲ್ಲ. ಬಾಬರಿ ಮಸೀದಿಯು ಸಂಘಪರಿವಾರದ ಕಾರ್ಯಕರ್ತರ ಕೈಗಳಿಂದಲೇ ಧ್ವಂಸವಾದ ಇತಿಹಾಸವಿದ್ದರೂ ಈ ಯೋಜನೆಯಲ್ಲಿ ಜನರು ಪಾಲ್ಗೊಳ್ಳುವ ಈ ವಿಧಾನಕ್ಕೆ ಬದಲಾಗಿ ಸಂಘಪರಿವಾರವು ವಿಜ್ಞಾನ–ತಂತ್ರಜ್ಞಾನದ ಸಾಧನ ಸಲಕರಣೆಗಳ ಬಳಕೆಯ ವಿಧಾನವನ್ನೇ ಆಯ್ಕೆ ಮಾಡಿಕೊಂಡಿತು. ಏಕೆಂದರೆ ಸಂಘಪರಿವಾರವು ತಾನು ಚುನಾವಣೆಯ ಸಂದರ್ಭದಲ್ಲಿ ಹಿಂದುತ್ವದ ಭಾವನೆ ಬಡಿದೆಬ್ಬಿಸಲು ಸಹಾಯವಾಗುವ ವಿಜ್ಞಾನದ 'ಮಹಾ ಸಾಧನೆ'ಯೊಂದನ್ನು ಬಿಂಬಿಸಿಕೊಳ್ಳಲು ಬಯಸಿತ್ತು.

('ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಪ್ರಕಟವಾದ ಎಸ್. ಕೃಷ್ಣಸ್ವಾಮಿಯವರ ಲೇಖನದ ಭಾವಾನುವಾದ ಮತ್ತು ವಿಸ್ತರಣೆ–ಆರ್. ರಾಮಕೃಷ್ಣ.)





ನೆನಪಿರಲಿ ಮಗಾ, ಬಡವರು ಮಾತ್ರವೇ, ವಾರಕ್ಕೆ 70 ಗಂಟೆಗಳ ಕೆಲಸ ಮಾಡಬೇಕು!

ವ್ಯಂಗ್ಯಚಿತ್ರ: ಸ್ಯಾನಿಟರಿ ಪ್ಯಾನಲ್ಸ್



ವಾರಸುದಾರಿಕೆ ತೆರಿಗೆ: ವಸಾಹತುಶಾಹಿ – ವಿರೋಧಿ ಚಳುವಳಿಯ ಆಶ್ವಾಸನೆ ಕೂಡ

ವಾರಸುದಾರಿಕೆಯ ಅಥವ ಪಿತ್ರಾರ್ಜಿತ ಆಸ್ತಿಯ ಮೇಲಿನ ತೆರಿಗೆ ವಿಧಿಸುವುದು ದೇಶದ ಸ್ವಾತಂತ್ರ್ಯ ಹೋರಾಟದ ಭಾಗವಾಗಿದೆ. ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳನ್ನು ಗಲ್ಲಿಗೇರಿಸಿದ ಕೇವಲ ಮೂರು ದಿನಗಳ ನಂತರ ಮಾರ್ಚ್ 26 ರಂದು ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಕರಾಚಿ ಅಧಿವೇಶನದ ನಿರ್ಣಯ ನೀಡಿದ ಆರ್ಥಿಕ ಸಮಾನತೆ ಆಶ್ವಾಸನೆಯ ಈಡೇರಿಕೆಗೆ ಇದು ಅತ್ಯಗತ್ಯ. ವಾರಸುದಾರಿಕೆಯ ತೆರಿಗೆ, ಅದರ ಜತೆಗೆ ಸಂಪತ್ತಿನ ತೆರಿಗೆ ಅಸಮಾನತೆ ತೀವ್ರವಾಗಿ ಏರಿರುವ ಪ್ರಸ್ತುತ ಸಂದರ್ಭದಲ್ಲಿ ಅತ್ಯಗತ್ಯ. ಇದರ ವಿರುದ್ಧದ ಪ್ರಧಾನಿಗಳ ಬರಡು ದೂಷಣೆಗಳು ನಮ್ಮ ವಸಾಹತುಶಾಹಿ–ವಿರೋಧಿ ಹೋರಾಟದ ಕಾರ್ಯಸೂಚಿಯ ಬಗ್ಗೆ ಅರಿವಿನ ಕೊರತೆಯನ್ನು ತೋರಿಸುತ್ತವೆ. ಇದು ವ್ಯಥೆಪಡಬೇಕಾದ ಸಂಗತಿ.

ಪ್ರಭಾತ್ ಪಟ್ನಾಯಕ್ ಅನು: **ಕೆ.ಎಂ. ನಾಗರಾಜ್**

ವಾರಸುದಾರಿಕೆ ತೆರಿಗೆಯ ಕುರಿತು ನರೇಂದ್ರ ಮೋದಿಯವರ ನುಡಿಮುತ್ತುಗಳು ಎಂತಹ ಕ್ಷುಲ್ಲಕ ಮಟ್ಟದಲ್ಲಿವೆಯೆಂದರೆ, ಒಬ್ಬ ಪ್ರಧಾನಮಂತ್ರಿಯ ಬಾಯಿಂದ ಇವನ್ನು ಕೇಳುವುದು ಅದ್ಭುತವೇ ಸರಿ. ಕಾಂಗ್ರೆಸ್ ಪಕ್ಷದ ಸ್ಯಾಮ್ ಪಿತ್ರೋಡಾ ಅವರು ಈ ತೆರಿಗೆಯ ಸಾಧ್ಯತೆಯನ್ನು ಪ್ರಸ್ತಾಪಿಸಿದ್ದಾರೆ, ಅದಕ್ಕೆ ಮೋದಿಯವರ ಪ್ರತಿಕ್ರಿಯೆಯು ಒಂದು ತರ್ಕಬದ್ಧ ವಾದವಲ್ಲ, ಬದಲಿಗೆ ಅದು ಈ ಪ್ರಸ್ತಾವನೆಯನ್ನು ಹಾಸ್ಯಾಸ್ಪದವಾಗಿಸುವ ಉದ್ದೇಶಪೂರ್ವಕವಾದ ಮತ್ತು ಸಪ್ಪೆ ವ್ಯಾಖ್ಯಾನಗಳಿಂದ ಕೂಡಿದೆ (ಮುಂದಿಡಬಹುದಾಗಿದ್ದ ಬೇರೆ ಹಲವು ತರ್ಕಬದ್ಧ ವಾದಗಳಿದ್ದವು). ಇದರಿಂದಾಗಿ ಗಂಭೀರವಾಗಿ ಚರ್ಚಿಸಬೇಕಾಗಿರುವ ವಿಷಯವನ್ನು ದುರುದ್ದೇಶಪೂರಿತವಾಗಿ ಪ್ರಹಸನದ ಮಟ್ಟಕ್ಕೆ ಇಳಿಸಲಾಯಿತು. ಅವರ ಎರಡು ಟಿಪ್ಪಣಿಗಳೆಂದರೆ: ಪಿತ್ರಾರ್ಜಿತ ತೆರಿಗೆ ಇದ್ದಲ್ಲಿ ಆ ಸಭೆಯಲ್ಲಿದ್ದ ಮಹಿಳೆಯರ ಮಂಗಳಸೂತ್ರಗಳನ್ನು ಕಸಿದುಕೊಳ್ಳಬೇಕಾಗುತ್ತದೆ; ಮತ್ತು ನಿಮ್ಮ ಸಾವಿನ ನಂತರವೂ ಕಾಂಗ್ರೆಸ್ ನಿಮ್ಮನ್ನು ಬಿಡುವುದಿಲ್ಲ. ಇವುಗಳಲ್ಲಿ ಮೊದಲನೆಯದು ಸ್ಪಷ್ಟವಾಗಿ ತಪ್ಪು; ಏಕೆಂದರೆ ಒಂದು ನಿರ್ದಿಷ್ಟ ಮಟ್ಟದ ಮೇಲಿನ ಸಂಪತ್ತಿಗೆ ಮಾತ್ರ ಈ ಪಿತ್ರಾರ್ಜಿತ ಆಸ್ತಿಯ ತೆರಿಗೆಯನ್ನು ವಿಧಿಸಲಾಗುತ್ತದೆ; ಮತ್ತು ಎರಡನೆಯದು, ತರ್ಕವೇ ಅಲ್ಲ, ಕೇವಲ ಸಭಿಕರ ಧಿಕ್ಕಾರವನ್ನು ಆಹ್ವಾನಿಸಲಿಕ್ಕಾಗಿಯೇ ಹೇಳಿರುವಂತದ್ದು. ಇದರಲ್ಲಿ ಯಾವುದೇ ವಾದವಿಲ್ಲ: ವ್ಯಕ್ತಿಯ ಮರಣದ ನಂತರ ಅವರ ಸಂತತಿ ಆನುವಂಶಿಕವಾಗಿ ಪಡೆಯುವುದರ ಮೇಲೆ ತೆರಿಗೆ ವಿಧಿಸುವಲ್ಲಿ ಯಾವುದೇ ತಪ್ಪಿಲ್ಲ.

ಪ್ರಸ್ತುತ ಹಂತದಲ್ಲಿ ದೊಡ್ಡ ಹಣಕಾಸಿನ ಪ್ರಯತ್ನ ನಡೆಸಬೇಕಾದುದರ ಹಿಂದಿರುವ ತರ್ಕವನ್ನು ಪರಿಶೀಲಿಸುವ ಮೂಲಕ ಪ್ರಾರಂಭಿಸೋಣ. ನವ ಉದಾರೀಕರಣದ ವರ್ಷಗಳು, ಆದಾಯ ಮತ್ತು ಸಂಪತ್ತಿನ ಅಸಮಾನತೆಗಳ ತೀವ್ರ ಹೆಚ್ಚಳವನ್ನು ಕಂಡಿವೆ ಎಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗುತ್ತಿದೆ; ಭಾರತದಲ್ಲಂತೂ ಇದು ಹಲವರನ್ನು ವಂಚಿತಗೊಳಿಸಿದೆ. ವಿಶೇಷವಾಗಿ ಎನ್‌ಡಿಎ ಆಡಳಿತದ ಅವಧಿಯಲ್ಲಿ ಇಂತಹ ವಂಚನೆ ತೀವ್ರವಾಗಿದೆ; 2014–15 ರಿಂದ ಗ್ರಾಮೀಣ ನಿಜಕೂಲಿಗಳು ಸ್ಥಗಿತಗೊಂಡಿವೆ ಎಂಬುದನ್ನು ಈಗ ಎಲ್ಲರೂ ಒಪ್ಪುತ್ತಾರೆ. ಸೂಕ್ತ ಬೆಲೆ ಸೂಚ್ಯಂಕವನ್ನು ಬಳಸಿದರೆ, ನಿಜಕೂಲಿಗಳಲ್ಲಿ ವಾಸ್ತವವಾಗಿ ಕುಸಿತವನ್ನು ಕಾಣಬಹುದು (ಹಿಂದಿನ ಸಂಚಿಕೆ–19ರಲ್ಲಿ ಈ ಪುಟದಲ್ಲಿ ಪ್ರಕಟವಾಗಿರುವ ಲೇಖನವನ್ನು ನೋಡಿ). ಇದು ಕಾರ್ಮಿಕರ ಚೌಕಾಶಿ ಸಾಮರ್ಥ್ಯದಲ್ಲಿ ಗಮನಾರ್ಹ ಇಳಿಕೆಯನ್ನು ಸೂಚಿಸುತ್ತದೆ ಎಂದೂ ವಾದಿಸಬಹುದು. ಇಂತಹ ಕಡಿತ ನಿರುದ್ಯೋಗದ ಪ್ರಮಾಣ ಹೆಚ್ಚುವ ಮೂಲಕ ಸಂಭವಿಸಬಹುದು, ಇದು ಶ್ರಮಶಕ್ತಿಯಲ್ಲಿ ಹೆಚ್ಚಿದ ನಿರುದ್ಯೋಗವಾಗಿ ಕಾಣುತ್ತದೆ, ಕಡಿಮೆ ಉದ್ಯೋಗವನ್ನು ತೋರಿಸುತ್ತದೆ. ಇಳಿಮುಖವಾಗುತ್ತಿರುವ ನಿಜಕೂಲಿಗಳ ಜತೆಗೆ ಹೆಚ್ಚಿದ ನಿರುದ್ಯೋಗದ ಪ್ರಸ್ತುತ ಅವಧಿಯಲ್ಲಿ ಕಂಡು ಬರುವ ವಂಚನೆ ಕಳೆದ ಅರ್ಧ ಶತಮಾನದಲ್ಲಿಯೇ ಕಂಡಿರದಷ್ಟು.

ವಿಶ್ವಾಸದ್ರೋಹ

ನವ–ಉದಾರವಾದಿ ಅರ್ಥವ್ಯವಸ್ಥೆಯು ಸ್ವಾಭಾವಿಕವಾಗಿ ಕೆಲಸ ಮಾಡುವುದರಿಂದ ಇಂತಹ ಫಲಿತಾಂಶ ಉಂಟಾಗುವುದಾದರೆ, ಅದರ ಕೆಲಸವನ್ನು ಹಣಕಾಸು ಮಧ್ಯಪ್ರವೇಶದ ಮೂಲಕ ಮಾರ್ಪಡಿಸುವುದು ಅಗ್ಯವಾಗುತ್ತದೆ. ಇದನ್ನು ದಾರಿದ್ರ್ಯಕ್ಕೆ ತಳ್ಳಲ್ಪಟ್ಟವರಿಗೆ ವರ್ಗಾವಣೆ ಮಾಡಲು ಅಥವಾ ಅವರಿಗೆ ಸೇವೆಗಳನ್ನು ಒದಗಿಸಲು ಶ್ರೀಮಂತರ ಮೇಲೆ ತೆರಿಗೆಗಳನ್ನು ಹೇರುವ ಮೂಲಕ ಮಾಡಬೇಕು. ಇಂತಹ ತೀವ್ರ ವಂಚನೆಯ ಪರಿಸ್ಥಿತಿಯಲ್ಲಿ ಈ ರೀತಿಯ ಹಣಕಾಸಿನ ಮಧ್ಯಪ್ರವೇಶವನ್ನು ತಪ್ಪಿಸುವುದು ದುಡಿಯುವ ಜನರಿಗೆ ಮಾಡುವ ವಿಶ್ವಾಸದ್ರೋಹಕ್ಕಿಂತ ಕಡಿಮೆಯಿಲ್ಲ. ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಗಳನ್ನು ವಿಧಿಸುವುದು ಸರ್ಕಾರದ ಕರ್ತವ್ಯವಾಗಿದೆ ಮತ್ತು ಅಂತಹ ತೆರಿಗೆಗಳು ನೇರ ತೆರಿಗೆಗಳಾಗಿರಬೇಕು, ಏಕೆಂದರೆ ಪರೋಕ್ಷ ತೆರಿಗೆಗಳು ಹೆಚ್ಚಾಗಿ ಬಡವರ ಮೇಲೆಯೇ ಬೀಳುತ್ತವೆ.

ಅಂತಹ ನೇರ ತೆರಿಗೆಗಳು ಆದಾಯ ಅಥವಾ ವೆಚ್ಚದಂತಹ 'ಹರಿವು' (flow)ಗಳ ಮೇಲೆ ಅಥವಾ ಸಂಪತ್ತು ಅಥವಾ ಪಿತ್ರಾರ್ಜಿತದಂತಹ 'ದಾಸ್ತಾನು'(stock)ಗಳ ಮೇಲೆ ಇರಬಹುದು. ಭಾರತ ಇಂತಹ ದಾಸ್ತಾನುಗಳ ಮೇಲೆ ಯಾವುದೇ ನೇರ ತೆರಿಗೆಯನ್ನು ಹೊಂದಿಲ್ಲ; ನಮ್ಮ ಎಲ್ಲಾ ನೇರ ತೆರಿಗೆಗಳು ಹರಿವಿನ ಮೇಲೆಯೇ ಇವೆ. ಈಗ, ಹೆಚ್ಚುವರಿ ತೆರಿಗೆ ಆದಾಯವನ್ನು ಸಂಗ್ರಹಿಸಲು ಇಂತಹ ದಾಸ್ತಾನುಗಳ ಮೇಲಿನ ತೆರಿಗೆಯನ್ನು ತಪ್ಪಿಸಬೇಕಾದರೆ, ಹರಿವಿನ ಮೇಲೆ ತೆರಿಗೆಯನ್ನು ಇನ್ನಷ್ಟು ಹೆಚ್ಚಿಸಬೇಕಾಗುತ್ತದೆ. ಆದರೆ ಹಲವಾರು ಕಾರಣಗಳಿಗಾಗಿ ಇದು ಸೂಕ್ತವಲ್ಲ: ಮೊದಲನೆಯದಾಗಿ, ಹರಿವಿನ ಮೇಲೆ ಹೆಚ್ಚುವರಿ ತೆರಿಗೆಯ ಮೂಲಕ ನಿರ್ದಿಷ್ಟ ಪ್ರಮಾಣದ ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾದರೆ, ಅದನ್ನೇ ಸಂಪನ್ಮೂಲಗಳನ್ನು ದಾಸ್ತಾನುಗಳ ಚರಾಂಶಗಳ ಮೇಲೆ ತೆರಿಗೆಯ ಮೂಲಕ ಸಂಗ್ರಹಿಸುವುದಕ್ಕಿಂತ ಹೆಚ್ಚಿನ ಜನರ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ; ಎರಡನೆಯದಾಗಿ, ಸಂಪತ್ತಿನ ತೆರಿಗೆಯು ಹೂಡಿಕೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಮತ್ತು ಅದರಿಂದಾಗಿ, ಉದ್ಯೋಗದ ಮೇಲೆ ಪರಿಣಾಮ ಬೀರುವುದಿಲ್ಲ (ಏಕೆಂದರೆ ಇದು ಹೂಡಿಕೆಯ ಮೇಲೆ ಪ್ರಭಾವ ಬೀರುವ ಯಾವುದೇ ಚರಾಂಶಗಳ, ಉದಾಹರಣೆಗೆ ಮಾರುಕಟ್ಟೆಯ ನಿರೀಕ್ಷಿತ ಬೆಳವಣಿಗೆ, ಅಥವಾ ತೆರಿಗೆಯ ನಂತರದ ಲಾಭದ ದರ, ಅಥವಾ ಬಡ್ಡಿ ದರಗಳನ್ನು ತಟ್ಟುವುದಿಲ್ಲ). ಆದರೆ ಲಾಭಗಳ ಮೇಲೆ ತೆರಿಗೆ ವಿಧಿಸುವುದರಿಂದ ಸಣ್ಣ ಬಂಡವಾಳಶಾಹಿಗಳು ನಡೆಸುವ ಹೂಡಿಕೆಯನ್ನು ಕಡಿಮೆಯಾಗಬಹುದು; ಮೂರನೆಯದಾಗಿ, ಇತ್ತೀಚಿನ ವರ್ಷಗಳಲ್ಲಿ ಸಂಪತ್ತಿನ ಅಸಮಾನತೆಗಳು ವಿಪರೀತವಾಗಿ ಹೆಚ್ಚಾಗಿರುವ ಕಾರಣ, ಈ ಹೆಚ್ಚಳವನ್ನು ಸಂಪತ್ತು ಮತ್ತು ಪಿತ್ರಾರ್ಜಿತಗಳ ಮೇಲೆ ಸೂಕ್ತ ತೆರಿಗೆಯ ಮೂಲಕ ಹೇಗಾದರೂ ಪರಿಹರಿಸಬೇಕಾಗಿದೆ.


ವಾಸ್ತವವಾಗಿ ಪಿತ್ರಾರ್ಜಿತ ತೆರಿಗೆಯನ್ನು ವಿಧಿಸುವುದನ್ನು ಆರಂಭಿಸುವುದು ಸಂಪತ್ತಿನ ಮೇಲೆ ತೆರಿಗೆಯನ್ನು ಆರಂಭಿಸುವುದಕ್ಕಿಂತ ನೈತಿಕ ದೃಷ್ಟಿಯಿಂದ ಹೆಚ್ಚು ಪ್ರಭಾವಶಾಲಿಯಾಗಿದೆ. ಇದಕ್ಕೆ ಕಾರಣ ಹೀಗಿದೆ: ಬಂಡವಾಳಶಾಹಿಯನ್ನು ರಕ್ಷಿಸ ಬಯಸುವ ಎಲ್ಲಾ ಬರಹಗಾರರು ಸಮಾಜದಲ್ಲಿ ಇತರರಿಗೆ ಇಲ್ಲದ ಕೆಲವು ವಿಶೇಷ ಗುಣಗಳನ್ನು ಬಂಡವಾಳಶಾಹಿಗಳು ಹೊಂದಿರುವುದರಿಂದ, ಅವರನ್ನು ಭಿನ್ನವಾಗಿ ಪರಿಗಣಿಸಬೇಕಾಗುತ್ತದೆ ಎಂಬ ವಾದ ಹೂಡುತ್ತಾರೆ; ಮತ್ತು ಈ ಗುಣವನ್ನು ಹೊಂದಿರುವುದೇ ಲಾಭ ಎಂಬ ಒಂದು ವಿಶೇಷ ರೀತಿಯ ಆದಾಯವನ್ನು ಅವರು ಗಳಿಸುತ್ತಾರೆ ಹೇಗೆ ಎಂಬುದಕ್ಕೆ ವಿವರಣೆ ನೀಡುತ್ತದೆ ಮತ್ತು ಅದನ್ನು ಸಮರ್ಥಿಸುತ್ತದೆ. ಇದು ಲಾಭದ ಮೂಲವನ್ನು ಕಾರ್ಮಿಕರ ಶೋಷಣೆಯಲ್ಲಿ ಗುರುತಿಸುವ ಮಾರ್ಕ್ಸ್‌ವಾದಿ ದೃಷ್ಟಿಕೋನಕ್ಕೆ ಸಂಪೂರ್ಣವಾಗಿ ವಿರುದ್ಧವಾದ ದೃಷ್ಟಿಕೋನವಾಗಿದೆ. ಆದರೆ, ಈ ವಿಶೇಷ ಗುಣವು ನಿಖರವಾಗಿ ಯಾವುದು ಎಂಬ ಬಗ್ಗೆ ಬಂಡವಾಳಶಾಹಿಯ ರಕ್ಷಕರಲ್ಲಿ ಯಾವುದೇ ಸಹಮತಿಯಿಲ್ಲ: ಶುಂಪೀಟರ್ "ನವೀನಗೊಳಿಸುವ ಸಾಮರ್ಥ್ಯ" ಎಂದು ಹೇಳಿದರೆ, ಇತರರು ಅಪಾಯಗಳನ್ನು ಎದುರಿಸಲು ಮುಂದಾಗುವ ಸಾಮರ್ಥ್ಯ, ಇತ್ಯಾದಿ ಎನ್ನುತ್ತಾರೆ.

ಬಂಡವಾಳಶಾಹಿಗಳದ್ದೇ ತತ್ವಕ್ಕೆ ಅನುಗುಣವಾಗಿಯೂ ಇಲ್ಲ

ಬಂಡವಾಳಶಾಹಿಯು ಒಬ್ಬ ವ್ಯಕ್ತಿಯು ಲಾಭದ ರೂಪದಲ್ಲಿ ಗಳಿಸುವ ಸಂಪತ್ತನ್ನು ಹೊಂದಲು ಅರ್ಹನಾಗಿಸುವ ಅಂತಹ ವಿಶೇಷ ಗುಣವನ್ನು ಹೊಂದಿದ್ದಾನೆ ಎನ್ನುವುದನ್ನು ವಾದಕ್ಕಾಗಿ ಒಪ್ಪಿಕೊಳ್ಳೋಣ. ಆದರೆ, ಇದರರ್ಥ ಆತನ ಮಕ್ಕಳೂ ಈ ವಿಶೇಷ ಗುಣವನ್ನು ಹೊಂದಿದ್ದಾರೆಂದೇನೂ ಅರ್ಥವಲ್ಲವಲ್ಲ. ಅವರು ಈ ಸಂಪತ್ತನ್ನು ಹೊಂದುವ ಯಾವುದೇ ಅರ್ಹತೆಯನ್ನು ಪಡೆದುಕೊಳ್ಳುವ ಮೊದಲು, ಅವರು ಸಹ ಅಂತಹ ವಿಶೇಷ ಗುಣವನ್ನು ಹೊಂದಿದ್ದಾರೆ ಎಂಬುದನ್ನು ಸಮಾನ ಅವಕಾಶದಿಂದ ಆರಂಭಿಸಿ ಸ್ವತಂತ್ರವಾಗಿ ಪ್ರದರ್ಶಿಸಬೇಕು ತಾನೇ.

ಉದಾಹರಣೆಗೆ, ನನ್ನ ಅಜ್ಜ ಕೆಲವು ವಿಶೇಷ ಗುಣಗಳನ್ನು ಹೊಂದಿದ್ದರಿಂದ, ಆತ ಗಳಿಸಿದ ಸಂಪತ್ತಿಗೆ, ನಾನು ಅಂತಹ ಯಾವುದೇ ಗುಣವನ್ನು ಯಾವುದೇ ರೀತಿಯಲ್ಲಿ ಪ್ರದರ್ಶಿಸದಿದ್ದರೂ, ಅರ್ಹನಾಗುತ್ತೇನೆ ಎಂಬುದು, ಬಂಡವಾಳದ ಮಾಲೀಕತ್ವವು ಒಂದು ವಿಶೇಷ ಗುಣದ ಪ್ರತಿಫಲವಾಗಿದೆ ಎಂಬ ಬಂಡವಾಳಶಾಹಿ ತತ್ವಕ್ಕೆ ವಿರುದ್ಧವಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ಹೊಂದಬಹುದು ಎಂಬುದು

ಒಂದು ಜಾಗತಿಕ ಸಣ್ಣತನದ ಸೂಚ್ಯಂಕ ಎಂಬುದಿದ್ದರೆ ಅದರಲ್ಲಿ ನಾವು ಮೊದಲ ಸ್ಥಾನದಲ್ಲಿರುತ್ತೇವೆ



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಮುಸ್ಲಿಮರ ಜನಸಂಖ್ಯೆ ಹಿಂದು ಜನಸಂಖ್ಯೆಗಿಂತ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆಯೇ.........

ಪುಟ 9 ರಿಂದ

ದೇಶದಾದ್ಯಂತ ಒಂದೇ ದರವಿಲ್ಲ

ಅದೇ ರೀತಿ, ಅದೇ ರೀತಿ ಭಾರತದಾದ್ಯಂತ ಎಲ್ಲಾ ರಾಜ್ಯಗಳಲ್ಲೂ ಭಾರತದ ಯಾವುದೇ ಪ್ರದೇಶಕ್ಕೆ ಹೋಲಿಸಿದರೆ ಮುಸ್ಲಿಂ ಮಹಿಳೆಯರ ಫಲವತ್ತತೆ ಪ್ರಮಾಣ ಹೆಚ್ಚಿಲ್ಲ. ಉದಾಹರಣೆಗೆ, 2005–06ರಲ್ಲಿ ಉತ್ತರ ಪ್ರದೇಶದಲ್ಲಿ ಹಿಂದೂ ಮಹಿಳೆಯರ ಫಲವತ್ತತೆ ಪ್ರಮಾಣ 3.73 ಇತ್ತು. ಬಿಹಾರದಲ್ಲಿ 3.86. ಆದರೆ, ಮಹಾರಾಷ್ಟ್ರದಲ್ಲಿ ಮುಸ್ಲಿಂ ಮಹಿಳೆಯರ ಫಲವತ್ತತೆ ಪ್ರಮಾಣ 2.85. ಪಶ್ಚಿಮ ಬಂಗಾಳದಲ್ಲಿ ಇದು 3.15 ಆಗಿದೆ. ಮಧ್ಯಪ್ರದೇಶದಲ್ಲಿ ಇದು 3.06 ಆಗಿದೆ. ಪ್ರತಿ ಆಯಾ ರಾಜ್ಯದಲ್ಲಿ ಮುಸ್ಲಿಂ ಮಹಿಳೆಯರ ಫಲವತ್ತತೆ ದರ ಹಿಂದೂ ಮಹಿಳೆಯರಿಗಿಂತ ಹೆಚ್ಚಿದ್ದರೂ, ನಾವು ಇದನ್ನು ರಾಜ್ಯಗಳಾದ್ಯಂತ ಹೋಲಿಸಿದರೆ, ಮೇಲೆ ಹೇಳಿದಂತೆ, ಮುಸ್ಲಿಂ ಮಹಿಳೆಯರ ಹೆರಿಗೆಯ ಪ್ರಮಾಣವು ಒಂದು ರಾಜ್ಯಕ್ಕಿಂತ 3 ರಾಜ್ಯಗಳಲ್ಲಿ ಕಡಿಮೆಯಾಗಿದೆ. (ಕೋಷ್ಟಕ ನೋಡಿ)

ಅದೇ ಸಮೀಕ್ಷೆಯನ್ನು 15 ವರ್ಷಗಳ ನಂತರ 2019–21 ರಲ್ಲಿ ತೆಗೆದುಕೊಂಡಾಗ, ಉತ್ತರ ಪ್ರದೇಶದಲ್ಲಿ ಹಿಂದೂ ಮಹಿಳೆಯರ ಫಲವತ್ತತೆಯ ಪ್ರಮಾಣವು 2.29 ಕ್ಕೆ ಮತ್ತು ಬಿಹಾರದಲ್ಲಿ 2.88 ಕ್ಕೆ ಇಳಿದಿದೆ. ಆದಾಗ್ಯೂ, ಉತ್ತರ ಪ್ರದೇಶದ ಮುಸ್ಲಿಂ ಮಹಿಳೆಯರ ಫಲವತ್ತತೆ ದರ 2.66 ಕ್ಕಿಂತ ಬಿಹಾರದ ಪ್ರಮಾಣ ಹೆಚ್ಚಾಗಿದೆ. ಮಹಾರಾಷ್ಟ್ರ ಮುಸ್ಲಿಂ ಮಹಿಳೆಯರ 2.06, ಪಶ್ಚಿಮ ಬಂಗಾಳದ ಮುಸ್ಲಿಂ ಮಹಿಳೆಯರ 2.03 ಮತ್ತು ಮಧ್ಯಪ್ರದೇಶದ 2.4 ಕ್ಕಿಂತ ಹೆಚ್ಚಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಮತ್ತು ಮಧ್ಯಪ್ರದೇಶದಲ್ಲಿ ಮುಸ್ಲಿಂ ಮಹಿಳೆಯರ ಫಲವತ್ತತೆ ಪ್ರಮಾಣವು ಉತ್ತರ ಪ್ರದೇಶದ ಹಿಂದೂ ಮಹಿಳೆಯರಿಗಿಂತ ಕಡಿಮೆಯಾಗಿದೆ. ಬಿಹಾರವು 2.88 ರ ಹಿಂದೂ ಸ್ತ್ರೀ ಫಲವತ್ತತೆಯ ಪ್ರಮಾಣವನ್ನು ಹೊಂದಿದೆ ಮತ್ತು ಉತ್ತರ ಪ್ರದೇಶವು ಮೇಲಿನ 3 ರಾಜ್ಯಗಳಲ್ಲಿ ಅತ್ಯಂತ ಕಡಿಮೆ ಮುಸ್ಲಿಂ ಸ್ತ್ರೀ ಫಲವತ್ತತೆಯ ಪ್ರಮಾಣವನ್ನು ಹೊಂದಿದೆ. ಉತ್ತರ ಪ್ರದೇಶಕ್ಕೆ ಹೋಲಿಸಿದರೆ, ಈ 15 ವರ್ಷಗಳಲ್ಲಿ ಹಿಂದೂ ಮಹಿಳೆಯರ ಸಂತಾನೋತ್ಪತ್ತಿ ಪ್ರಮಾಣವು 1.44 ರಷ್ಟು ಕಡಿಮೆಯಾಗಿದೆ, ಆದರೆ ಮುಸ್ಲಿಂ ಮಹಿಳೆಯರ ಪ್ರಮಾಣವು 1.67 ರಷ್ಟು ಕಡಿಮೆಯಾಗಿದೆ.

ಅತ್ಯಂತ ವೇಗದ ಪತನ

ಕಳೆದ 15 ವರ್ಷಗಳಿಂದ ಉತ್ತರ ಪ್ರದೇಶದಲ್ಲಿ ಮುಸ್ಲಿಂ ಮಹಿಳೆಯರ ಫಲವತ್ತತೆ ಪ್ರಮಾಣವು ಹಿಂದೂ ಮಹಿಳೆಯರಿಗಿಂತ 0.6 ಪಟ್ಟು ಹೆಚ್ಚಾಗಿದೆ. ಆದರೆ 15 ವರ್ಷಗಳ ನಂತರ 0.37ಕ್ಕೆ ಇಳಿದಿದೆ. ಹೀಗೆ ಎಲ್ಲ ರಾಜ್ಯಗಳನ್ನು ತುಲನೆ ಮಾಡಿದರೆ ಮುಸಲ್ಮಾನರ ಜನನ ಪ್ರಮಾಣ ಬಹುಬೇಗ ಇಳಿಮುಖವಾಗಿರುವುದನ್ನು ಕಾಣಬಹುದು.

ಬಹುಪತ್ನಿತ್ವ: ಮುಸ್ಲೀಮರಲ್ಲಿ ಮಾತ್ರ ಇದೆಯೇ?

ಅದೇ ರೀತಿ "ಮುಸ್ಲಿಮರು ಎಷ್ಟು ಹೆಣ್ಣನ್ನು ಬೇಕಾದರೂ ಮದುವೆಯಾಗಬಹುದು. ಹಿಂದೂಗಳಿಗೆ ಆ ಅವಕಾಶವಿಲ್ಲ. 'ಇದೊಂದು ಅನ್ಯಾಯ" ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಭಾರತದಲ್ಲಿ ಶೇಕಡಾ 1.9 ರಷ್ಟು ಮುಸ್ಲಿಮರು ಬಹುಪತ್ನಿತ್ವವನ್ನು ಆಚರಿಸುತ್ತಾರೆ. ಕ್ರಿಶ್ಚಿಯನ್ನರಲ್ಲಿ ಇದು 2.1 ಪ್ರತಿಶತ, ಸಿಖ್ಖರಲ್ಲಿ 0.5, ಬೌದ್ಧರಲ್ಲಿ 1.3, ಇತರ ಧರ್ಮಗಳಲ್ಲಿ 2.5, ಹಿಂದೂಗಳಲ್ಲಿ 1.3, ಆದಾಗ್ಯೂ, ಹಿಂದೂ ಧರ್ಮದಲ್ಲಿಯೂ ಸಹ ಬಹುಪತ್ನಿತ್ವದಲ್ಲಿ ಅಸಮಾನತೆ ಇದೆ. ಆದಿವಾಸಿಗಳಿಗೆ ಶೇ.2.4, ಪರಿಶಿಷ್ಟ ಜಾತಿಯವರಿಗೆ ಶೇ.1.5, ಒಬಿಸಿಗಳಿಗೆ ಶೇ.1.3 ಮತ್ತು ಇತರರಿಗೆ ಶೇ.1.2ರಷ್ಟು ಇರುವುದನ್ನು ನೋಡಬಹುದು.

ಸಾಕ್ಷರತೆ ಮತ್ತು ಆದಾಯವು ಪ್ರಮುಖ ಅಂಶಗಳಾಗಿವೆ

ಅದೇ ರೀತಿ, ಇಡೀ ಭಾರತಕ್ಕೆ ಆರ್ಥಿಕ ಆಧಾರದ ಮೇಲೆ, ಬಹುಪತ್ನಿತ್ವವು ಅನಕ್ಷರಸ್ಥರಲ್ಲಿ 2.4 ಪ್ರತಿಶತ, ಪ್ರಾಥಮಿಕ ಶಿಕ್ಷಣ ಹೊಂದಿರುವವರಲ್ಲಿ 2.1 ಪ್ರತಿಶತ, ಪ್ರೌಢ ಶಿಕ್ಷಣ ಹೊಂದಿರುವವರಲ್ಲಿ 0.9 ಪ್ರತಿಶತ ಮತ್ತು ಉನ್ನತ ಶಿಕ್ಷಣ ಹೊಂದಿರುವವರಲ್ಲಿ 0.3 ಪ್ರತಿಶತ ಇದೆ. ಅದೇ ರೀತಿ, ಫಲವತ್ತತೆಯು ಬಹುಪತ್ನಿತ್ವದ ಮೇಲೆ ಪ್ರಭಾವ ಬೀರುತ್ತದೆ. ಕಡು ಬಡವರಲ್ಲಿ ಶೇಕಡಾ 2.4, ಬಡವರಲ್ಲಿ ಶೇಕಡಾ 1.8, ಮಧ್ಯಮ ವರ್ಗದವರಲ್ಲಿ ಶೇಕಡಾ 1.5, ಶ್ರೀಮಂತರಲ್ಲಿ ಶೇಕಡಾ 0.9 ಮತ್ತು ಅತಿ ಶ್ರೀಮಂತರಲ್ಲಿ ಶೇಕಡಾ 0.5. ಬಹುಪತ್ನಿತ್ವ ಹೆಚ್ಚಾಗಲು ಬಡತನ ಮತ್ತು ಅನಕ್ಷರತೆ ಕಾರಣ ಎಂಬುದನ್ನು ಕಾಣಬಹುದು. ನಾವು ಈ ಸಾರ್ವತ್ರಿಕ ವೈಶಿಷ್ಟ್ಯವನ್ನು ಮುಸ್ಲಿಮರಿಗೆ ಅನ್ವಯಿಸಿದರೆ, ಅವರ ಶೈಕ್ಷಣಿಕ ಹಿಂದುಳಿದಿರುವಿಕೆ ಮತ್ತು ಆರ್ಥಿಕ ಹಿಂದುಳಿದಿರುವಿಕೆಯು ಮಕ್ಕಳನ್ನು ಹೊಂದುವ ಮತ್ತು ಬಹುಪತ್ನಿತ್ವವನ್ನು ಅನುಸರಿಸುವವರ ಮೇಲೆ ಪ್ರಭಾವ ಬೀರುವುದನ್ನು ನಾವು ನೋಡಬಹುದು.

2005–06 ರ ಜನಗಣತಿಯ ಪ್ರಕಾರ, ಅನಕ್ಷರಸ್ಥ ಹಿಂದೂಗಳಲ್ಲಿ 40.5 ಪ್ರತಿಶತ ಮಹಿಳೆಯರು. ಮುಸ್ಲಿಮರಲ್ಲಿ 47.9 ಮಹಿಳೆಯರಿದ್ದಾರೆ. 2019–2021ರಲ್ಲಿ ಇದು ಹಿಂದೂ ಮಹಿಳೆಯರಲ್ಲಿ 28.5 ಮತ್ತು ಮುಸ್ಲಿಂ ಮಹಿಳೆಯರಲ್ಲಿ 29.1 ಆಗಿದೆ. ಕಳೆದ 15 ವರ್ಷಗಳಲ್ಲಿ ಕನಿಷ್ಠ ಶಿಕ್ಷಣ ಹೊಂದಿರುವವರು 52.1 ಪ್ರತಿಶತದಿಂದ 70.9 ಪ್ರತಿಶತಕ್ಕೆ ಏರಿದ್ದಾರೆ ಎಂದು ನಾವು ಪರಿಗಣಿಸಿದಾಗ ಮುಸ್ಲಿಂ ಮಹಿಳೆಯರ ಹೆರಿಗೆಯ ದರದಲ್ಲಿನ ಕುಸಿತವನ್ನು ನಾವು ಅರ್ಥಮಾಡಿಕೊಳ್ಳಬಹುದು. ಅದೇ ರೀತಿ, ಮುಸ್ಲಿಮರು, ಹಿಂದೂಗಳು ಮತ್ತು ಇತರ ಧರ್ಮಗಳಲ್ಲಿ ಮಕ್ಕಳ ಹೆರಿಗೆಯ ಪ್ರಮಾಣವು ಅಧಿಕವಾಗಿದೆ–ಶಿಕ್ಷಣ, ಆದಾಯ ಈ ಮಟ್ಟಗಳು ಸುಧಾರಿಸಿದಂತೆ ಇಳಿಮುಖವಾಗಿದೆ ಎಂದು ದೊಡ್ಡ ಪ್ರಮಾಣದ ಡೇಟಾ ತೋರಿಸುತ್ತದೆ.

ಮೋದಿ ಸರ್ಕಾರ ಅವಕಾಶಗಳನ್ನು ಕಡಿತಗೊಳಿಸಿದೆ

ಈ ಕಾರಣಕ್ಕಾಗಿಯೇ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲಯನ್ಸ್ (ಯುಪಿಎ) ಸರ್ಕಾರವು ಸಾಚಾರ್ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಮುಸ್ಲಿಮರಿಗೆ ಶೈಕ್ಷಣಿಕ ಸಹಾಯವನ್ನು ಘೋಷಿಸಿತು ಮತ್ತು ಜಾರಿಗೊಳಿಸಿತು. ಅದಕ್ಕೂ ಮೊದಲು ಸಹಾ ಕೆಲವು ವಿದ್ಯಾರ್ಥಿ ವೇತನಗಳಿದ್ದವು. ಆದರೆ, ಈ ಅವಧಿಯಲ್ಲಿ ಮೋದಿ ಸರ್ಕಾರವು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ, ಅಲ್ಪಸಂಖ್ಯಾತ ಬಾಲಕಿಯರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಬೇಗಂ ಹಜರತ್ ಮಹಲ್ ವಿದ್ಯಾರ್ಥಿ ವೇತನ, ಉನ್ನತ ಶಿಕ್ಷಣ ವಿದ್ಯಾರ್ಥಿಗಳಿಗೆ ಮೌಲಾನಾ ಅಬ್ದುಲ್ ಕಲಾಂ ಆಜಾದ್ ರಾಷ್ಟ್ರೀಯ ಫೆಲೋಶಿಪ್ ಮತ್ತು ಸಾಗರೋತ್ತರ ವಿದ್ಯಾರ್ಥಿಗಳಿಗೆ ಸಾಲದ ಬಡ್ಡಿ ಸಬ್ಸಿಡಿಯನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಒಂದೆಡೆ ಮುಸ್ಲಿಮರನ್ನು ಶತ್ರುಗಳಂತೆ ಬಿಂಬಿಸುವುದು, ಹಿಂದುಳಿದ ಅವರ ಜನನ ಪ್ರಮಾಣವನ್ನು ಉಲ್ಲೇಖಿಸುವುದು, ಮತ್ತೊಂದೆಡೆ ಅವರ ಶಿಕ್ಷಣವನ್ನು ಸುಧಾರಿಸುವ ಕಾರ್ಯಕ್ರಮಗಳನ್ನು ದುರ್ಬಲಗೊಳಿಸುವುದು ಸಂಘಪರಿವಾರದ ಉದ್ದೇಶಪೂರ್ವಕ ಕುತಂತ್ರವಾಗಿದೆ. ಇದು ಕೇವಲ ಮುಸ್ಲಿಮರು ಮಾತ್ರ ಎದುರಿಸಬೇಕಾದ ಸಮಸ್ಯೆಯಲ್ಲ; ಪ್ರತಿಯೊಬ್ಬ ಭಾರತೀಯನ ವಿರುದ್ಧದ ವಿಷಪೂರಿತ ಪ್ರಚಾರ.

ಕೃಪೆ: ತೀಕದಿರ್

ವಾರಸುದಾರಿಕೆ ತೆರಿಗೆ: ವಸಾಹತುಶಾಹಿ...

ಪುಟ 13 ರಿಂದ

ಬಂಡವಾಳಶಾಹೀ ತಾನೇ ಪ್ರತಿಪಾದಿಸುವ ತತ್ವಕ್ಕೆ ವಿರುದ್ಧವಾಗಿದೆ. ಇದು ವಾಸ್ತವವಾಗಿ ಆಸ್ತಿಯ ಮಾಲೀಕತ್ವ ಮತ್ತು ಅದರಿಂದಾಗಿ ಲಾಭ ಎಂದು ಕರೆಯಲ್ಪಡುವ ಆದಾಯದಗಳಿಕೆಯು, ಅದನ್ನು ಹೊಂದಿರುವವರ ಕೆಲವು ವಿಶೇಷ ಗುಣಗಳಿಂದಾಗಿ ಎಂಬ ಪ್ರತಿಪಾದನೆಯನ್ನು ನಿರಾಕರಿಸುವುದಕ್ಕೆ ಪುರಾವೆಯಾಗುತ್ತದೆ.

ಆದ್ದರಿಂದ ಅನೇಕ ದೊಡ್ಡ ಬಂಡವಾಳಶಾಹೀ ಅರ್ಥವ್ಯವಸ್ಥೆಗಳಲ್ಲಿ ಬಂಡವಾಳಶಾಹಿಗಳು, ಈ ವ್ಯವಸ್ಥೆಗೆ ನ್ಯಾಯಸಮ್ಮತತೆಯನ್ನು ಪಿತ್ರಾರ್ಜಿತ ಆಸ್ತಿಗಳ ಮೇಲೆ ತೆರಿಗೆ ಏನೇನೂ ಇಷ್ಟವಿಲ್ಲದಿದ್ದರೂ, ಇದನ್ನು ಸಹಿಸಿಕೊಳ್ಳಲಾಗಿದೆ. ಉದಾಹರಣೆಗೆ ಜಪಾನ್‌ನಲ್ಲಿ ಪಿತ್ರಾರ್ಜಿತ ಆಸ್ತಿ ತೆರಿಗೆ ದರಗಳು 55 % ದಷ್ಟರ ವರೆಗೂ ಇವೆ. ಭಾರತದಲ್ಲಿ ಈಗ ನಾವು ವಾರಸುದಾರಿಕೆ ತೆರಿಗೆಯನ್ನು ಹೊಂದಿರದೇ ಇರುವುದು, ನಮ್ಮಲ್ಲಿ ಸಂಪತ್ತು ತೆರಿಗೆ ಎಂದು ಹೇಳಬಹುದಾದ ಏನ್ನೂ ಹೊಂದಿಲ್ಲ ಎಂಬುದಕ್ಕೆ ಅನುಗುಣವಾಗಿದೆ. ಏಕೆಂದರೆ ಪಿತ್ರಾರ್ಜಿತ ಆಸ್ತಿಯ ತೆರಿಗೆಯು ಸ್ವತಃ ಮಹತ್ವದ್ದಾಗಿದೆಯಲ್ಲದೆ, ಸಂಪತ್ತು ತೆರಿಗೆಗೆ ಪೂರಕವೂ ಆಗಿದೆ. ಅದಿಲ್ಲದಿದ್ದರೆ, ಸಂಪತ್ತಿನ ಮೇಲೆ ತೆರಿಗೆಯಿಂದ ತಪ್ಪಿಸಿಕೊಳ್ಳಲು, ಕುಟುಂಬದ ಮುಖ್ಯಸ್ಥನ ಮರಣದ ಮುಂಚೆಯೇ, ಆತನ ಸಂತತಿಯಲ್ಲಿ ಹಂಚಿ ಬಿಡುವುದನ್ನು ನಡೆಯಬಹುದು.

ಆದ್ದರಿಂದ ವಾರಸುದಾರಿಕೆಯ ಮೇಲೆ ತೆರಿಗೆ ವಿಧಿಸುವುದು ಸಂಪತ್ತನ್ನು, ಸಾವಿನ ನಂತರ ಮಾತ್ರವಲ್ಲ, ಅದಕ್ಕೂ ಮುಂಚೆಯೇ ಸಂತತಿಗೆ ಅಥವಾ ಸ್ನೇಹಿತರಿಗೆ ಕೊಡಮಾಡುವುದನ್ನು ಕಂಡು ಹಿಡಿಯಬೇಕು. ಇದು ಒಂದು ನಿರ್ದಿಷ್ಟ ವಿನಾಯಿತಿ ಮಿತಿಯ ಮೇಲೆ ಮಾತ್ರ ಕಾರ್ಯನಿರ್ವಹಿಸುವ ಹೆಚ್ಚುತ್ತ ಹೋಗುವ ತೆರಿಗೆಯಾಗಿರಬೇಕು (ಈ ಮೂಲಕ ಏಕಸ್ವಾಮ್ಯ ಬಂಡವಾಳಶಾಹಿಗಳು ಮತ್ತು ಬಿಲಿಯಾಧಿಪತಿಗಳು ಮಂಗಳಸೂತ್ರವನ್ನು ಆವಾಹಿಸುವ ಮೂಲಕ ಅದರ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ಮೂಡಿಸಲು ಅವಕಾಶವಿಲ್ಲದಂತಾಗಬೇಕು); ಮತ್ತು ಇದನ್ನು, ಮೇಲೆ ಉಲ್ಲೇಖಿಸಿದಂತೆ, ವ್ಯಕ್ತಿಯ ಮರಣದ ನಂತರ ಮಾತ್ರವಲ್ಲ, ವ್ಯಕ್ತಿಯ ಜೀವಿತಾವಧಿಯಲ್ಲಿಯೂ ಸಹ ವಾರಸುದಾರಿಕೆಯ ಕ್ರಿಯೆಯನ್ನು ಕಾರ್ಯಗತಗೊಳಿಸಿದಾಗಲೆಲ್ಲಾ ಅಗತ್ಯವಾಗಿ ಅನ್ವಯಿಸಬೇಕು.

ಸಂಪತ್ತು ತೆರಿಗೆ ಮತ್ತು ವಾರಸುದಾರಿಕೆ ತೆರಿಗೆ ಇವೆರಡರ ವಿರುದ್ಧದ ಸಾಮಾನ್ಯ ವಾದವೆಂದರೆ ಅವುಗಳನ್ನು ಜಾರಿಗೊಳಿಸುವುದು ಕಷ್ಟ, ಆದ್ದರಿಂದ ಅವುಗಳಿಂದ ಆದಾಯ ಸಂಗ್ರಹ ಬಹಳ ಕಡಿಮೆ. ಆದರೆ ಈ ಸಂಗತಿ, ಭಾರತದಲ್ಲಿ ಸಂಭವಿಸಿದಂತೆ ಅವನ್ನು ಪರಿತ್ಯಜಿಸುವುದಕ್ಕೆ ಸಮರ್ಥನೆಯಾಗಲಾರದು; ಬದಲಿಗೆ, ಇಂತಹ ತೆರಿಗೆಗಳು ಪರಿಣಾಮಕಾರಿಯಾಗುವಂತೆ ವಿಧಿ–ವಿಧಾನಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು ಮತ್ತು ಅವನ್ನು ತಿದ್ದುಪಡಿ ಮಾಡಬೇಕು. ಜಪಾನ್‌ನಂತಹ ಇತರ ದೇಶಗಳು ಅವುಗಳನ್ನು ಹೇಗೆ ಕಾರ್ಯಗತಗೊಳಿಸುತ್ತವೆ ಎಂಬುದನ್ನು ಸಹ ಈ ಸಂದರ್ಭದಲ್ಲಿ ಅಧ್ಯಯನ ಮಾಡಬಹುದು.

ವಸಾಹತುಶಾಹಿ–ವಿರೋಧಿ ಕಾರ್ಯಸೂಚಿಯ ಭಾಗ

ಪ್ರಾಸಂಗಿಕವಾಗಿ, ಪಿತ್ರಾರ್ಜಿತ ತೆರಿಗೆಯನ್ನು ವಿಧಿಸುವುದು ನಮ್ಮ ವಸಾಹತುಶಾಹಿ–ವಿರೋಧಿ ಹೋರಾಟದ ಕಾರ್ಯಸೂಚಿಯ ಭಾಗವಾಗಿತ್ತು. ಕಾಂಗ್ರೆಸ್‌ನ 1931 ರ ಕರಾಚಿ ಕರಾಚಿ ಅಧಿವೇಶನದ ನಿರ್ಣಯವು ಭಾರತದಲ್ಲಿ ಎಲ್ಲಾ ನಾಗರಿಕರಿಗೆ ಕಾನೂನಿನ ಮುಂದೆ ಸಮಾನತೆ, ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು, ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕುಗಳ ಒಂದು ಪಟ್ಟಿಯನ್ನು, ಮತ್ತು ಯಾವುದೇ ನಿರ್ದಿಷ್ಟ ಧರ್ಮವನ್ನು ಪ್ರೋತ್ಸಾಹಿಸದ ಒಂದು ಜಾತ್ಯತೀತ ಪ್ರಭುತ್ವದ ಚಿತ್ರಣ ನೀಡಿತ್ತು. "ಒಂದು ನಿರ್ದಿಷ್ಟ ಕನಿಷ್ಠಕ್ಕಿಂತ ಹೆಚ್ಚಿನ ಆಸ್ತಿಯ ಮೇಲೆ ಹೆಚ್ಚುತ್ತ ಹೋಗುವ ಪ್ರಮಾಣದಲ್ಲಿ ಮರಣ ತೆರಿಗೆಯನ್ನು ವಿಧಿಸಲಾಗುವುದು" ಎಂದೂ ಅದು ಸ್ಪಷ್ಟವಾಗಿ ಹೇಳಿತ್ತು. ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳನ್ನು ಗಲ್ಲಿಗೇರಿಸಿದ ಕೇವಲ ಮೂರು ದಿನಗಳ ನಂತರ ಮಾರ್ಚ್ 26 ರಂದು ನಡೆದ ಕರಾಚಿ ಅಧಿವೇಶನದ ನಿರ್ಣಯ ಕಾಂಗ್ರೆಸ್ ಸಂಘಟನೆಯ ಒಳಗೆ ಮತ್ತು ಹೊರಗೆ ರಾಜಕೀಯ ಜೀವನದಲ್ಲಿ ಎಡಪಂಥೀಯರ ಪ್ರಭಾವ ಬೆಳೆದು ಬರುತ್ತಿದ್ದುದನ್ನು, ಮತ್ತು ಇದಕ್ಕೆ ಸಾರ್ವತ್ರಿಕ ಬೆಂಬಲವನ್ನು ಬಿಂಬಿಸಿತ್ತು. ಜವಾಹರಲಾಲ್ ನೆಹರೂ ಮಂಡಿಸಿದ ಈ ನಿರ್ಣಯವನ್ನು ಗಾಂಧಿಯವರು ಎಚ್ಚರಿಕೆಯಿಂದ ಪರಿಶೀಲಿಸಿದರು ಮತ್ತು ಅನುಮೋದಿಸಿದ್ದರು; ಮತ್ತು ಈ ನಿರ್ಣಯವನ್ನು ಅಂಗೀಕರಿಸಿದ ಕರಾಚಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಲ್ಲಭಭಾಯಿ ಪಟೇಲ್ ವಹಿಸಿದ್ದರು, ಹೀಗೆ ಪಿತ್ರಾರ್ಜಿತ ಆಸ್ತಿ ತೆರಿಗೆಯ ವಿರುದ್ಧದ ಪ್ರಧಾನ ಮಂತ್ರಿಯವರ ಬರಡು ದೂಷಣೆಗಳು ನಮ್ಮ ವಸಾಹತುಶಾಹಿ–ವಿರೋಧಿ ಹೋರಾಟದ ಕಾರ್ಯಸೂಚಿಯ ಬಗ್ಗೆ ಅರಿವಿನ ಕೊರತೆಯನ್ನು ತೋರಿಸುತ್ತದೆ. ಇದು ವ್ಯಥೆಪಡಬೇಕಾದ ಸಂಗತಿ.

ವಾರಸುದಾರಿಕೆಯ ತೆರಿಗೆ, ಅದರ ಜತೆಗೆ ಸಂಪತ್ತಿನ ತೆರಿಗೆ ಪ್ರಸ್ತುತ ಸಂದರ್ಭದಲ್ಲಿ ಅತ್ಯಗತ್ಯವಾಗಿದೆ. ಇದು ದೇಶದಲ್ಲಿ ಬೆಳೆಯುತ್ತಿರುವ ಆರ್ಥಿಕ ಅಸಮಾನತೆಯನ್ನು ತಡೆಗಟ್ಟಲು ಮಾತ್ರವಲ್ಲದೆ ಒಂದು ಕಲ್ಯಾಣ ಪ್ರಭುತ್ವವನ್ನು ಕಟ್ಟಲು ಸಹ ಅತ್ಯಗತ್ಯವಾಗಿದೆ. ಇಂತಹ ಒಂದು ಪ್ರಭುತ್ವದ ಸ್ಥಾಪನೆ ಕರಾಚಿಯ ನಿರ್ಣಯ ಆಶ್ವಾಸನೆ ನೀಡಿದ್ದ ಆರ್ಥಿಕ ನ್ಯಾಯವನ್ನು ಸಾಧಿಸಲು ಒಂದು ಅಗತ್ಯ ಹೆಜ್ಜೆಯಾಗಿದೆ.

ವೇಮುಲಾ ಆತ್ಮಹತ್ಯೆ ಸಾಂಸ್ಥಿಕ ಹತ್ಯೆಯಲ್ಲ...... ಪುಟ 16 ರಿಂದ

ಕೊರಗಿದ್ದರು ಎಂದು ವರದಿ ಹೇಳುತ್ತದೆ. ಇಲ್ಲಿ, ರೋಹಿತ್ ಎರಡು ವಿಭಿನ್ನ ವಿಭಾಗಗಳಲ್ಲಿ ಅತ್ಯಂತ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದರು ಎಂಬುದನ್ನು ವರದಿ ಕಡೆಗಣಿಸುತ್ತದೆ.

ಆದರೆ, ಅಂತಿಮವಾಗಿ, ಆತ್ಮಹತ್ಯೆ ಟಿಪ್ಪಣಿಯಲ್ಲಿ ಅಪ್ಪಾ ರಾವ್ ವಿರುದ್ಧ ಅಂತಹ ಯಾವುದೇ ಅಸಮಾಧಾನ ದಾಖಲಾಗಿಲ್ಲ ಎಂಬುದನ್ನೇ ವರದಿಯು ಬಲವಾಗಿ ವಾದಿಸುತ್ತದೆ. ಆದರೆ, ಅಪ್ಪುರಾವ್ ರವರು, ವಿಶ್ವ ವಿದ್ಯಾಲಯದ ಎಲ್ಲಾ ನೀತಿ ನಿಯಮಗಳನ್ನು ಉಲಂಘಿಸಿ, ಹಾಸ್ಟೆಲ್ ನಿಂದ ಹೊರದಬ್ಬಿದ್ದು, ಸ್ಕಾಲರ್ಶಿಪ್ ನಿಲ್ಲಿಸಿದ್ದು, ಕೊರೆಯುವ ಚಳಿಯಲ್ಲಿ ಆಚೆ ಮಲಗಿಸಿದ್ದು, ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಿದ್ದು, ಇವುಗಳನ್ನು ತನಿಖಾ ವರದಿ ಪರಿಗಣಿಸಿಲ್ಲ ಏಕೆ? ಇವೆಲ್ಲಾ ದಲಿತರ ಮೇಲಿನ ದಮನ ಅಥವಾ ದೌರ್ಜನ್ಯವಲ್ಲವೇ?

ವರದಿಯ ಮರುಪರಿಶೀಲನೆಗೆ ಒತ್ತಾಯ, ಭರವಸೆ

ತೆಲಂಗಾಣದಲ್ಲಿ ಹೊಸದಾಗಿ ಚುನಾಯಿತ ಕಾಂಗ್ರೆಸ್ ಸರ್ಕಾರಕ್ಕೆ ಈ ವರದಿ ಸಂಕಷ್ಟ ತಂದಿದೆ. ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿಯವರು ಸೇರಿದಂತೆ ಕಾಂಗ್ರೆಸ್ ನಾಯಕತ್ವವು ರೋಹಿತ್ ವೇಮುಲಾ ಚಳುವಳಿಗೆ ಅದರ ಆರಂಭದ ದಿನಗಳಿಂದಲೂ ರೋಹಿತ್ ವೆಮುಲಾಗೆ ನ್ಯಾಯಕ್ಕಾಗಿ ತಮ್ಮ ಬೆಂಬಲವನ್ನು ನಿರಂತರವಾಗಿ ವ್ಯಕ್ತಪಡಿಸಿಕೊಂಡು ಬಂದಿದ್ದಾರೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಸಾಂಸ್ಥಿಕ ತಾರತಮ್ಯದ ವಿರುದ್ಧ ರೋಹಿತ್ ಕಾಯಿದೆಯನ್ನು ಜಾರಿಗೊಳಿಸುವುದಾಗಿ, ಪ್ರಸ್ತುತ ನಡೆಯುತ್ತಿರುವ ಸಂಸತ್ತಿನ ಚುನಾವಣೆಯ ಕಾಂಗ್ರೆಸ್ ಪ್ರಣಾಳಿಕೆ ಹೇಳಿದೆ. ಈ ದಿಸೆಯಲ್ಲಿ, ರಾಧಿಕಾ ವೇಮುಲಾ ಅವರು ಅನಾರೋಗ್ಯದ ಸ್ಥಿತಿಯಲ್ಲಿ ಇದ್ದಾಗ್ಯೂ, ಸಹಾ ಭಾರತ್ ಜೋಡೋ ಯಾತ್ರೆಯಲ್ಲಿ ಭಾಗವಹಿಸಿದ್ದಾರೆ. ಅವರು ಸರ್ಕಾರದ ಬದಲಾವಣೆಯು ಭಾರತದಲ್ಲಿ ದಲಿತರಿಗೆ ನ್ಯಾಯದ ನಿರೀಕ್ಷೆಗಳನ್ನು ಹೆಚ್ಚಿಸುತ್ತದೆ ಎಂಬ ಆಶಯ ಹೊಂದಿದ್ದಾರೆ

ಆದರೆ, ವಿಪರ್ಯಾಸವೆಂದರೆ, ಹೊಸದಾಗಿ ಚುನಾಯಿತ ಕಾಂಗ್ರೆಸ್ ಸರ್ಕಾರದ ಅಡಿಯಲ್ಲಿ ತೆಲಂಗಾಣ ಪೊಲೀಸರ ವರದಿಯಿಂದ ಇಂತಹ ಘೋರ ಅನ್ಯಾಯ ನಡೆದಿದೆ. ವರದಿಗೆ ತನಿಖಾ ಅಧಿಕಾರಿಗಳಾದ ಮೂವರು ಎಸಿಪಿ ಗಳಿದ್ದರು. ಅದರಲ್ಲಿ ಶ್ರೀ ರಮಣ ರಾವ್ ಮತ್ತು ಶ್ರೀ ಎನ್.ಶ್ಯಾಮ್ ಪ್ರಸಾದ್ ರಾವ್ ಅವರು ವರದಿಯನ್ನು ಸಿದ್ಧಪಡಿಸಿದ ಪ್ರಮುಖರು. ಶ್ರೀ ರಮಣ ರಾವ್ ಮತ್ತು ಶ್ರೀ ಎನ್.ಶ್ಯಾಮ್ ಪ್ರಸಾದ್ ರಾವ್ ಇಬ್ಬರೂ ಭಾರತ್ ರಾಷ್ಟ್ರ ಸಮಿತಿ (ಬಿಆರ್ಎಸ್) ಆಡಳಿತದಲ್ಲಿ ಕೆಲಸ ಮಾಡಿದ್ದವರು. ಇವರಿಬ್ಬರೂ ಎಬಿವಿಪಿ ಮತ್ತು ಬಿಜೆಪಿಯ ಸುಳ್ಳು ನಿರೂಪಣೆಗಳಿಗೆ ಹತ್ತಿರದ ಸಂಪರ್ಕವನ್ನು ಹೊಂದಿರುವವರು. ವಾಸ್ತವವಾಗಿ, ಪೊಲೀಸ್ ಅಧಿಕಾರಿಗಳು ಸತ್ಯಗಳಿಗೆ ಅಂಟಿಕೊಳ್ಳಬೇಕು. ನ್ಯಾಯವನ್ನು ಒದಗಿಸಬೇಕು. ಇದೇ ನೆಲದ ಕಾನೂನಿನ ಪರಿಪಾಠ. ಆದರೆ, ಈ ಇಬ್ಬರು ಎಸಿಪಿ ಗಳು ಸುಳ್ಳು ಮತ್ತು ಕಾಲ್ಪನಿಕ ಕಥೆಗಳಲ್ಲಿ ತೇಲಿ ಹೋಗಿದ್ದಾರೆ. ಅಂದರೆ, ಆರೋಪಿಗಳ ಪರ ನಿಂತು, ದಲಿತರಿಗೆ ನ್ಯಾಯವನ್ನು ಹಳಿತಪ್ಪಿಸಿದ್ದಾರೆ. ಇದು ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ದೌರ್ಜನ್ಯಕ್ಕೆ ಸಮಾನವಾಗಿದೆ.

ಒಟ್ಟಾರೆಯಾಗಿ ಈ ಸಂದರ್ಭದಲ್ಲಿ, ನ್ಯಾಯವು ಮೇಲುಗೈ ಸಾಧಿಸುವಂತಾಗಬೇಕು. ರೋಹಿತ್ ತಾಯಿಯವರು ಮತ್ತು ವಿದ್ಯಾರ್ಥಿ ಸಂಘಟನೆಗಳ ಜಂಟಿ ಹೋರಾಟ ಸಮಿತಿಯು, ತೆಲಂಗಾಣದ ಕಾಂಗ್ರೆಸ್ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಇಬ್ಬರು ತನಿಖಾಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಲಾಗಿದೆ. ಈ ನಿಟ್ಟಿನಲ್ಲಿ, ತೆಲಂಗಾಣ ರಾಜ್ಯದ ಮುಖ್ಯ ಮಂತ್ರಿಯವರು, ಕಾಂಗ್ರೆಸ್ ಸರ್ಕಾರ ನಿಮ್ಮೊಂದಿಗೆ ಇದೆ. ಚುನಾವಣೆ ಮುಗಿದ ತಕ್ಷಣವೇ, ವರದಿಯ ಮರು ಪರಶೀಲನೆಗೆ ಒತ್ತು ನೀಡುತ್ತೇವೆ ಎಂದು ಭರವಸೆಯನ್ನು ನೀಡಿದ್ದಾರೆ ಎನ್ನಲಾಗಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ದಲಿತ ವಿದ್ಯಾರ್ಥಿ ಓರ್ವನ ಮೇಲೆ ಮಾತ್ರ ನಡೆದ ಸಾಂಸ್ಥಿಕ ಕೊಲೆ ಮಾತ್ರವಲ್ಲ. ದೇಶದಲ್ಲಿ ತಾಂಡವವಾಡುತ್ತಿರುವ ಜಾತಿ ತಾರತಮ್ಯವನ್ನು ನಿರ್ಮೂಲನೆ ಮಾಡುವ ಹೋರಾಟದ ಭಾಗವಾಗಿದೆ. ಈ ಪ್ರಕರಣದಲ್ಲಿ ನ್ಯಾಯಯುತ ಮತ್ತು ನಿಷ್ಪಕ್ಷಪಾತ ತನಿಖೆ ಆಗಬೇಕು. ಸತ್ಯಕ್ಕೆ ಜಯ ಸಿಗಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು. ಇಂತಹ ಅಮಾನುಷ ಜಾತಿ ತಾರತಮ್ಯ ಕೃತ್ಯಗಳಿಗೆ ತಡೆಗಟ್ಟಬೇಕು. ●

ರೋಹಿತ್ ವೇಮುಲಾ'ನ ಸಾಂಸ್ಥಿಕ ಕೊಲೆ ಘಟನಾವಳಿ

ರೋಹಿತ್ ವೇಮುಲಾ ಅವರು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ಉಜ್ವಲ ದಲಿತ ಸಂಶೋಧನಾ ವಿದ್ಯಾರ್ಥಿಯಾಗಿದ್ದರು. ಅವರು ಈ ವಿಶ್ವವಿದ್ಯಾನಿಲಯದಲ್ಲಿ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಎರಡರಲ್ಲೂ ಜೆಆರ್ಎಫ್ (ಜೂನಿಯರ್ ರಿಸರ್ಚ್ ಫೆಲೊಶಿಪ್) ಅನ್ನು ಸಾಧಿಸಿದ್ದರು. ಇದು ದಲಿತ ವಿದ್ಯಾರ್ಥಿ ಓರ್ವನ, ಬೌದ್ಧಿಕ ಸಾಮರ್ಥ್ಯವನ್ನು ಎತ್ತಿ ಹಿಡಿಯುವ ಅಪರೂಪದ ಶೈಕ್ಷಣಿಕ ಸಾಧನೆಯಾಗಿದೆ. ಆದರೆ, ಇವರು ದಲಿತನಾಗಿದ್ದೇ ಇವರ ಸಾಧನೆಗೆ ಅಡ್ಡಿ ತಂದೊಡ್ಡಿತು.

ರೋಹಿತ್ ಅಂಬೇಡ್ಕರ್ ಸ್ಟೂಡೆಂಟ್ ಅಸೋಸಿಯೇಷನ್ (ಎಎಸ್ಎ) ನಲ್ಲಿ ಸಕ್ರಿಯವಾಗಿದ್ದರು. ಪ್ರಬುದ್ಧ ಸಂಶೋದಕನಾಗಿ, ಅಂಬೇಡ್ಕರ್ ರನ್ನು ಆದರ್ಶ ಮಾಡಿಕೊಂಡಿದ್ದರು. ಸಂವಿಧಾನ ಆಶಯಗಳನ್ನು ಎತ್ತಿ ಹಿಡಿಯುವ ಜನಪರ ಸಾಮಾಜಿಕ–ರಾಜಕೀಯ ಹೋರಾಟಗಳಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.

ಇದನ್ನು ಸಹಿಸಲಾಗದ, ಆಗಿನ ಎಬಿವಿಪಿ ಅಧ್ಯಕ್ಷರಾಗಿದ್ದ ಎನ್ ಸುಶೀಲ್ ಕುಮಾರ್ ಎಂಬಾತ, ಅಂಬೇಡ್ಕರ್ ವಿದ್ಯಾರ್ಥಿಗಳ ಸಂಘದ (ಎಎಸ್ಎ) ಚಟುವಟಿಕೆಗಳನ್ನು ಹತ್ತಿಕ್ಕುವ ಸಲುವಾಗಿ, ಸದಸ್ಯರನ್ನು ಉಲ್ಲೇಖಿಸಿ ಫೇಸ್‌ಬುಕ್ ನಲ್ಲಿ "ಎಎಸ್ಎ ವಿದ್ಯಾರ್ಥಿಗಳು ಗುಂಡಾಗಳು, ಅವರು ಕ್ಯಾಂಪಸ್ ಆವರಣದಲ್ಲಿ ಗೂಂಡಾಗಿರಿಯ ಬಗ್ಗೆ ಮಾತನಾಡುತ್ತಿದ್ದಾರೆ. –ಇದು ಅವರ ಮೋಜಿನ ಮೇಳವಾಗಿದೆ ಎಂದು ಫೇಸ್‌ಬುಕ್ ನಲ್ಲಿ ಕ್ರೂರವಾದ ಕಾಮೆಂಟ್‌ಗಳನ್ನು ಪೋಸ್ಟ್ ಮಾಡಿದ್ದರು. ಆಗಸ್ಟ್ 3, 2015 ರಂದು, ಎಎಸ್ಎ ವಿಶ್ವವಿದ್ಯಾಲಯದ ಸದಸ್ಯರುಗಳು ಪೋಸ್ಟ್ ಅನ್ನು ತೆಗೆದುಹಾಕುವಂತೆ ಸುಶೀಲ್ ಕುಮಾರ್ ಅವರನ್ನು ಕೇಳಿಕೊಂಡರು. ಆದಾಗ್ಯೂ ಅವನು ತೆಗೆಯಲಿಲ್ಲ. ಆನಂತರ, ಅಲ್ಲಿನ ಕರ್ತವ್ಯ ಭದ್ರತಾ ಅಧಿಕಾರಿಗಳ ಜೊತೆ ಎಎಸ್ಎ ವಿದ್ಯಾರ್ಥಿಗಳು ಸಮಾಲೋಚನೆ ನಡೆಸಿದರು. ಈ ರೀತಿ ಸಾಮಾಜಿಕ ಮಾಧ್ಯಮದಲ್ಲಿ ಅವಹೇಳನಕಾರಿ, ಪ್ರಚೋಧನಕಾರಿ ಪೋಸ್ಟ್ ಮಾಡಲಾಗಿದೆ. ಇದರಿಂದ ಸಾರ್ವಜನಿಕರ ದೃಷ್ಟಿಯಲ್ಲಿ ನಮಗೆಲ್ಲಾ ನೇರವಾಗಿ ಅವಮಾನವಾಗಿದೆ ಎಂದು ಚರ್ಚಿಸಲಾಯಿತು. ಇದಾದ ನಂತರ, ಸುಶೀಲ್ ಕುಮಾರ್ ಸ್ವಯಂ ಪ್ರೇರಣೆಯಿಂದ ಪೋಸ್ಟ್ ಅನ್ನು ತೆಗೆದು ಹಾಕಿದರು ಮತ್ತು ಇದಕ್ಕಾಗಿ ಕ್ಷಮೆಯಾಚಿಸಿದರು.

ಇದಾದ ನಂತರ ಡ್ರಾಮ ಶುರುವಾಯಿತು. ಸುಶೀಲ್ ಕುಮಾರ್ ಅವರು ಖಾಸಗಿ ಆಸ್ಪತ್ರೆಗೆ (ಅರ್ಚನಾ ಆಸ್ಪತ್ರೆ) ದಾಖಲಾದರು. ಆದರೆ ಅವರು ಅಸ್ತಿತ್ವದಲ್ಲಿರುವ 'ಅಪೆಂಡಿಕ್ಸ್' ರೋಗದ ಸ್ಥಿತಿಯ ಕಾರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು ಎಂದು ನಂತರ ತಿಳಿದು ಬಂದಿದೆ.

ಅಂದಿನ ಎಂಎಲ್‌ಸಿ ರಾಮಚಂದರ್ ರಾವ್ ಅವರು ವಿಶ್ವವಿದ್ಯಾಲಯಕ್ಕೆ ನುಗ್ಗಿ ಧರಣಿ ನಡೆಸಿದ್ದರು. ಆ ಸಂದರ್ಭದಲ್ಲಿ, ಎಬಿವಿಪಿ ನಾಯಕ ಸುಶೀಲ್‌ಕುಮಾರ್ ಮೇಲೆ, ಎಎಸ್ಎ ದಲಿತ ಗುಂಡಾಗಳು ಹಲ್ಲೆ ನಡೆಸಿದ ಕಾರಣ, ನನಗೆ ಗಂಭೀರವಾದ ದಾಳಿಯಾಗಿದೆ ಎಂದು ಸುಶೀಲ್ ರವರು ಐದು ಎಎಸ್ಎ ದಲಿತ ಸದಸ್ಯರ ವಿರುದ್ಧ, ಗಚ್ಚಿಬೌಲಿ ಪೊಲಿಸ್ ಠಾಣೆಯಲ್ಲಿ ದೂರು ನೀಡಿದರು.

ಇದಾದ ನಂತರ ಎಬಿವಿಪಿ ಕಡೆಯಿಂದ ದಲಿತ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಡಳಿತದ ಮೇಲೆ ಒತ್ತಡ ಹೇರಲಾಯಿತು.

ಆಡಳಿತವು ಮೇಲೆ ತಿಳಿಸಲಾದ ಘಟನೆಯ ಸಂದರ್ಭದಲ್ಲಿ ಹಾಜರಿದ್ದ ಕರ್ತವ್ಯ ಭದ್ರತಾ ಅಧಿಕಾರಿ (ಡಿಎಸ್ಒ) ದಿಲೀಪ್ ಸಿಂಗ್ ಅವರಿಂದ ವರದಿಯನ್ನು ಕೇಳಿತು ಮತ್ತು ಸುಶೀಲ್ ಕುಮಾರ್ ಮೇಲಿನ ದಾಳಿಯ ಕುರಿತು ಮುಖ್ಯ ವೈದ್ಯಕೀಯ ಅಧಿಕಾರಿ (ಸಿಎಂಒ) ಡಾ.ಅನುಪಮಾ ರೋ ಅವರಿಂದ ವರದಿಯನ್ನು ಕೇಳಲಾಯಿತು. DSO ಮತ್ತು CMO ಇಬ್ಬರೂ ಕೂಡಾ, ಈ ಘಟನೆಯಲ್ಲಿ ಎಬಿವಿಪಿ ಯ ಆರೋಪದ ಆವೃತ್ತಿಯನ್ನು ದೃಢೀಕರಿಸಲು ನಿರಾಕರಿಸಿದವು ಮತ್ತು ಸುಶೀಲ್ ಕುಮಾರ್ ಮೇಲೆ ಯಾವುದೇ ದೈಹಿಕ ದಾಳಿಯಾಗಿರುವ ಪುರಾವೆಗಳಿಲ್ಲ ಎಂದು ವರದಿ ಮಾಡಲಾಯಿತು.

ವಿಶ್ವವಿದ್ಯಾನಿಲಯದ ಮುಖ್ಯ ವೈದ್ಯಾಧಿಕಾರಿ ಮತ್ತು ಅರ್ಚನಾ ಆಸ್ಪತ್ರೆಯ ವೈದ್ಯಕೀಯ ಅಧಿಕಾರಿ, ಅವರ ವರದಿಯಲ್ಲಿ, ಸುಶೀಲ್ ಕುಮಾರ್ ಅಪೆಂಡಿಸೈಟಿಸ್‌ಗೆ ಆಸ್ಪತ್ರೆಯಲ್ಲಿ, ಚಿಕಿತ್ಸೆ ಪಡೆದಿದ್ದಾರೆ. ಆಗಸ್ಟ್ 3ರ ಘಟನೆಗೂ, ಇದಕ್ಕೂ ಯಾವುದೇ ಸಂಭಂದವಿಲ್ಲ ಎಂದು ವರದಿ ಮಾಡಿದ್ದಾರೆ.

ಇದಾದ ನಂತರ, ಎಬಿವಿಪಿ ಕಡೆಯಿಂದ ಮತ್ತೊಮ್ಮೆ ವಿಶ್ವವಿದ್ಯಾನಿಲಯದಲ್ಲಿ "ರಾಷ್ಟ್ರವಿರೋಧಿ, ಜಾತಿವಾದಿ" ಚಟುವಟಿಕೆಗಳು ನಡೆದಿರುವ ಬಗ್ಗೆ ದೂರು ನೀಡಲಾಯಿತು. ಈ ಬಾರಿ ಸಂಚು ರೂಪಿಸಿತು. ಸಂಸದ ಬಂಡಾರು ದತ್ತಾತ್ರೇಯ ಅವರ ಮೂಲಕ ಎಬಿವಿಪಿ ಹಿಂಬಾಗಿಲ ಚಾನಲ್‌ಗಳನ್ನು ಬಳಸಿತು. ಕೇಂದ್ರದ ಮಾನವ ಅಭಿವೃದ್ದಿ ಸಂಪನ್ಮೂಲ ಸಚಿವರಿಗೆ ಪತ್ರ ಬರೆಯಿತು. ಕ್ಯಾಂಪಸ್ ನ ಆವರಣದೊಳಗೆ, ಎಎಸ್ಎ ಸದಸ್ಯರ ಜಾತಿವಾದಿ ಚಟುವಟಿಕೆಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಪತ್ರದಲ್ಲಿ ಒತ್ತಾಯಿಸಲಾಯಿತು. ಈ ಮಧ್ಯೆ ಅಪ್ಪಾ ರಾವ್ ಅವರನ್ನು ವಿಶ್ವವಿದ್ಯಾಲಯದ ಹೊಸ ಉಪಕುಲಪತಿಯನ್ನಾಗಿ ನೇಮಿಸಲಾಯಿತು. ಸಚಿವೆ ಸ್ಮೃತಿ ಇರಾನಿ ನೇತೃತ್ವದ ಮಾನವ ಅಭಿವೃದ್ದಿ ಸಂಪನ್ಮೂಲ ಸಚಿವಾಲಯವು ನೇರವಾಗಿ ಇದರಲ್ಲಿ ತೊಡಗಿಸಿಕೊಂಡಿತ್ತು. ಪ್ರಕರಣ ಹೊಸ ತಿರುವು ಪಡೆಯಲು ಇದು ಅನುವು ಮಾಡಿಕೊಟ್ಟಿತ್ತು.

ರೋಹಿತ್ ಮತ್ತು 'ಎಎಸ್ಎ'ಯ ಸಹ ದಲಿತ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ರಿಜಿಸ್ಟ್ರಾರ್ ಮತ್ತು ಉಪಕುಲಪತಿಗಳಿಗೆ ಸರಣಿ ಪತ್ರಗಳನ್ನು ಬರೆದು ಎಂ.ಎಚ್.ಆರ್.ಡಿ. ಸಚಿವಾಲಯದಿಂದ ಒತ್ತಡ ಹೇರಲಾಯಿತು. ಉಪಕುಲಪತಿ ಅಪ್ಪಾ ರಾವ್ ಅವರು ವಿಶ್ವವಿದ್ಯಾಲಯದ ಎಲ್ಲಾ ಕಾರ್ಯವಿಧಾನದ ನಿಯಮಗಳು ಮತ್ತು ಪೂರ್ವ ನಿದರ್ಶನಗಳನ್ನು ಉಲ್ಲಂಘಿಸಿರುವುದು ಇಲ್ಲಿ ಗಮನಿಸಬೇಕು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಹಾಸ್ಟೆಲ್‌ಗಳಿಂದ ರೋಹಿತ್ ವೇಮುಲಾ ಸೇರಿದಂತೆ ಐವರು ದಲಿತ ಸಂಶೋಧನಾ ವಿದ್ಯಾರ್ಥಿಗಳನ್ನು ಅಮಾನತುಗೊಳಿಸಲಾಯಿತು. ಇವರುಗಳ ಸ್ಕಾಲರ್ ಶಿಪ್ ಗಳನ್ನು ತಡೆಹಿಡಿಯಲಾಯಿತು. ಹಾಸ್ಟೆಲ್ ನಿಂದ ಹೊರ ದಬ್ಬಲಾಯಿತು. ಪ್ರವೇಶವನ್ನು ನಿರ್ಭಂದಿಸಲಾಯಿತು. ಹೀಗಾಗಿ, ರೋಹಿತ್ ಮತ್ತು ಹಲವಾರು ಎಎಸ್ಎ ಸದಸ್ಯರು ಬೀದಿಪಾಲಾದರು. ಕತ್ತಲೆಯಲ್ಲಿ ಕಂಗಾಲಾದರು, ಮಳೆಯಲ್ಲಿ ನೆನೆದರು, ಕೊರೆಯುವ ಚಳಿಯಲ್ಲಿ ರಾತ್ರಿ ಕಳೆದರು.ಈ ರೀತಿಯ, ಅವಮಾನ, ಕಿರುಕುಳಗಳು ದೌರ್ಜನ್ಯಗಳು ವಿಫರೀತವಾಗಿ ಅನುಭವಿಸಿದರು.

ರೋಹಿತ್ ಅವರು ಉಪಕುಲಪತಿಗಳಿಗೆ ಪತ್ರ ಬರೆದು ದಲಿತ ಸ್ವಾಭಿಮಾನ ಆಂದೋಲನದ ಸದಸ್ಯರಿಗೆ 'ಸುಲಭವಾಗಿ ಎಲ್ಲರಂತೆ ಪ್ರವೇಶ ಮತ್ತು ನಿರ್ಗಮನವಿಲ್ಲ' ಮತ್ತು 'ವಿದ್ಯಾರ್ಥಿಗಳಿಗೆ ಸ್ಕಾಲರ್ಶಿಪ್ ಮತ್ತು ಇನ್ನಿತರೆ ಹಾಸ್ಟೆಲ್ ಸೌಲಭ್ಯಗಳನ್ನು ವಿಶ್ವವಿದ್ಯಾಲಯ ನಿಲ್ಲಿಸಿದೆ. ಇವೆಲ್ಲವೂ, ನೀತಿನಿಯಮಗಳ ಉಲ್ಲಂಘನೆಯಾಗಿದೆ. ಆದ್ದರಿಂದ ತಕ್ಷಣವೇ, ಸರಿಪಡಿಸಬೇಕು ಎಂದು ಪತ್ರ ಬರೆದರು. ನಮಗೆ ವಿಶ್ವವಿದ್ಯಾಲಯದೊಳಗೆ, ಕಿರುಕುಳ, ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ಎಂದು ಧ್ವನಿ ಎತ್ತಿದರು. ಪ್ರತಿಭಟನೆ ನಡೆಸಿ ಧರಣಿ ಕುಳಿತರು. ಇದರಿಂದ ಬೇಸತ್ತು ಹೋದ ರೋಹಿತ್ ಮನಸ್ಥಿತಿ ಹದಗೆಟ್ಟಿತ್ತು. ವಿಶ್ವವಿದ್ಯಾನಿಲವು ಅವರನ್ನು ಸ್ವಯಂ–ಹಾನಿ ಮಾಡಿಕೊಳ್ಳದಂತೆ ರಕ್ಷಿಸಲು ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಆದರೆ ಉಪಕುಲಪತಿಗಳು ಉದ್ದೇಶಪೂರ್ವಕವಾಗಿಯೇ ರೋಹಿತ್ ರವರ ಅಹವಾಲು ಪತ್ರವನ್ನು ನಿರ್ಲಕ್ಷಿಸಿದ್ದರು.

ರೋಹಿತ್ ಮತ್ತು ಎಎಸ್ಎ ಯ ಇತರ ಸದಸ್ಯರುಗಳು, ಎಬಿವಿಪಿ, ಆಡಳಿತ ಮತ್ತು ಇಡೀ ಪ್ರಭುತ್ವದ ಜಾತಿವಾದಿ ಶಕ್ತಿಯನ್ನು ವಿರೋಧಿಸಿ ವೀರಾವೇಶದಿಂದ ಹೋರಾಡಿದರು. ರೋಸಿಹೋದ ರೋಹಿತ್ ವೇಮುಲಾ ರನ್ನು ಈ ಪರಿಸ್ಥಿತಿ ಜನವರಿ 17, 2016 ರಂದು ಆತ್ಮಹತ್ಯೆಯತ್ತ ತಳ್ಳಿತು. ಅದ್ಭುತವಾದ ಸಂಶೋಧಕನನ್ನು ಈ ರೀತಿ ಕಳೆದು ಕೊಳ್ಳುವಂತಾಯಿತು. ಪ್ರತಿ ಕ್ಷೇತ್ರದಲ್ಲೂ, ಅಧ್ಯಯನದಲ್ಲಿಯೂ, ರಾಜಕೀಯ ಹೋರಾಟಗಳಲ್ಲಿಯೂ ಮುಂಚೂಣಿಯಲ್ಲಿದ್ದರು ರೋಹಿತ್ ವೆಮುಲಾ. ಇದು ನಿಜವಾಗಿಯೂ ಸಾಂಸ್ಥಿಕ ಹತ್ಯೆಯಾಗಿತ್ತು.

ವೇಮುಲಾ ಅವರ ಸಾಂಸ್ಥಿಕ ಹತ್ಯೆ ಮತ್ತು ಅವರ ಕಟುವಾದ ಅಂತಿಮ ಪತ್ರಕ್ಕೆ ಇಡೀ ದೇಶದ ವಿದ್ಯಾರ್ಥಿಗಳು, ಸಂವೇದನಾಶೀಲ ನಾಗರಿಕರು ಸ್ಪಂದಿಸಿದರು ಈ ಸಾಂಸ್ಥಿಕ ಹತ್ಯೆಯನ್ನು ಪ್ರತಿಭಟಿಸಲು ಮತ್ತು ರೋಹಿತ್ ವೇಮುಲಾಗೆ ನ್ಯಾಯಕ್ಕಾಗಿ ಅವರು ಬೀದಿಗಿಳಿದು ಪ್ರತಿಭಟಿಸಿದರು. ಬಿಜೆಪಿ ಮತ್ತು ಎಬಿವಿಪಿ ಯಾವುದೇ ಪಶ್ಚಾತ್ತಾಪವಿಲ್ಲದೆ, ಮೃತರ ಮೇಲೆ ಹಲ್ಲೆ ನಡೆಸಿತು ಮತ್ತು ರೋಹಿತ್ ವೇಮುಲನ ದಲಿತ ಗುರುತಿನ ಅವಹೇಳನ ಮಾಡಿತು. ರೋಹಿತ್ ಮತ್ತು ಅವರ ತಾಯಿ ತಮ್ಮ ಖಾಸಗಿ ಜೀವನವನ್ನು ತೆರೆದಿಡುವ ಕ್ರೌರ್ಯ ತೋರಿದರು. ರೋಹಿತ್ ವೇಮುಲಾ ಅವರ ಜೀವನ ಮತ್ತು ಹೋರಾಟವನ್ನು ಅಮಾನ್ಯಗೊಳಿಸಲು ಪ್ರಯತ್ನಿಸಿದರು. ●


NEW No. MAG(3)/NPP/205/2021-2022
JANASHAKTHI KANNADA VARA PATRIKE May 13-19, 2024 Price: Rs. 10/- Date of Publication: 10 May 2024 RNI No. KARKAN /2006/17926 Posted on 13-05-2024
Posted at BG PSO, BG - 560026 **Posted at Periodical Rate -** Rs. 2

"ಸಾಕ್ಷಾದಾರಗಳ ಕೊರತೆ"ಯಿಂದ ಪ್ರಕರಣವನ್ನು ಮುಚ್ಚಲಾಗುತ್ತಿದೆ ಎಂದು ಎಂಟು ವರ್ಷಗಳ ನಂತರ, ವೇಮುಲಾ ಪ್ರಕರಣದ ತನಿಖಾಧಿಕಾರಿಯು ಮಾರ್ಚ್ 21 ರಂದು, ನ್ಯಾಯಾಲಯಕ್ಕೆ ತನ್ನ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ. ಇದರಿಂದ ಈ ಪ್ರಕರಣ ಮತ್ತೊಮ್ಮೆ ಚರ್ಚೆಗೆ ಗ್ರಾಸವಾಗಿದೆ. ರೋಹಿತ್ ದಲಿತನಲ್ಲ ಎಂಬ ನಿರೂಪಣೆಯನ್ನು ಸ್ಥಾಪಿಸಲು ವರದಿಯು ಅಸಾಧಾರಣವಾಗಿ ಪ್ರಯತ್ನಿಸಿದೆ. ಪೊಲೀಸ್ ವರದಿಯಲ್ಲಿ ಅರ್ಧದಷ್ಟು ಭಾಗವನ್ನು ಅದಕ್ಕೆ ವ್ಯಯಿಸಲಾಗಿದೆ. ವರದಿಯ ಅತ್ಯಂತ ಕ್ರೂರ ಭಾಗವೆಂದರೆ ಅದು ರೋಹಿತ್ ಆತ್ಮಹತ್ಯೆಗೆ ವಾಸ್ತವ ಕಾರಣಗಳನ್ನು ಹುಡುಕದೆ, ಕೇವಲ ಊಹಿಸಲು ಮಾತ್ರ ಪ್ರಯತ್ನಿಸುತ್ತದೆ. ಬಿಜೆಪಿ ನಾಯಕರು ಮತ್ತು ಉಪಕುಲಪತಿಗಳನ್ನು ಸಂಪೂರ್ಣವಾಗಿ ಆರೋಪ–ಮುಕ್ತಗೊಳಿಸಿದ ವರದಿಯು ರೋಹಿತ್' ನ ಸಾವಿನ ಹೊಣೆಯನ್ನು ರೋಹಿತ್‌ನ ಮೇಲೆಯೇ ಹೊರಿಸಿದೆ.

ವೇಮುಲಾ ಆತ್ಮಹತ್ಯೆ ಸಾಂಸ್ಥಿಕ ಹತ್ಯೆಯಲ್ಲ ಎಂದ ಪೊಲೀಸ್ ಅಂತಿಮ ವರದಿ

ನಾಗರಾಜ ನಂಜುಂಡಯ್ಯ

ರೋಹಿತ್ ವೇಮುಲಾನ ಸಾಂಸ್ಥಿಕ ಹತ್ಯೆ ನಡೆದು 8 ವರ್ಷಗಳಾಯಿತು. ಜನವರಿ, 17, 2016 ಅಂದು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಕ್ಯಾಂಪಸ್ ಒಳಗೆ ರೋಹಿತ್ ವೆಮುಲಾ ಟಿಪ್ಪಣಿ ಬರೆದು ಆತ್ಮಹತ್ಯೆ ಮಾಡಿಕೊಂಡರು. ವಿಶ್ವವಿದ್ಯಾಲಯದ ಆಡಳಿತ, ಎಬಿವಿಪಿ ರೂಪಿಸಿದ ಜಾತಿ ತಾರತಮ್ಯದ ಒಳಸಂಚಿಗೆ, ಹಾಗೂ ಇದರೊಂದಿಗೆ ಕೇಂದ್ರ ಮಾನವ ಅಭಿವೃದ್ಧಿ ಸಂಪನ್ಮೂಲ ಸಚಿವರ ಸಂಪೂರ್ಣ ಸಹಕಾರದೊಂದಿಗೆ, ಉಂಟಾದ ಕಿರುಕುಳ, ಅವಮಾನ, ತಾರತಮ್ಯದ ಆರೋಪಗಳನ್ನು ಸಹಿಸಲಾರದೆ, ರೋಹಿತ್ ಆತ್ಮಹತ್ಯೆ ಮಾಡಿಕೊಂಡಿದ್ದ.



ಕಳೆದ 8 ವರ್ಷಗಳಿಂದ, ಇದು ಆತ್ಮಹತ್ಯೆಯಲ್ಲ, ಉನ್ನತ ಶಿಕ್ಷಣ ಸಂಸ್ಥೆ ಗಳಲ್ಲಿ ದಲಿತರ ಮೇಲೆ ನಡೆಯುತ್ತಿರುವ ಸಾಂಸ್ಥಿಕ ಕೊಲೆಯ ಪ್ರಕರಣ ಎಂಬ ಕೂಗು ದೇಶಾದ್ಯಂತ ಮಿಂಚಿನಂತೆ ಪಸರಿಸಿತು. ನ್ಯಾಯಕ್ಕಾಗಿ ರಾಷ್ಟ್ರವ್ಯಾಪಿ ಚಳುವಳಿ ನಡೆಯಿತು.

ಬಲಿಪಶುವನ್ನೇ ಆರೋಪಿ ಮಾಡುವ ಆಘಾತಕಾರಿ ಬಿ ರಿಪೋರ್ಟ್

ಈ ಎಂಟು ವರ್ಷಗಳ ನಂತರ, ವೇಮುಲಾ ಪ್ರಕರಣದ ತನಿಖಾಧಿಕಾರಿ ಮಾರ್ಚ್ 21 ರಂದು, ನ್ಯಾಯಾಲಯಕ್ಕೆ ತನ್ನ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ. "ಸಾಕ್ಷಾದಾರಗಳ ಕೊರತೆ"ಯಿಂದ ಪ್ರಕರಣವನ್ನು ಮುಚ್ಚಲಾಗುತ್ತಿದೆ ಎಂದು ಈ ಅಂತಿಮ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದರಿಂದ ಈ ಪ್ರಕರಣ ಮತ್ತೊಮ್ಮೆ ಚರ್ಚೆಗೆ ಗ್ರಾಸವಾಗಿದೆ.

ವರದಿಯ ಆಘಾತಕಾರಿ ಅಂಶವೆಂದರೆ, "ರೋಹಿತ್ ವೆಮುಲಾ "ದಲಿತರಲ್ಲ, ತನ್ನ ನಿಜವಾದ ಜಾತಿಯ ಗುರುತು ಬಯಲಾಗುವ ಭಯದಿಂದ ಆತ್ಮಹತ್ಯೆಗೆ ಶರಣಾಗಿದ್ದಾರೆ" ಎಂದು ವರದಿ ಹೇಳಿದೆ. ಆತ್ಮಹತ್ಯೆಗೆ ವಿಶ್ವವಿದ್ಯಾಲಯದ ಆಡಳಿತ ವರ್ಗ ಅಥವಾ ಉಪಕುಲಪತಿಗಳಾಗಿದ್ದ, ಪ್ರೊ.ಅಪ್ಪಾ ರಾವ್ ಪೊಡಿಲೆ ಸೇರಿದಂತೆ, ಯಾವುದೇ ರಾಜಕೀಯ ವ್ಯಕ್ತಿಗಳ ಪಾತ್ರ ಏನೂ ಇಲ್ಲ ಎಂದು ಹೇಳಲಾಗಿದೆ.

ವೆಮುಲಾ ಅವರ ಆತ್ಮಹತ್ಯಾ ಟಿಪ್ಪಣಿಯು ಸಹಾ, ಯಾವುದೇ ಬಾಹ್ಯ ಅಂಶಗಳನ್ನು ಅಥವಾ ರಾಜಕೀಯ ಪ್ರಭಾವವನ್ನು ದೂಷಿಸಿಲ್ಲ, ಬದಲಿಗೆ ತಮ್ಮ ಹೋರಾಟಗಳು ಮತ್ತು ವೈಯಕ್ತಿಕ ಜೀವನದ ಜಿಜ್ಞಾಸೆಯ ಅತೃಪ್ತಿಯನ್ನೇ ಸೂಚಿಸುತ್ತದೆ. ಆದಾಗ್ಯೂ, ಅವರ ಶೈಕ್ಷಣಿಕ ಸಾಧನೆಯ ಕುರಿತಂತೆ ವರದಿಯು ಉಲ್ಲೇಖಿಸಿದ್ದರೂ, ವೆಮುಲಾ ತನ್ನ ದಲಿತೇತರ ಗುರುತು ಮತ್ತು ಸ್ವಾಭಿಮಾನ–ಸ್ಥಾನಮಾನ, ಪರಿಶಿಷ್ಟ ಜಾತಿ ಪ್ರಮಾಣ ಪತ್ರದ ಸಿಂಧುತ್ವದ ಸಾಭೀತು, ಇವುಗಳ ಒತ್ತಡಕ್ಕೆ ಸಿಕ್ಕಿ ಆತ್ಮಹತ್ಯೆ ಮಾಡಿ ಕೊಂಡಿದ್ದಾರೆ ಎಂದಿದೆ ವರದಿ.

ಆರೋಪಿಗಳಿಗೆ ಕ್ಲೀನ್ ಚಿಟ್

ಇದರಿಂದ ಸಾಂಸ್ಥಿಕ ಕೊಲೆ ಎಂಬ ವಿವಾದಕ್ಕೆ ತೆರೆ ಎಳೆಯಲಾಗಿದೆ. ಅಂದಿನ ಉಪಕುಲಪತಿ ಅಪ್ಪಾ ರಾವ್ ಪೊಡಿಲೆ, ಬಿಜೆಪಿ ನಾಯಕರಾದ ಸಂಸದರಾದ ಬಂಡಾರು ದತ್ತಾತ್ರೇಯ ಅವರನ್ನು ಸಂಪೂರ್ಣವಾಗಿ ಈ ಪ್ರಕರಣದಿಂದ ಮುಕ್ತಗೊಳಿಸಲಾಗಿದೆ. ಸ್ಮೃತಿ ಇರಾನಿ ಮತ್ತು ಎನ್ ರಾಮಚಂದ್ರ ರಾವ್ ಮತ್ತು ಎಬಿವಿಪಿ ನಾಯಕ ಸುಶೀಲ್ ಕುಮಾರ್ ಅವರು ನಡೆಸಿದ ಬಹಿರಂಗವಾದ ಸಂಚುಗಳು ಗೊತ್ತಿದ್ದರೂ, ಅವರ ಮೇಲೆ ರೋಹಿತ್ ವೇಮುಲಾ ಹತ್ಯೆಯ ಯಾವುದೇ ಹೊಣೆಗಾರಿಕೆಯನ್ನು ವರದಿ ಪ್ರಸ್ತಾಪಿಸಿಲ್ಲ.

ಬಿಜೆಪಿ ಮತ್ತು ಎಬಿವಿಪಿ ನಿರ್ಮಿಸಿದ ನಿರೂಪಣೆಗಳ ಆಧಾರದ ಮೇಲೆಯೇ ಈ ವರದಿಯು ಅಂತಿಮವಾಗಿ ತಯಾರಾಗಿದೆ. ರೋಹಿತ್ ಆತ್ಮಹತ್ಯೆ ಸಾಂಸ್ಥಿಕ ಹತ್ಯೆಯಲ್ಲ ಎಂದು ಒದಗಿಸಿರುವ ಪುರಾವೆಗಳ ಹಿಂದಿನ ಕೈಗಳು ಯಾವುದೆಂದು ಸ್ಪಷ್ಟಗೊಂಡಿದೆ. ಹಾಗಾಗಿ, ನ್ಯಾಯಕ್ಕಾಗಿ ಎಂಟು ವರ್ಷಗಳು ನಡೆಸಿದ ಹೋರಾಟವನ್ನು ಅಪಹಾಸ್ಯ ಮಾಡಿರುವ ವರದಿಯನ್ನು ತಿರಸ್ಕರಿಸಬೇಕಾಗಿದೆ. ಇದರಲ್ಲಿ ಉದ್ದೇಶಪೂರ್ವಕವಾಗಿಯೇ, ಸುಳ್ಳು ಮಾಹಿತಿಗಳ ಸರಮಾಲೆಯನ್ನು ಪೋಣಿಸಲಾಗಿದೆ. ಆದ್ದರಿಂದ, ಈ ತನಿಖಾ ವರದಿಯ ಮರುಪರಿಶೀಲನೆಗೆ ಆಗ್ರಹಿಸಬೇಕಾಗಿದೆ.

ಪೊಲೀಸ್ ವರದಿಯಲ್ಲಿ ವ್ಯಾಪಕವಾಗಿರುವ ಸುಳ್ಳುಗಳನ್ನು ಅರ್ಥಮಾಡಿಕೊಳ್ಳಲು ರೋಹಿತ್ ವೇಮುಲನ ಸಾಂಸ್ಥಿಕ ಹತ್ಯೆಗೆ ಕಾರಣವಾದ ಘಟನಾವಳಿಯನ್ನು ಬಾಕ್ಸ್ ನಲ್ಲಿ ನೋಡಬಹುದು

ಇದೀಗ ಅಂತಿಮ ತನಿಖಾ ವರದಿ ಬಂದಿದೆ. ರೋಹಿತ್‌ನ ಸಾಂಸ್ಥಿಕ ಹತ್ಯೆಯ ಸುತ್ತ ಬಿಜೆಪಿ–ಎಬಿವಿಪಿ ನಿರೂಪಣೆಯ ನಿಖರವಾದ ಪುನರಾವರ್ತನೆಯನ್ನು ಈ ವರದಿಯಲ್ಲಿ ನೀಡಲಾಗಿದೆ. ಪುಟ ಒಂದರಿಂದ ಪೊಲೀಸ್ ವರದಿಯು ರೋಹಿತ್ ಮತ್ತು ಅವನ ಸ್ನೇಹಿತರನ್ನು 'ಹಿಂಸಾತ್ಮಕ ಪ್ರವೃತ್ತಿಗಳಿಗೆ ಗುರಿಯಾಗುವ ಅಶಿಸ್ತಿನ ಗುಂಪು' ಎಂದು ಚಿತ್ರಿಸಲು ಉತ್ಸುಕವಾಗಿದೆ. ಈ ಕಟ್ಟು ಕಥೆಯ ವಿರುದ್ಧ ಇರುವ ಹಲವಾರು ಪುರಾವೆಗಳನ್ನು ನಿರ್ಲಕ್ಷಿಸಿದೆ.

ಘಟನೆ ನಡೆದ ಸ್ಥಳದಲ್ಲಿ ವಿಶ್ವವಿದ್ಯಾನಿಲಯದ ಏಕೈಕ ಅಧಿಕಾರಿಯಾಗಿದ್ದ ಡ್ಯೂಟಿ ಸೆಕ್ಯುರಿಟಿ ಅಧಿಕಾರಿಯ ವರದಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ, ಅವರು ಸುಶೀಲ್ ಕುಮಾರ್ ಆರೋಪಿಸಿದಂತೆ ಆಗಸ್ಟ್ 3ರ ಘಟನೆಯ ರಾತ್ರಿ ಯಾವುದೇ ದೈಹಿಕ ಹಿಂಸೆ ನಡೆದಿಲ್ಲ ಎಂದು ನಿಸ್ಸಂದಿಗ್ಧವಾಗಿ ಪ್ರತಿಪಾದಿಸಿದ್ದಾರೆ. ಎರಡನೆಯದಾಗಿ, ತೆಲಂಗಾಣ ಹೈಕೋರ್ಟ್‌ಗೆ ವಿಶ್ವವಿದ್ಯಾನಿಲಯದ ಆಗಿನ ರಿಜಿಸ್ಟ್ರಾರ್ ಸಲ್ಲಿಸಿದ ಪ್ರತಿವಾದ ಅಫಿಡವಿಟ್ ಅನ್ನು ಸಹ ಅದು ನಿರ್ಲಕ್ಷಿಸುತ್ತದೆ. ಅರ್ಚನಾ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಚೆನ್ನಾರೆಡ್ಡಿ ಅವರು ನೀಡಿದ ವೈದ್ಯಕೀಯ ಪ್ರಮಾಣಪತ್ರವನ್ನು ವರದಿಯು ನಿರ್ಲಕ್ಷಿಸಿದೆ. ಇದು ಅವರು ಅಪೆಂಡಿಸೈಟಿಸ್ ಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ ಮತ್ತು ಅದು ಯಾವುದೇ ಹಲ್ಲೆಯ ಫಲಿತಾಂಶವಲ್ಲ ಎಂದು ದೃಢೀಕರಿಸುತ್ತದೆ. ಇದು ಹೈದರಾಬಾದ್ ವಿಶ್ವವಿದ್ಯಾನಿಲಯದ ಮುಖ್ಯ ವೈದ್ಯಕೀಯ ಅಧಿಕಾರಿಯ ಸಾಕ್ಷ್ಯವನ್ನು ಸಹ ನಿರ್ಲಕ್ಷಿಸುತ್ತದೆ, ಅವರು ಅದನ್ನೇ ದೃಢೀಕರಿಸುತ್ತಾರೆ.

ಸುಶೀಲ್ ಕುಮಾರ್ ಅವರ ನಿರೂಪಣೆಯನ್ನು ಮಾತ್ರ ವರದಿ ಮಾಡಲು ಪೊಲೀಸರು ನಿರ್ಧರಿಸಿದ್ದಾರೆ ಮತ್ತು ಇದಕ್ಕೆ ವಿರುದ್ಧವಾದ ಎಲ್ಲಾ ಪುರಾವೆಗಳನ್ನು ನಿರ್ಲಕ್ಷಿಸಿದ್ದಾರೆ. ಎಎಸ್ಎ ಸದಸ್ಯರಿಂದ ಹಿಂಸಾಚಾರದ ನಿದರ್ಶನಗಳನ್ನು ರಚಿಸುವಾಗ, ಅಂದಿನ ಬಿಜೆಪಿ ಎಂಎಲ್‌ಸಿ ರಾಮಚಂದ್ರ ರಾವ್ ಅವರು ಕ್ಯಾಂಪಸ್‌ಗೆ ಅತಿಕ್ರಮ ಪ್ರವೇಶ ಮಾಡಿ ದಲಿತ ವಿದ್ಯಾರ್ಥಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಧರಣಿ ನಡೆಸಿದ್ದರು ಎಂದು ಉಲ್ಲೇಖಿಸಲು ವರದಿ ವಿಫಲವಾಗಿದೆ. ಹೀಗಾಗಿ ಎಬಿವಿಪಿ ನಿರೂಪಣೆಯನ್ನು ಬೆಂಬಲಿಸಲು ರೋಹಿತ್ ಮತ್ತು ಅವನ ಸ್ನೇಹಿತರನ್ನು ಹಿಂಸಾತ್ಮಕ ಅಶಿಸ್ತಿನ ದೇಶ–ವಿರೋಧಿ ಜನಸಮೂಹವೆಂದು ಪ್ರಯತ್ನಿಸುವ ಮತ್ತು ಕೆರಳಿಸುವ ವರದಿಯ ಉದ್ದೇಶವು ಸ್ಪಷ್ಟವಾಗಿದೆ.

ದತ್ತಾತ್ರೇಯ, ಅಪ್ಪಾ ರಾವ್ ರಕ್ಷಣೆ

ವೆಮುಲಾ ದಲಿತ ಅಲ್ಲವೆಂಬ ಹುಸಿ ಆರೋಪ

ಪೊಲೀಸ್ ವರದಿಯು ಆಗಿನ ಕಾರ್ಮಿಕ ಸಚಿವ ಬಂಡಾರು ದತ್ತಾತ್ರೇಯ ಅವರನ್ನು ಅವರ ಕ್ರಮಗಳ ಪರಿಣಾಮಗಳಿಂದ ರಕ್ಷಿಸಲು ಪ್ರಯತ್ನಿಸುತ್ತದೆ. ದತ್ತಾತ್ರೇಯ ಅವರು ಹೈದರಾಬಾದ್ ವಿಶ್ವವಿದ್ಯಾಲಯದ ದಲಿತ ವಿದ್ಯಾರ್ಥಿಗಳ ದೇಶವಿರೋಧಿ ಚಟುವಟಿಕೆಗಳಿಗಾಗಿ, ಎಬಿವಿಪಿ ಅಧ್ಯಕ್ಷ ಸುಶೀಲ್ ಕುಮಾರ್ ಅವರ ಮೇಲೆ (ಹುಸಿ) ದಾಳಿಗಾಗಿ ಕ್ರಮ ಕೈಗೊಳ್ಳುವಂತೆ MHRD ಮತ್ತು ಉಪಕುಲಪತಿಗಳಿಗೆ ಹಲವು ಅಧಿಕೃತ ಅರೆ–ಅಧಿಕೃತ ಪತ್ರಗಳನ್ನು ಬರೆಯುವ ಮೂಲಕ ನಿರಂತರವಾಗಿ ಒತ್ತಡ ಹೇರಿದ್ದರು. ಇದರಿಂದಾಗಿ ಉಪಕುಲಪತಿ ಅಪ್ಪಾ ರಾವ್, ವಿ.ವಿ. ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ದಲಿತ ವಿದ್ಯಾರ್ಥಿಗಳ ಮೇಲೆ ಕಾನೂನುಬಾಹಿರ ಶಿಕ್ಷೆಯ ಕುರಿತ ನಿರ್ಣಯದ ದಾಖಲೆಗಳು ಮುಂತಾದ ಪುರಾವೆಗಳನ್ನು ನಿರ್ಲಕ್ಷಿಸಿದೆ. ಈ ಪ್ರಕರಣದ ಮೂಲಕ ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಮೊದಲ ಬಾರಿಗೆ ಎಲ್ಲಾ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಲಾಗಿದೆ.

ರೋಹಿತ್ ದಲಿತನಲ್ಲ ಎಂಬ ನಿರೂಪಣೆಯನ್ನು ಸ್ಥಾಪಿಸಲು ವರದಿಯು ಅಸಾಧಾರಣವಾಗಿ ಪ್ರಯತ್ನಿಸಿದೆ. ಪೊಲೀಸ್ ವರದಿಯಲ್ಲಿ ಅರ್ಧದಷ್ಟು ಭಾಗವನ್ನು ಅದಕ್ಕೆ ವ್ಯಯಿಸಲಾಗಿದೆ. ಇದನ್ನು ಇತರ ಯಾವುದೇ ದಾಖಲೆಗಳನ್ನು ಪ್ರಸ್ತುತ ಪಡಿಸದೆ ಬರಿಯ ಜಿಲ್ಲಾಧಿಕಾರಿಗಳ ಹೇಳಿಕೆಯ ಮೇಲೆ ಆಧಾರಿತವಾಗಿದೆ.

ವರದಿಯ ಅತ್ಯಂತ ಕ್ರೂರ ಭಾಗವೆಂದರೆ ಅದು ರೋಹಿತ್ ಆತ್ಮಹತ್ಯೆಗೆ ವಾಸ್ತವ ಕಾರಣಗಳನ್ನು ಹುಡುಕದೆ, ಕೇವಲ ಊಹಿಸಲು ಮಾತ್ರ ಪ್ರಯತ್ನಿಸುತ್ತದೆ. ಬಿಜೆಪಿ ನಾಯಕರು ಮತ್ತು ಉಪಕುಲಪತಿಗಳನ್ನು ಸಂಪೂರ್ಣವಾಗಿ ಆರೋಪ–ಮುಕ್ತಗೊಳಿಸಿದ ವರದಿಯು ರೋಹಿತ್ ನ ಸಾವಿನ ಹೊಣೆಯನ್ನು ರೋಹಿತ್‌ನ ಮೇಲೆಯೇ ಹೊರಿಸಿದೆ. ರೋಹಿತ್ ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದರು, ತೀವ್ರ ಖಿನ್ನತೆ ಮತ್ತು ನಿರಾಶೆಯನ್ನು ಹೊಂದಿದ್ದರು ಎಂದು ವರದಿ ವಾದಿಸುತ್ತದೆ. ರೋಹಿತ್ ತನ್ನ ಪಿಎಚ್‌ಡಿ ಯನ್ನು ಒಂದು ವಿಭಾಗದಲ್ಲಿ ನಿಲ್ಲಿಸಿ ಮತ್ತೊಂದು ವಿಭಾಗದ ಪಿಎಚ್‌ಡಿ ಗೆ ಸೇರಿದ್ದರು ಆದರೆ ಅವರ 'ಶೈಕ್ಷಣಿಕೇತರ ಚಟುವಟಿಕೆಗಳಿಂದ' ಹೆಚ್ಚಿನ ಪ್ರಗತಿ ಸಾಧಿಸಲಿಲ್ಲ ಎಂದು ಅವರು **ಪುಟ 15 ಕ್ಕೆ**

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**